26 April 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಜೇನಿನಲ್ಲಿ ವಿಷ ಬೆರತರು, ವಿಷಯದಲ್ಲಿ ಜೇನು ಬೆರೆತರು ಒಂದೇ ಪರಿಣಾಮ,ಜೇನು ವಿಷಯವಾಗುತ್ತದೆ! ಅದೇ ರೀತಿ ಗೆಳೆಯರ ಸಂಗ ಸಹವಾಸ!

-ಸ್ನೇಹಾ ಆನಂದ್

info.varthaman@gmail.com



ಭೂಗತ ವಿದ್ಯುತ್ ಕೇಬಲ್ ಅಳವಡಿಕೆ: ಶಾಸಕ ಇಕ್ಬಾಲ್ ಹುಸೇನ್ ಭರವಸೆ — ಪುಟ ಸಂ. 2



ಡಾ.ರಾಜ್‌ಕುಮಾರ್ ಕೊಡುಗೆ ಅಪಾರ: ಸಿ. ಪುಟ್ಟರಂಗಶೆಟ್ಟಿ ಅಭಿಮತ — ಪುಟ ಸಂ. 3



ಎಸ್‌ಎಸ್‌ಎಲ್‌ಸಿ: ಎಚ್.ಡಿ.ಕೋಟೆ ಜಿಲ್ಲೆಗೆ ಮೊದಲು — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 156 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಇನ್ನೂ ನಮ್ಮ ತಾಳ್ಮೆ ಪರೀಕ್ಷೆ ಬೇಡ: ಮೇ 10ರೊಳಗೆ ನಿರ್ಧರಿಸಿ


# ಹೈಗೆ ಡಿಕೆಶಿ 'ಡೆಡ್‌ಲೈನ್ ಫಿಕ್ಸ್'

## ಶಾಸಕರ ಅಸಮಾಧಾನ ಸ್ಫೋಟಗೊಂಡರೆ ನಾವು ಜವಾಬ್ದಾರಿಯಲ್ಲ!

ನವದೆಹಲಿ: ಅಧಿಕಾರ ಹಸ್ತಾಂತರಕ್ಕೆ ಒಪ್ಪಂದ ದಂತೆ 2.5 ವರ್ಷ. ಆದರೆ, ಈಗ 3 ವರ್ಷ ಆಗುತ್ತಿದೆ. ನಮ್ಮ ತಾಳ್ಮೆ ಪರೀಕ್ಷೆ ಮಾಡುವುದು ಬೇಡ. ಪಕ್ಷ ನಿಷ್ಠೆಯನ್ನು ಇನ್ನೂ ಪರೀಕ್ಷೆ ಮಾಡು ವುದಾದರೆ ಮಾಡಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೈಕಮಾಂಡ್ ಜೊತೆ ಖಡಕ್ ಆಗಿ ಮಾತನಾಡಿದ್ದಾರೆ ಎನ್ನಲಾಗಿದೆ.

ಪವರ್ ಶೇರಿಂಗ್ ವಿಚಾರದಲ್ಲಿ ಹೈಕ ಮಾಂಡ್‌ಗೆ ಷರತ್ತು ವಿಧಿಸಿ ಡಿಸಿಎಂ ಡಿ.ಕೆ. ಶಿವಕುಮಾರ್ ಮತ್ತು ಡಿ.ಕೆ.ಸುರೇಶ್ ಅವರು ಡೆಡ್‌ಲೈನ್ ನೀಡಿ ದ್ದಾರೆ ಎನ್ನಲಾಗಿದೆ. ನಮ್ಮಿಂದ ಪಕ್ಷ ವಿರೋಧಿ ನಡೆಯಂತೂ ಖಂಡಿತ ಇಲ್ಲ. ಆದರೆ ಮೇ 10 ರೊಳಗೆ ಏನು ಎಂಬುದನ್ನು ನೀವೇ ಬಹಿರಂಗಪಡಿಸಿ ಬಿಡಿ. ಈ ಗಡುವಿ ನೊಳಗೆ ನಿರ್ಧಾರ ಹೊರಬೀಳದೆ ಶಾಸಕರಲ್ಲಿ ಅಸಮಾ ಧಾನ ಸ್ಫೋಟಗೊಂಡರೆ ಅಥವಾ ಗೊಂದಲ ಉಂಟಾದರೆ ಅದಕ್ಕೆ ನನ್ನನ್ನು ಜವಾಬ್ದಾರಿಯನ್ನಾಗಿ ಮಾಡ ಬೇಡಿ ಎಂದು ಡಿಸಿಎಂ ಹೈಕಮಾಂಡ್ ನಾಯಕರಿಗೆ ನೇರವಾಗಿಯೇ ಎಚ್ಚ ರಿಸಿದ್ದಾರೆ.





ನಾನಂತೂ ಪಕ್ಷದ ವಿರುದ್ಧ ಹೋಗಲ್ಲ. ಆದರೆ ಶಾಸಕರ ನಡೆಗೆ ಗ್ಯಾರಂಟಿ ಇಲ್ಲ ಎಂಬ ಅವರ ಮಾತು ಈಗ ಕಾಂಗ್ರೆಸ್ ವಲಯದಲ್ಲಿ ಸಂಚಲನ ಮೂಡಿಸಿದೆ

ದೆಹಲಿಗೆ ಕಾಲಿಟ್ಟ ದಿನವೇ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಡಿಕೆ ಸಹೋದರರು ಭೇಟಿಯಾಗಿದ್ದರು. ನಂತರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ಗಂಟೆಗಳ ಕಾಲ ಮಹತ್ವದ ಚರ್ಚೆ ನಡೆಸಿದ್ದಾರೆ.

ಈ ಬೆನ್ನಲ್ಲೇ ಹೈಕಮಾಂಡ್ ಮುಂದೆ ಡಿಕೆಶಿ ಎರಡು ಪ್ರಮುಖ ಷರತ್ತುಗಳನ್ನು ಇಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಏಪ್ರಿಲ್ 29ರಿಂದ ಮೇ 4: ಈ ಅವಧಿಯನ್ನು ಬಫರ್ ಡೇಸ್ ಎಂದು ಪರಿಗಣಿಸಿ ಸಿಎಂ ಅವರನ್ನು ದೆಹಲಿಗೆ ಕರೆಸಿ ಮಾತುಕತೆ ನಡೆಸಬೇಕು. ಮೇ 4 ರಿಂದ ಮೇ 10: ಈ ಬ್ರೀತಿಂಗ್ ಡೇಸ್ ಒಳಗಾಗಿ ಎಲ್ಲ ಗೊಂದಲಗಳಿಗೂ ತೆರೆ ಎಳೆದು, ಹೈಕಮಾಂಡ್ ತನ್ನ ಅಂತಿಮ ನಿರ್ಧಾರವನ್ನು ಘೋಷಿಸಬೇಕು ಎಂದು ಅಂತಿಮ ಗಡುವು ನೀಡಲಾಗಿದೆ.

### ಹೈಕಮಾಂಡ್ ಭರವಸೆ ಏನು?

ಹೈಕಮಾಂಡ್ ಮನಸ್ಸಿನಲ್ಲೂ ಕೆಲವು ವಿಚಾರಗಳಿವೆ. ನಿಮ್ಮನ್ನು ಕರೆದು ಮಾತನಾಡುತ್ತೇವೆ ಎಂದು ಕಾಂಗ್ರೆಸ್ ನಾಯಕರು ಡಿ.ಕೆ. ಶಿವಕುಮಾರ್ ಅವರಿಗೆ ಭರವಸೆ ನೀಡಿದ್ದಾರೆ. ರಾಹುಲ್ ಗಾಂಧಿ ಅವರು ಅಂಡಮಾನ್ ಪ್ರವಾಸ ಕೈಗೊಂಡಿದ್ದು ಏಪ್ರಿಲ್ 28ರಂದು ದೆಹಲಿಗೆ ಮರಳಲಿದ್ದಾರೆ. ಏಪ್ರಿಲ್ 29ರಂದು ಕೊನೆಯ ಹಂತದ ಚುನಾವಣೆ ಮುಗಿಯುತ್ತಿದ್ದಂತೆಯೇ ಅವರೊಂದಿಗೆ ಚರ್ಚಿಸಿ ಭೇಟಿಗೆ ಸಮಯ ನಿಗದಿಪಡಿಸುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭರವಸೆ ನೀಡಿದ್ದಾರೆ. ಏಪ್ರಿಲ್ 29ರಿಂದ ಮೇ 4ರ ವರೆಗೆ ರಾಹುಲ್ ಗಾಂಧಿ ಅವರೊಂದಿಗೆ ಚರ್ಚೆ ನಡೆಸಿ ರಾಜ್ಯದ ನಾಯಕತ್ವ ಅಥವಾ ಇತರ ಪ್ರಮುಖ ವಿಚಾರಗಳ ಬಗ್ಗೆ ಒಂದು ಸ್ಪಷ್ಟ ನಿರ್ಧಾರಕ್ಕೆ ಬರುವುದಾಗಿ ಹೈಕಮಾಂಡ್ ತಿಳಿಸಿದೆ. ಮೇ 29ರ ನಂತರ ದೆಹಲಿಗೆ ಬರುವಂತೆ ಡಿ.ಕೆ.ಬ್ರದರ್ಸ್‌ಗೆ ಸೂಚಿಸಲಾಗಿದೆ. ಅದೇ ಸಮಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಹ ದೆಹಲಿಗೆ ಕರೆಸುವ ಬಗ್ಗೆ ರಾಹುಲ್ ಗಾಂಧಿ ಅವರೊಂದಿಗೆ ಚರ್ಚಿಸಿ ದಿನಾಂಕ ನಿಗದಿಪಡಿಸಲಾಗುವುದು ಎಂದು ನಾಯಕರು ಭರವಸೆ ನೀಡಿದ್ದಾರೆ.

# ಎಸ್ಸೆಸ್ಸೆಲ್ಸಿ ಫಲಿತಾಂಶ ಅನುಮಾನಾಸ್ಪದ

### ಶಿಕ್ಷಕರೇ ಇಲ್ಲ, ಆದರೂ ಶೇ.94 ಬಂದಿದ್ದು ಹೇಗೆ: ಎಚ್.ವಿಶ್ವನಾಥ್ ಪ್ರಶ್ನೆ

ಮೈಸೂರು: ರಾಜ್ಯದಲ್ಲಿ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.94ರಷ್ಟು ಫಲಿತಾಂಶ ಬಂದಿರುವುದು ಅನುಮಾನಾಸ್ಪದ ವಾಗಿದೆ. ಇದರಲ್ಲಿ ಗೋಲ್ ಮಾಲ್ ನಡೆದಿದೆ ಎಂದು ವಿಧಾನಪರಿಷತ್ ಬಿಜೆಪಿ ಸದಸ್ಯ ಎಚ್.ವಿಶ್ವನಾಥ್ ಆರೋಪಿಸಿದರು.

ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಶೇ 94.1ರಷ್ಟು ಫಲಿತಾಂಶ ಬಂದಿದೆ. ಹೋದ ವರ್ಷ ಶೇ 80.4ರಷ್ಟಿತ್ತು. ಒಮ್ಮೆಲೇ ಭಾರಿ ಜಿಗಿತ ಕಂಡಿದೆ. ಸಾಮೂಹಿಕ ನಕಲು ಮಾಡಿ ಸಲಾಗಿದೆ ಹಾಗೂ ಕೇಂದ್ರಗಳ ಸಿಸಿಟಿವಿ ಕ್ಯಾಮೆ ರಾಗಳನ್ನು ತೆಗೆಸಿ ಅವ್ಯವಹಾರ ನಡೆಸಲಾಗಿದೆ. ಹೀಗಾಗಿ, ಪರೀಕ್ಷಾ ವಿಧಾನ, ಮೌಲ್ಯಮಾಪನದ ಬಗ್ಗೆ ಅನುಮಾನಗಳಿವೆ. ಕೆಲವೇ ಸೋಮಾರಿ ಶಿಕ್ಷಕರು ಮಾತ್ರ ಇಂತಹ ಫಲಿತಾಂಶವನ್ನು ಸ್ವಾಗತಿಸುತ್ತಾರೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ಇತ್ತೀಚೆಗೆ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿಲ್ಲ. ಎಲ್ಲರೂ ಪಾಸಾಗಬೇಕೆಂದು ಕಸರತ್ತು ನಡೆಸಲಾಗಿದೆ. ಆದರೆ, ಮುಂದಿನ ದಿನಗಳಲ್ಲಿ ಅವರ ಕಥೆ ಏನು? ಪಿಯುಸಿ ಹಂತದಲ್ಲಿ ಶಿಕ್ಷಣ ಮುಂದುವರಿಸುವವರ ಪ್ರಮಾಣ ಕಡಿಮೆ ಆಗಲಿದೆ. ಇದು ಆಘಾತಕಾರಿ ಬೆಳವಣಿಗೆ ಎಂದು ಕಳವಳ ವ್ಯಕ್ತಪಡಿಸಿದರು.ಬಹಳಷ್ಟು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. ಅದರಲ್ಲೂ

ಪುಟ 2ಕ್ಕೆ



### ಶಿಕ್ಷಣ ವ್ಯವಸ್ಥೆ ಬುಡಮೇಲು


ಎಸ್ಸೆಸ್ಸೆಲ್ಸಿಯಲ್ಲಿ 20ಕ್ಕೆ 20 ಆಂತರಿಕ ಅಂಕ ಗಳನ್ನು ಎಲ್ಲರಿಗೂ ಕೊಡಲಾಗಿದೆ. ಪಾಸಾಗಲು ಇನ್ನು ಬೇಕಾದದ್ದು 13 ಅಂಕ ಮಾತ್ರ. ಅದನ್ನೂ ಸಹ ಕಾಪಿ (ನಕಲು) ಮಾಡಿಸಿ ದ್ದಾರೆ. ಇದು ಬಹಳ ನೋವಿನ ಸಂಗತಿ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಇಡೀ ಶಿಕ್ಷಣ ವ್ಯವಸ್ಥೆಯನ್ನೇ ಬುಡಮೇಲು ಮಾಡು ತ್ತಿದೆ. ದೊಡ್ಡ ಸಾಧನೆ ಮಾಡಿದ್ದಾಗಿ ಕೊಚ್ಚಿ ಕೊಳ್ಳುತ್ತಿದೆ ಎಂದು ಎಂಎಲ್ಸಿ ಎಚ್.ವಿಶ್ವ ನಾಥ್ ಆರೋಪಿಸಿ ದರು. ಶಿಕ್ಷಣ ಕ್ಷೇತ್ರದ ಬಲವರ್ಧನೆಗೆಂದೇ ಎಡಿಬಿಯಿಂದ 2 ಸಾವಿರ ಕೋಟಿ ರೂ. ಸಾಲವನ್ನು ಸರ್ಕಾರ ಮಾಡಿದೆ. ಅದರಲ್ಲಿ ಕಿಕ್ ಬ್ಯಾಕ್ ಪಡೆಯಲಾಗುತ್ತಿದೆ. ಇಲಾಖೆಯಲ್ಲಿ ವ್ಯಾಪಕ ಭ್ರಷ್ಟಾ ಚಾರ ನಡೆಯುತ್ತಿದೆ. ನಿಯೋಜನೆಗೆ 50 ಸಾವಿರ ಪಡೆಯುತ್ತಿದ್ದಾರೆ. ರಾಜ್ಯವನ್ನು ಅಡ ವಿಟ್ಟ ಸಾಲಗಾರ ಮುಖ್ಯಮಂತ್ರಿ ಸಿದ್ದರಾ ಮಯ್ಯ ಎಂದು ದೂರಿದರು.

### ಶೋಷಿತ ಸಮುದಾಯಕ್ಕೆ ಮಹದೇವಪ್ಪ ಮಾರಕ

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಶೋಷಿತ ಸಮುದಾಯಗಳಿಗೆ ಮಾರಕವಾಗಿದ್ದಾರೆ. ಒಳಮೀಸಲಾತಿ ವಿಚಾರದಲ್ಲಿ ಅಲೆಮಾರಿಗಳಿಗೆ ದೊಡ್ಡ ಅನ್ಯಾಯ ಮಾಡಲಾಗಿದೆ. ಇದು ಸಮಾನತೆಯೇ, ಸಾಮಾಜಿಕ ನ್ಯಾಯವೇ? ಸಿದ್ದರಾಮಯ್ಯ ಸಮಾಜವಾದಿ ಎಂದು ಬೊಗಳೆ ಬಿಡುತ್ತಾರಷ್ಟೆ ಎಂದು ಎಚ್.ವಿಶ್ವನಾಥ್ ವಾಗ್ದಾಳಿ ನಡೆಸಿದರು.

## ಸಿಎಂ ಕುರ್ಚಿಯಲ್ಲಿ ಯಾರು ಕೂರುತ್ತಾರೋ ನೋಡೋಣ

ಬೆಳಗಾವಿ: ರಾಜ್ಯದ ಮುಖ್ಯಮಂತ್ರಿ ಕುರ್ಚಿ ಸದ್ಯಕ್ಕೆ ಖಾಲಿ ಇಲ್ಲ. ಖಾಲಿಯಾದಾಗ ಯಾರು ಬಂದು ಕುಳಿತುಕೊಳ್ಳುತ್ತಾರೋ ನೋಡೋಣ ಎಂದು ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್ ಪ್ರತಿಕ್ರಿಯಿಸಿದರು.



ನಗರದಲ್ಲಿ ಶನಿವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಅಧಿಕಾರ ಹಂಚಿಕೆ ವಿಚಾರವಾಗಿ ಏನು ಮಾತುಕತೆ ಆಗಿದೆ ಎಂದು ನಮಗೆ ಗೊತ್ತಿಲ್ಲ. ಯಾರಾದರೂ ಮುಖ್ಯಮಂತ್ರಿ ಆಗಬೇಕೆಂದು ಬಯಸುವುದೂ ತಪ್ಪಲ್ಲ ಎಂದು ಹೇಳಿದರು.

ಸಚಿವ ಸಂಪುಟ ವಿಸ್ತರಣೆ ವೇಳೆ ಈಗಿರುವ ಅರ್ಧದಷ್ಟು ಸಚಿವರನ್ನು ಕೈಬಿಟ್ಟ ಹೊಸಬರಿಗೆ ಸ್ಥಾನ ಕೊಡಬೇಕು ಎಂಬುದು ಕೆಲವರ ಅಭಿಪ್ರಾಯ. ನಾನು ಸಹ ನನ್ನ ಅಭಿಪ್ರಾಯ ಹೇಳುತ್ತೇನೆ. ಅಂತಿಮವಾಗಿ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರ ಕಡೆಗಣನೆ ಮಾಡಿಲ್ಲ. ಶಿಸ್ತು ಉಲ್ಲಂಘಿಸಿದ್ದರಿಂದ ಕೆಲವರ ಮೇಲೆ ಕ್ರಮ ಕೈಗೊಂಡಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ವಿಮಾನ ನಿಲ್ದಾಣಕ್ಕೆ ಭೂಮಿ ನೀಡಿ

### ಅಧಿಕಾರಿಗಳೊಂದಿಗೆ ಸಭೆ: ಸಂಸದ ಯದುವೀರ್ ಸೂಚನೆ



ಮೈಸೂರು: ಮಂಡಕಳ್ಳಿ ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆಗೆ ಎದುರಾಗಿರುವ ತಾಂತ್ರಿಕ ತೊಡಕು ಕೂಡಲೇ ಬಗೆಹರಿಸಬೇಕು. ಸಂಬಂಧಿಸಿದ ಇಲಾಖೆಗಳವರು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೂಚಿಸಿದರು.




ವಿಮಾನ ನಿಲ್ದಾಣದ ಸಮುದಾಯ ಭವನದಲ್ಲಿ ಶನಿವಾರ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕೆಐಎಡಿಬಿ ಜಾಗದ ಸಮಸ್ಯೆ ಪರಿಹರಿಸದಿದ್ದರೆ ವಿಮಾನ ನಿಲ್ದಾಣ ವಿಸ್ತರಣಾ ಕಾರ್ಯಕ್ಕೆ ಅಡ್ಡಿಯಾಗುತ್ತದೆ. ಸ್ವಾಧೀನಪಡಿಸಿಕೊಂಡ ಭೂಮಿಯ ಮರಗಳಿಗೆ ಪರಿಹಾರದ ಮೌಲ್ಯಮಾಪನ ಮತ್ತು ವಿತರಣೆಗೆ ಸಂಬಂಧಿಸಿದ ಪ್ರಕ್ರಿಯೆಯನ್ನು ತ್ವರಿತವಾಗಿ ಮುಗಿಸಬೇಕು. ಇದು ಪೂರ್ಣಗೊಂಡರೆ, ಮುಂದಿನ ಅಭಿವೃದ್ಧಿ ಕಾರ್ಯಕ್ಕಾಗಿ ಭೂಮಿಯನ್ನು ಭಾರತೀಯ ವಿಮಾನಯಾನ ಪ್ರಾಧಿಕಾರಕ್ಕೆ (ಎಎಐ)ಕ್ಕೆ ಭೂಮಿ ಹಸ್ತಾಂತರಿಸಬಹುದು ಎಂದು ಹೇಳಿದರು.

ರನ್‌ವೇ ವಿಸ್ತರಣೆ ಪ್ರಕ್ರಿಯೆಗೆ ಕೈಗೊಳ್ಳಬೇಕಾದ ಕಾಮಗಾರಿ ಬಗ್ಗೆ ಎನ್‌ಎಚ್‌ಎಐನಿಂದ ಕರಡು ಡಿಪಿಆರ್ ಅನ್ನು 2025ರ ಡಿ. 15ರಂದು ಸಲ್ಲಿಸಲಾಗಿದೆ. 520 ಮೀಟರ್ ಸುರಂಗ (ಭೂಗತ ಬಾಕ್ಸ್ ಸುರಂಗ), ಮೂರು ಕಾಲುವೆ ಬಾಕ್ಸ್ ಸುರಂಗಗಳು ಮತ್ತು ಕೆಪಿಟಿಸಿಎಲ್

ಪುಟ 2ಕ್ಕೆ

## ಮೇ 2ಕ್ಕೆ ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆ

ಬೆಂಗಳೂರು: ಶೃಂಗೇರಿ ಶಾಸಕ ಟಿಡಿ ರಾಜೇಗೌಡಗೆ ಹೈಕೋರ್ಟ್ ಬಿಗ್ ಶಾಕ್ ನೀಡಿದೆ. ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆಗೆ ಹೈಕೋರ್ಟ್ ಸೂಚನೆ ನೀಡಿದೆ. ಮೇ 2ರಂದು ಬೆಳಿಗ್ಗೆ 9 ಗಂಟೆಗೆ ಅಂಚೆ ಮತ ಮರು ಎಣಿಕೆ ನಡೆಯಲಿದೆ.



ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನಲ್ಲಿ ಮರು ಮತ ಎಣಿಕೆ ನಡೆಯಲಿದೆ. ಕಳೆದ ಚುನಾವಣೆಯಲ್ಲಿ ಶೃಂಗೇರಿ ಕ್ಷೇತ್ರದಲ್ಲಿ ಅಂಚೆ ಮತಗಳ ಬಗ್ಗೆ ವಿವಾದ ಉಂಟಾದ ಹಿನ್ನೆಲೆಯಲ್ಲಿ ಮರು ಎಣಿಕೆಗೆ ಹೈಕೋರ್ಟ್ ಆದೇಶಿಸಿದೆ. ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಕುರಿತಾಗಿ ಮಾಜಿ ಶಾಸಕ ಡಿ.ಎನ್. ಜೀವರಾಜ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ ದ್ದರು. ಟಿ.ಡಿ.ರಾಜೇಗೌಡ ಆಯ್ಕೆ ಅಸಿಂಧು ಎಂದು ಪ್ರಶ್ನಿಸಿ, ವಿಶೇಷವಾಗಿ ಅಂಚೆ ಮತಗಳ ಎಣಿಕೆಯಲ್ಲಿ ಅಸಂಗತತೆ ಇದೆ ಎಂದು ಅವರು ಆರೋಪಿಸಿದ್ದರು. ಈ ಅರ್ಜಿಯನ್ನು ಪರಿಶೀ ಲಿಸಿದ ಹೈಕೋರ್ಟ್ ಅಂಚೆ ಮತಗಳ ಮರು ಎಣಿಕೆಗೆ ಏಪ್ರಿಲ್ 6ರಂದು ಆದೇಶ ನೀಡಿತ್ತು. ಆದರೆ ತೀರ್ಪಿಗೆ 2 ವಾರಗಳ ಮಧ್ಯಂತರ ತಡೆ ನೀಡಿತ್ತು. ಆ ಅವಧಿಯಲ್ಲಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ

ಪುಟ 2ಕ್ಕೆ

## ಒಳ ಮೀಸಲಾತಿ ಕಣ್ಣೊರೆಸುವ ತಂತ್ರ

### ದಲಿತ ಸಮುದಾಯಗಳಿಗೆ ನ್ಯಾಯ ಸಿಗಲ್ಲ: ಛಲವಾದಿ ವಾಗ್ದಾಳಿ

ಬೆಂಗಳೂರು: ರಾಜ್ಯ ಸರ್ಕಾರದ ಒಳ ಮೀಸಲಾತಿ ಹಂಚಿಕೆ ನಿರ್ಧಾರ ಕೇವಲ ಕಣ್ಣೊರೆಸುವ ತಂತ್ರ. ಇದರಿಂದ ದಲಿತ ಸಮುದಾಯಗಳಿಗೆ ನ್ಯಾಯ ಸಿಗುವುದಿಲ್ಲ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿ ಅನ್ವಯವಾಗದ ಹುದ್ದೆಗಳನ್ನು ಜನರಲ್ ಎಸ್‌ಸಿ ಎಂದು ಕರೆದರೆ ಅದು ಒಳಮೀಸಲಾತಿ ಹೇಗೆ ಆಗುತ್ತದೆ? ಇದು ಕೇವಲ ಗೊಂದಲ ಸೃಷ್ಟಿಸುವ ಪ್ರಯತ್ನ. ಸರ್ಕಾರದ ಈ ನಿರ್ಧಾರ ಅವೈಜ್ಞಾನಿಕವಾಗಿದೆ ದಲಿತರನ್ನು ಮತ್ತಷ್ಟು ಗೊಂದಲಕ್ಕೆ ದೂಡಿದೆ ಎಂದು ಅವರು ಆರೋಪಿಸಿದರು. ಒಳಮೀಸಲಾತಿ ನೀಡಲು ಸರ್ಕಾ ರಕ್ಕೆ ಮೂರು ವರ್ಷ ಬೇಕಿತ್ತೇ?

ಪುಟ 2ಕ್ಕೆ



### ಕೋರ್ಟ್‌ಲಿ ನಿಲ್ಲಲ್ಲ?

ಸಿದ್ದರಾಮಯ್ಯ ಅವರಿಗೆ ಅಧಿಕಾರದ ಹಪಾಹಪಿ ಇದೆಯೇ ಹೊರತು ದಲಿತರ ಬಗ್ಗೆ ಕಾಳಜಿಯಿಲ್ಲ. ಕಾಂಗ್ರೆಸ್‌ನ ದಲಿತ ನಾಯಕರು ಸಮುದಾಯಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತದೆ ಮೌನಕ್ಕೆ ಶರಣಾಗಿದ್ದಾರೆ. ಸರ್ಕಾರದ ಈ ತಪ್ಪು ನಿರ್ಧಾರವನ್ನು ಬಿಜೆಪಿ ವಿರೋಧಿಸುತ್ತದೆ. ಯಾವುದೇ ವೈಜ್ಞಾನಿಕ ವರದಿ ಇಲ್ಲದೆ ಮಾಡಿರುವ ಈ ನಿರ್ಧಾರ ನ್ಯಾಯಾಲಯದಲ್ಲಿ ನಿಲ್ಲುವುದಿಲ್ಲ ಎಂದು ಛಲವಾದಿ ಎಚ್ಚರಿಕೆ ನೀಡಿದರು.

## ಸಚಿವ ಸುಧಾಕರ್ ಸ್ಥಿತಿ ಗಂಭೀರ

### ಆಸ್ಪತ್ರೆಗೆ ಸಿದ್ದರಾಮಯ್ಯ ಭೇಟಿ



ಬೆಂಗಳೂರು: ಸಚಿವ ಡಿ.ಸುಧಾಕರ್ ಆರೋಗ್ಯ ಸ್ಥಿತಿ ಗಂಭೀರವಾಗಿರುವ ಹಿನ್ನೆಲೆಯಲ್ಲಿ ಆರೋಗ್ಯ ವಿಚಾರಿಸಲು ಸಿಎಂ ಸಿದ್ದರಾಮಯ್ಯ ಶನಿವಾರ ಆಸ್ಪತ್ರೆಗೆ ಭೇಟಿ ನೀಡಿದ್ದರು. ವೈದ್ಯಾಧಿಕಾರಿಗಳಿಂದ ಮಾಹಿತಿ ಪಡೆದರು.

ಸಚಿವ ಡಿ.ಸುಧಾಕರ್ ಅರೋಗ್ಯ ವಿಚಾರಿಸಿದ ನಂತರ, ಅವರಿಗೆ ಪ್ರಜ್ಞೆ ಬಂದ ನಂತರ ವೈದ್ಯರು ಹೆಚ್ಚಿನ ಚಿಕಿತ್ಸೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತಾರೆ. ಸುಧಾಕರ್ ಅವರಿಗೆ ಇನ್ನೂ ಪ್ರಜ್ಞೆ ಮರಳಿಲ್ಲ. ಅವರು ಇನ್ನೂ ತೀವ್ರ ನಿಗಾ ಘಟಕದಲ್ಲಿದ್ದಾರೆ. ವೈದ್ಯರು ನಾಳೆ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದರು.

ಶ್ವಾಸಕೋಶ ಕಸಿ ಮಾಡಿಸಿಕೊಳ್ಳಬೇಕೇ ಎಂಬ ಪ್ರಶ್ನೆಗೆ ಉತ್ತರಿಸಿದ ಸಿಎಂ, ಈಗ ಕಸಿ ಮಾಡಿಸಿಕೊಳ್ಳಬೇಕಾದರೆ ಪ್ರಜ್ಞೆ ಮರಳಿ ಪಡೆಯಬೇಕು ಎಂದರು. ಸಚಿವರ ಸ್ಥಿತಿಯ ಬಗ್ಗೆ ಕೇಳಿದಾಗ, ಅವರು ಈಗ ಸ್ಥಿರವಾಗಿದ್ದಾರೆ. ಆದರೆ ವೆಂಟಿಲೇಟರ್ ಬೆಂಬಲದಲ್ಲಿದ್ದಾರೆ. ಇತರ ಎಲ್ಲಾ ಅಂಗಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಮೆದುಳು ಇನ್ನೂ ಪ್ರಜ್ಞೆಗೆ ಮರಳಿಲ್ಲ ಎಂದು ಹೇಳಿದರು.

ಚಿಕಿತ್ಸೆಯ ಕುರಿತು ವೈದ್ಯರು ಮುಖ್ಯಮಂತ್ರಿಗೆ ವಿವರಿಸಿದರು. ಅಲ್ಲದೆ ಸಿದ್ದರಾಮಯ್ಯ ಅವರು ಸಚಿವ ಸುಧಾಕರ್ ಅವರ ಕುಟುಂಬ ಸದಸ್ಯರೊಂದಿಗೆ ಚರ್ಚೆ ನಡೆಸಿದರು. ಶ್ವಾಸಕೋಶದ ಸೋಂಕಿನಿಂದಾಗಿ ಯೋಜನೆ ಮತ್ತು ಸಾಂಖ್ಯಿಕ ಸಚಿವ

ಪುಟ 2ಕ್ಕೆ

## ಶಿಕ್ಷೆ ಪ್ರಶ್ನಿಸಿ ಹೈಕೋರ್ಟ್‌ಗೆ ವಿನಯ ಕುಲಕರ್ಣಿ ಮೇಲ್ಮನವಿ

ಬೆಂಗಳೂರು: ಧಾರವಾಡದ ಯೋಗೀಶಗೌಡ ಗೌಡರ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಸೆಷನ್ಸ್ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.



ಜಾಮೀನು ಹಾಗೂ ಶಿಕ್ಷೆಗೆ ತಡೆ ಕೋರಿ ಸಲ್ಲಿಸಲಾಗಿರುವ ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ. ಹೈಕೋರ್ಟ್ ವಕೀಲ ಎಸ್. ಸುನಿಲ್ ಕುಮಾರ್ ಅವರು ವಿನಯ ಕುಲಕರ್ಣಿ ಪರ ವಕಾಲತ್ತು ವಹಿಸಿದ್ದಾರೆ. ಪ್ರಕರಣದಲ್ಲಿ 17 ಜನ ಆರೋಪಿಗಳನ್ನು ಅಪರಾಧಿಗಳು ಎಂದು ತೀರ್ಮಾನಿಸಿರುವ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ 16 ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ.

ಪುಟ 2ಕ್ಕೆ

## ದೈವಕ್ಕೆ ಅಪಮಾನ ಪ್ರಕರಣ: ರಣವೀರ್ ಸಿಂಗ್‌ಗೆ ರಿಲೀಫ್

ಬೆಂಗಳೂರು: ಚಾಮುಂಡಿ ದೈವಕ್ಕೆ ಅಪಮಾನ ಮಾಡಿ ಸಮಸ್ಯೆಗೆ ಸಿಲುಕಿದ್ದ ರಣವೀರ್ ಸಿಂಗ್ ಇದೀಗ ಕ್ಷಮೆಯಾಚಿಸಿದ್ದಾರೆ. ಇನ್ನೊಮ್ಮೆ ಈ ರೀತಿ ಧಾರ್ಮಿಕ ಭಾವನೆಗಳಿಗೆ ದಕ್ಕೆ ತರಲ್ಲ ಎಂದು ಹೈಕೋರ್ಟ್ ಗೆ ಪ್ರಮಾಣಪತ್ರ ಸಲ್ಲಿಸಿದ್ದಾರೆ.



ಬಾಲಿವುಡ್ ನಟ ರಣವೀರ್ ಸಿಂಗ್ ಕಾರ್ಯಕ್ರಮವೊಂದರಲ್ಲಿ ಕಾಂತಾರ ಚಿತ್ರದ ನಟನ ಮುಂದೆ ಮಾಡಿದ್ದ ದೈವ ಅಪಚಾರಕ್ಕೆ ಈಗ ಬೆಲೆ ತೆರುವಂತಾಗಿದೆ. ಕೋರ್ಟ್ ನಿರ್ದೇಶನದ ಮೇಲೆ ರಣವೀರ್ ಸಿಂಗ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಎಫ್‌ಐಆರ್ ರದ್ದು ಮಾಡುವಂತೆ ಹೈಕೋರ್ಟ್ ಮೊರೆ ಹೋಗಿದ್ದ ರಣವೀರ್ ಇದೀಗ ಬೇಷರತ್ ಕ್ಷಮೆಯಾಚಿಸಿದ್ದಾರೆ. ಇನ್ನು ಯಾವ ಧರ್ಮದ ಬಗ್ಗೆಯೂ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ

## ಮೇಕೆದಾಟು ಕಾವೇರಿ ನದಿ ಬಳಿ ಪ್ರವಾಸಿಗರ ಮೇಲೆ ಕಾಡಾನೆ ದಾಳಿ



ರಾಮನಗರ: ಕಾವೇರಿ ನದಿಯಲ್ಲಿ ಆಟವಾಡುತ್ತಿದ್ದ ಪ್ರವಾಸಿಗರ ಮೇಲೆ ಕಾಡಾನೆ ದಾಳಿ ನಡೆಸಿರುವ ಘಟನೆ ಸಂಗಮ ಅರಣ್ಯ ಪ್ರದೇಶದ ಮೇಕೆದಾಟು ಬಳಿ ನಡೆದಿದೆ.

ಕನಕಪುರ ತಾಲೂಕಿನ ಸಂಗಮ ಅರಣ್ಯ ಪ್ರದೇಶದಲ್ಲಿ ನೀರು ಕುಡಿಯಲು ನದಿಗೆ ಬಂದ ಕಾಡಾನೆ ಪ್ರವಾಸಿಗರ ಮೇಲೆ ಎರಗಿದೆ. ಈ ವೇಳೆ ಪ್ರವಾಸಿಗರು ಸ್ಥಳದಿಂದ ಓಡಿದ್ದಾರೆ. ಈ ವೇಳೆ ಒಬ್ಬರು ಮಹಿಳೆ ಮೇಲೆ ಕಾಡಾನೆ ದಾಳಿ ನಡೆಸಿ ಅಲ್ಲಿಂದ ಕಾಡಿನೊಳಗೆ ಕಾಲ್ಕಿತ್ತಿದೆ. ಕಾಡಾನೆ ದಾಳಿಯಲ್ಲಿ ಮಹಿಳೆಗೆ ಸಣ್ಣಪುಟ್ಟ ಗಾಯಗಳಾಗಿವೆ.

ಪುಟ 2ಕ್ಕೆ

## ಮದ್ಯ ಪ್ರಿಯರಿಗೆ ಶಾಕ್: ಮೇ 1ರಿಂದ ದರ ಏರಿಕೆ

ಬೆಂಗಳೂರು: ಕಾಂಗ್ರೆಸ್ ಸರ್ಕಾರ ಐದನೇ ಬಾರಿಗೆ ಅಬಕಾರಿ ಸುಂಕವನ್ನು ಪರಿಷ್ಕರಿಸಲು ಮುಂದಾಗಿದೆ. ಮೇ 1ರಿಂದ ಹೊಸ ದರಗಳು ಜಾರಿಗೆ ಬರಲಿದೆ. ಇದರಿಂದ ಮದ್ಯಪ್ರಿಯರ ಜೇಬಿಗೆ ಕತ್ತರಿ ಬೀಳಲಿದೆ.



ಇನ್ನು ಮುಂದೆ ಮದ್ಯದ ಆಲ್ಕೋಹಾಲ್ ಪ್ರಮಾಣದ ಆಧಾರದ ಮೇಲೆ ತೆರಿಗೆ ವಿಧಿಸಲಾಗುತ್ತದೆ. ಮದ್ಯದಲ್ಲಿ ಆಲ್ಕೋಹಾಲ್ ಅಂಶ ಹೆಚ್ಚಿದ್ದಷ್ಟೂ ತೆರಿಗೆ ಹೆಚ್ಚಾಗಲಿದೆ. ಈ ಹೊಸ ನೀತಿಯಿಂದ ಕಡಿಮೆ ಆಲ್ಕೋಹಾಲ್ ಹೊಂದಿರುವ ಪ್ರೀಮಿಯಂ ಮದ್ಯದ ಬೆಲೆ


ಪುಟ 2ಕ್ಕೆ

### ಎಪಿಪಿ ಎಂಪಿಗಳು ಬಿಜೆಪಿಗೆ ಸೇರ್ಪಡೆ

# ಬದಲಾಗುತ್ತಿರುವ ರಾಜಕೀಯ ಧ್ರುವೀಕರಣ

ಸ್ವಾಮಿನಾಥನ್

ಭಾರತೀಯ ಪ್ರಜಾಪ್ರಭುತ್ವವು ಇಂದು ಒಂದು ವಿಶಿಷ್ಟ ಸಂಧಿಸ್ಥಳದಲ್ಲಿದೆ. ಸಿದ್ಧಾಂತಗಳ ಆಧಾರದ ಮೇಲೆ ನಡೆಯುತ್ತಿದ್ದ ರಾಜಕಾರಣವು ಇಂದು 'ಅಧಿಕಾರ ಕೇಂದ್ರಿತ' ಮತ್ತು 'ಕಾರ್ಯಸಾಧ್ಯತೆ'ಯ ಹಾದಿ ಹಿಡಿದಿದೆ. ಈ ಬದಲಾವಣೆಯ ಬ್ರ್ಯಾಂಡ್ ಅಂಬಾಸಿಡರ್ ಆಗಿ ರಾಘವ್ ಚಡ್ಡಾ (ಕಾಣಿಸಿಕೊಳ್ಳುತ್ತಿದ್ದಾರೆ. ಆಮ್ ಆದ್ಮಿ ಪಕ್ಷದ ಆಧಾರಸ್ತಂಭಗಳಲ್ಲಿ ಒಬ್ಬರಾಗಿದ್ದ ಚಡ್ಡಾ, ಇತರ ಎಪಿಪಿ ರಾಜ್ಯ ಸಭಾ ಸದಸ್ಯರು ಭಾರತೀಯ ಜನತಾ ಪಕ್ಷದ ತೆಕ್ಕೆಗೆ ಸರಿದಿರುವುದು ಕೇವಲ ಒಂದು ವೈಯಕ್ತಿಕ ನಿರ್ಧಾರವಲ್ಲ; ಇದು ಭಾರತದ ಒಕ್ಕೂಟ ವ್ಯವಸ್ಥೆ ಮತ್ತು ಪ್ರಾದೇಶಿಕ ಪಕ್ಷಗಳ ಅಸ್ತಿತ್ವಕ್ಕೆ ಎದುರಾಗಿರುವ ಅತಿದೊಡ್ಡ ಸವಾಲಿನ ಸಂಕೇತವಾಗಿದೆ.








**1. ಪಿತೂರಿ ಸಿದ್ಧಾಂತಗಳ ಆಳವಾದ ವಿಶ್ಲೇಷಣೆ: ತೆರೆಯ ಮರೆಯ ಆಟ**

ಯಾವುದೇ ದೊಡ್ಡ ರಾಜಕೀಯ ಪಕ್ಷಾಂತರದ ಹಿಂದೆ ಹಲವು ಸ್ತರಗಳ ರಹಸ್ಯಗಳಿರುತ್ತವೆ. ಚಡ್ಡಾ ಅವರ ವಿಷಯದಲ್ಲಿ ಕೇಳಿಬರುತ್ತಿರುವ 'ಪಿತೂರಿ ಸಿದ್ಧಾಂತಗಳು' ಕೇವಲ ಊಹೆಗಳಲ್ಲ, ಅವುಗಳಿಗೆ ಕೆಲವು ತಾರ್ಕಿಕ ಆಧಾರಗಳಿವೆ.

ರಾಜಕೀಯ ರಕ್ಷಣೆ ಮತ್ತು ತನಿಖಾ ಸಂಸ್ಥೆಗಳು: ದೆಹಲಿಯ ಅಬಕಾರಿ ನೀತಿ ಹಗರಣವು ಎಎಪಿಯ ಉನ್ನತ ನಾಯಕತ್ವವನ್ನು ಜೈಲಿನ ಹಿಂದೆ ತಳ್ಳಿತ್ತು . ಈ ತನಿಖೆಯ ಬಿಸಿ ಚಡ್ಡಾ ಅವರಿಗೂ ತಟ್ಟಬಹುದು ಎಂಬ ಭೀತಿ ಇತ್ತು. ಬಿಜೆಪಿಗೆ ಸೇರುವ ಮೂಲಕ ಈ ತನಿಖೆಗಳಿಂದ 'ರಾಜಕೀಯ ರಕ್ಷಣೆ' ಪಡೆಯುವ ಒಪ್ಪಂದ ನಡೆದಿರಬಹುದು ಎಂಬುದು ವಿರೋಧ ಪಕ್ಷಗಳ ಪ್ರಬಲ ಆರೋಪ.? ಲಂಡನ್ ಪ್ರವಾಸ ಮತ್ತು ಅಂತರಾಷ್ಟ್ರೀಯ ಕೊಂಡಿಗಳು: ಚಡ್ಡಾ ಅವರ ಸುದೀರ್ಘ ಲಂಡನ್ ಪ್ರವಾಸ

ಪುಟ 2ಕ್ಕೆ

## ನವ–ಭಾರತದ ರಾಜಕಾರಣ: ಯೋಜಿತ ಪಕ್ಷಾಂತರ

ಇಂದಿನ ಪಕ್ಷಾಂತರಗಳು ಹಳೆಯ ಶೈಲಿಯದ್ದಲ್ಲ. ಇವು ಬಹಳ ಯೋಜಿತವಾಗಿರುತ್ತವೆ. ಸಾಮಾಜಿಕ ಜಾಲತಾಣಗಳಲ್ಲಿ ಮೊದಲು ಅಸಮಾಧಾನ ವ್ಯಕ್ತಪಡಿಸುವುದು, ನಂತರ ಮೌನಕ್ಕೆ ಶರಣಾಗುವುದು, ಆಮೇಲೆ ಸಿದ್ಧಾಂತದ ಹೆಸರಿನಲ್ಲಿ ಪಕ್ಷ ಬಿಡುವುದು ಒಂದು ಸಾಮಾನ್ಯ ಪ್ರಕ್ರಿಯೆಯಾಗಿದೆ. ರಾಘವ್ ಚಡ್ಡಾ ಅವರ ವಿಷಯದಲ್ಲೂ ಇದೇ ಹಂತಗಳನ್ನು ನಾವು ಗಮನಿಸಬಹುದು. ಪ್ರಜಾಪ್ರಭುತ್ವದಲ್ಲಿ ಮತದಾರನೇ ಪ್ರಭು. ಆದರೆ, ಮತದಾರರು ಒಂದು ಸಿದ್ಧಾಂತಕ್ಕೆ ಮತ ಹಾಕಿದ ನಂತರ, ಜನಪ್ರತಿನಿಧಿಗಳು ತಮ್ಮ ಸ್ವಾರ್ಥಕ್ಕಾಗಿ ಅದನ್ನು ಬದಲಾಯಿಸುವುದು ಮತದಾರನಿಗೆ ಮಾಡುವ ದ್ರೋಹ

**ಸಲಹೆಗಳು:**

- **ಪಕ್ಷಾಂತರ ಮಾಡಿದ ಸದಸ್ಯರು ತಕ್ಷಣವೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಹೊಸದಾಗಿ ಚುನಾವಣೆ ಎದುರಿಸಬೇಕು.**
- **ಪಕ್ಷಾಂತರ ವಿರೋಧಿ ಕಾನೂನನ್ನು ಮತ್ತಷ್ಟು ಕಠಿಣಗೊಳಿಸಿ, ವಿಲೀನದ ಹೆಸರಿನಲ್ಲಿ ನಡೆಯುವ ನಾಟಕಗಳನ್ನು ನಿಲ್ಲಿಸಬೇಕು.**
- **ಪಕ್ಷಗಳು ತಮ್ಮ ಒಳಗೆ 'ಆಂತರಿಕ ಪ್ರಜಾಪ್ರಭುತ್ವ'ವನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು.**

ಪುಟ 2ಕ್ಕೆ

# ಭೂಗತ ವಿದ್ಯುತ್ ಕೇಬಲ್ ಅಳವಡಿಕೆ

## ಕೈಲಾಂಚ ಹೋಬಳಿಯ ಗ್ರಾಮಗಳಲ್ಲಿ ಕಾಮಗಾರಿ । ಶಾಸಕ ಇಕ್ಬಾಲ್ ಹುಸೇನ್ ಭರವಸೆ

ರಾಮನಗರ: ತಾಲ್ಲೂಕಿನ ಕೈಲಾಂಚ ಹೋಬಳಿಯ ಎಲ್ಲಾ ಗ್ರಾಮಗಳಲ್ಲಿ ಹಾಲಿ ಇರುವ ವಿದ್ಯುತ್ ಸರಬರಾಜು ತಂತಿಗಳನ್ನು ತೆರವುಗೊಳಿಸಿ, ಭೂಗತ ವಿದ್ಯುತ್ ಕೇಬಲ್‌ಗಳನ್ನು ಅಳವಡಿಸಲಾಗುವುದು ಎಂದು ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದರು.

ತಾಲೂಕಿನ ಕೈಲಾಂಚ ಹೋಬಳಿ ಬನ್ನಿಕುಪ್ಪೆ ಗ್ರಾಪಂ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ 6 ಕೋಟಿ ರೂ ವೆಚ್ಚದ ಅಭಿವೃದ್ಧಿ ಕೆಲಸಗಳಿಗೆ ಭೂಮಿ ಪೂಜೆ ನೆರವೇರಿಸಿ ಹೊಸದೊಡ್ಡಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ರಾಮನಗರ ವಿಧಾನಸಭಾ ಕ್ಷೇತ್ರದಲ್ಲಿ ಭೂಗತ ವಿದ್ಯುತ್ ಕೇಬಲ್ ಅಳವಡಿಕೆ ಕಾಮಗಾರಿಗೆ ಅನುಮೋದನೆ ದೊರೆತಿದೆ. ಇದಕ್ಕಾಗಿ ಕೈಲಾಂಚ ಹೋಬಳಿಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಶೀಘ್ರದಲ್ಲಿಯೇ ಕಾಮಗಾರಿ ಪ್ರಾರಂಭವಾಗಲಿದೆ. ಆನಂತರ ನಗರ ಪ್ರದೇಶ ಸೇರಿದಂತೆ ಎಲ್ಲೆಡೆ ಭೂಗತ ವಿದ್ಯುತ್ ಕೇಬಲ್ ಅಳವಡಿಸುವ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದರು.

### ಮಹಿಳೆಯರಿಗೆ ಶೇ 50 ಮೀಸಲಾತಿ ಕೊಟ್ಟಿದ್ದು ಕಾಂಗ್ರೆಸ್

ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.50%ರಷ್ಟು ಮೀಸಲಾತಿ ಕೊಟ್ಟಿದ್ದು ಕಾಂಗ್ರೆಸ್. ಸ್ಥಳೀಯ ಸಂಸ್ಥೆಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯ ಸ್ಥಾನಗಳನ್ನು ಕೊಟ್ಟು ರಾಜಕೀಯ ಸೂಕ್ತ ಸ್ಥಾನಮಾನ ಕೊಟ್ಟಿದೆ. ಎಲ್ಲ ವರ್ಗದವರು ಸೇರಿ ಕಟ್ಟಿದ ಕಾಂಗ್ರೆಸ್ ಪಕ್ಷ, ಇಲ್ಲಿ ನ್ಯಾಯ, ಧರ್ಮ, ನೀತಿ ಬದ್ಧತೆ ಸಿಗುವ ಪಕ್ಷ, ಆದರೆ ಬೇರೆ ಪಕ್ಷಗಳಲ್ಲಿ ವಿಷಬೀಜ ಬಿತ್ತಿ ಜಾತಿಜಾತಿಗಳ ನಡುವೆ ಎತ್ತಿಕಟ್ಟುವ ಕೆಲಸ ಮಾಡುತ್ತಿವೆ ಎಂದು ಬಿಜೆಪಿ ವಿರುದ್ಧ ಹರಿಹಾಯ್ದರು.



### 2 ಕೋಟಿ ರೂ ವೆಚ್ಚದಲ್ಲಿ ಕೆರೆಗಳ ಅಭಿವೃದ್ಧಿ

ಬಿಎಂಐಸಿಪಿಯಿಂದ 2 ಕೋಟಿ ರೂ ಅನುದಾನ ಮಂಜೂರಾಗಿದೆ. ಬನ್ನಿಕುಪ್ಪೆ, ಜಕ್ಕನಹಳ್ಳಿ–ಲಕ್ಕೋಜನಹಳ್ಳಿ ಭಾಗದ ಕೆರೆಗಳನ್ನು ಅಭಿವೃದ್ಧಿ ಪಡಿಸಿ, ಸೌಂದರೀಕರಣದ ಜೊತೆಗೆ ನೀರು ತುಂಬಿಸುವ ಕೆಲಸಕ್ಕೂ ಚಾಲನೆ ನೀಡಿದ್ದೇನೆ. ಇದರಿಂದ ಪ್ರಾಣಿ, ಪಕ್ಷಿ ಸಂಕುಲಗಳಿಗೆ ನೀರುಣಿ ಸುವ ಜೊತೆಗೆ ಅಂತರ್ಜಲವೂ ವೃದ್ಧಿಯಾಗಿ ಕುಡಿಯುವ ನೀರಿನ ಬವಣೆ ತಪ್ಪಲಿದೆ. ಜೊತೆಗೆ ರೈತರ ಕೃಷಿ ಚಟುವಟಿಕೆಗೂ ನೆರವಾಗಲಿದೆ ಎಂದರು. ಗಾಣಾಳು ಏತ ನೀರಾವರಿ ಯೋಜನೆ ಮುಖಾಂತರ ಕನಕಪುರದ 7 ಕೆರೆಗಳು ಸೇರಿ ದಂತೆ ಕೈಲಾಂಚ ಭಾಗದ ಎಲ್ಲ ಕೆರೆಗಳಿಗೆ ನೀರು ತುಂಬಿಸಲಾಗುತ್ತಿದ್ದು, ಟೆಂಡರ್ ಸಹ ಮುಗಿದಿದೆ. ಈ ಯೋಜನೆ ಕೆಲಸಕ್ಕೆ ಶೀಘ್ರದಲ್ಲಿ ಚಾಲನೆ ಸಹ ನೀಡಲಾಗುವುದು ಎಂದು ತಿಳಿಸಿದರು.

### ಕೆ.ಪಿ.ಎಸ್. ಶಾಲೆಗಳಲ್ಲಿ ಏಕ ರೀತಿಯ ಸಮವಸ್ತ್ರ

ನಗರ ಪ್ರದೇಶದ ಮಕ್ಕಳಂತೆ ಗ್ರಾಮೀಣ ಮಕ್ಕಳಿಗೂ ಸಮಾನವಾಗಿ ಶಿಕ್ಷಣ ಸಿಗಬೇಕು. ಹೀಗಾಗಿ ಪಾದರಹಳ್ಳಿ ಮತ್ತು ಅವ್ವೇರಹಳ್ಳಿಯಲ್ಲಿ ತಲಾ 12 ಕೋಟಿ ವೆಚ್ಚದಲ್ಲಿ ಕೆಪಿಎಸ್ ಶಾಲೆಗಳು ನಿರ್ಮಾಣ ಮಾಡಲಾಗಿದೆ. ಕೆಪಿಎಸ್ ಶಾಲೆಯ ವಿದ್ಯಾರ್ಥಿಗಳಿಗೆ ಏಕರೀತಿಯ ಸವವಸ್ತ್ರ, ಬಸ್ ವ್ಯವಸ್ಥೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಡಿಡಿಪಿಐ, ಬಿಇಓ ಅವರನ್ನೊಳಗೊಂಡ ಶಿಕ್ಷಣ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸಿ ಚರ್ಚಿಸಲಾಗಿದೆ. ಈ ಶೈಕ್ಷಣಿಕ ವರ್ಷದಿಂದಲೇ ಕೆಪಿಎಸ್ ಶಾಲೆಗಳನ್ನು ಪ್ರಾರಂಭಿಸಲು ಎಲ್ಲ ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ಕೊಟ್ಟರು.

### ವಿವಿಧ ಕಾಮಗಾರಿಗಳಿಗೆ ಚಾಲನೆ

ಬನ್ನಿಕುಪ್ಪೆ ಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿರುವ ಕೆಪಿಎಸ್ ಶಾಲಾ ಕಟ್ಟಡವನ್ನು ವೀಕ್ಷಿಸಿದರು. ಲಕ್ಕೋಜನಹಳ್ಳಿ ಗ್ರಾಮದಲ್ಲಿ ಕಾವೇರಿ ನೀರಾವರಿ ನಿಗಮದ ವತಿಯಿಂದ ನಿರ್ಮಿಸಿರುವ ಕಾಂಕ್ರೀಟ್ ರಸ್ತೆಗೆ ಚಾಲನೆ, ಬಿಎಂಐಸಿಪಿ ಅನುದಾನದಲ್ಲಿ ಬನ್ನಿಕುಪ್ಪೆ ಕೆರೆ ಅಭಿವೃದ್ಧಿ, ಹೊಸದೊಡ್ಡಿ ಗ್ರಾಮದಲ್ಲಿ ಎಂಪಿಸಿಎಸ್ ಕಟ್ಟಡಕ್ಕೆ ಭೂಮಿಪೂಜೆ ಸೇರಿದಂತೆ ಚೌಡಯ್ಯನದೊಡ್ಡಿ, ವಡ್ಡರದೊಡ್ಡಿ, ನಂಜಾಪುರ, ಕಾಡನಕುಪ್ಪೆ, ಜಕ್ಕನಹಳ್ಳಿ, ಲಕ್ಕಪ್ಪನಹಳ್ಳಿ, ಮರಿಸಿದ್ದೇಗೌಡನ ದೊಡ್ಡಿ, ಲಾಲನಾಯಕನದೊಡ್ಡಿ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಇಕ್ಬಾಲ್ ಹುಸೇನ್ ರವರು ಭೂಮಿಪೂಜೆ ನೆರವೇರಿಸಿದರು

ಈ ವೇಳೆ ಗ್ಯಾರಂಟಿ ಸಮಿತಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಕೆ.ರಾಜು, ಕೆಎಂಎಫ್ ಮಾಜಿ ಅಧ್ಯಕ್ಷ ಪಿ.ನಾಗರಾಜು, ರಾಮನಗರ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಹೆಚ್.ರಾಜು, ಮಾಜಿ ಅಧ್ಯಕ್ಷ ಜಯಣ್ಣ, ಟಿಎಪಿಸಿಎಂಎಸ್ ನಿರ್ದೇಶಕ ಶಂಕರ್, ಬನ್ನಿಕುಪ್ಪೆ ಗ್ರಾಪಂ ಮಾಜಿ ಅಧ್ಯಕ್ಷರಾದ ಹೇಮಂತ್, ರವಿಕುಮಾರ್ ಮುಖಂಡರಾದ ಅಂಕನಹಳ್ಳಿ ಮಹೇಶ್, ಸಿದ್ದು, ಉಮಾಶಂಕರ್, ಸುಂದರ್, ಸ್ವಾಮಿ ಶ್ರೀನಿವಾಸ್, ವೆಂಕಟೇಶ್ ಮತ್ತಿತರರು ಇದ್ದರು.

ಮೊದಲ ಪುಟದಿಂದ

## ಬದಲಾಗುತ್ತಿರುವ ರಾಜಕೀಯ ಧ್ರುವೀಕರಣ

ಮತ್ತು ಅಲ್ಲಿ ಅವರು ನಡೆಸಿದ ರಹಸ್ಯ ಸಭೆಗಳು ಕೇವಲ ವೈದ್ಯಕೀಯ ಕಾರಣಗಳಿಗಾಗಿ ಇರಲಿಲ್ಲ ಎಂಬ ಅನುಮಾನಗಳಿವೆ. ಅಲ್ಲಿಯೇ ಬಿಜೆಪಿಯ ಉನ್ನತ ಮಟ್ಟದ ನಾಯಕರೊಂದಿಗೆ ಮಾತುಕತೆಗಳು ಅಂತಿಮಗೊಂಡವು ಎನ್ನಲಾಗುತ್ತಿದೆ.

* ಎಎಪಿ ಒಳಗೆ ಮೂಲೆಗುಂಪು: ಅರವಿಂದ್ ಕೇಜ್ರಿವಾಲ್ ಅವರ ಅನುಪಸ್ಥಿತಿಯಲ್ಲಿ ಪಕ್ಷದ ಮೇಲೆ ಸುನಿತಾ ಕೇಜ್ರಿವಾಲ್ ಅವರ ಹಿಡಿತ ಹೆಚ್ಚಾದಂತೆ, ಚಡ್ಡಾ ಅಂತಹ ಯುವ ನಾಯಕರಿಗೆ ಉಸಿರುಗಟ್ಟುವ ವಾತಾವರಣ ನಿರ್ಮಾಣವಾಗಿತ್ತು. ತನ್ನ ರಾಜಕೀಯ ಭವಿಷ್ಯ ಇಲ್ಲಿ ಮಸುಕಾಗುತ್ತಿದೆ ಎಂದು ಅರಿತೇ ಅವರು ಈ ನಿರ್ಧಾರ ತೆಗೆದುಕೊಂಡರು ಎಂಬುದು ಮತ್ತೊಂದು ವಾದ.

1. ಬಿಜೆಪಿ ಮತ್ತು ಚಡ್ಡಾ: ಇದು ಹೇಗೆ 'ಗೇಮ್ ಚೇಂಜರ್'?ನ್ ಈ ಮೈತ್ರಿಯು ಕೇವಲ ಚುನಾವಣಾ ಲಾಭಕ್ಕಷ್ಟೇ ಸೀಮಿತವಾಗಿಲ್ಲ. ಇದು ದೀರ್ಘಕಾಲದ ರಾಜಕೀಯ ತಂತ್ರಗಾರಿಕೆಯ ಭಾಗವಾಗಿದೆ.

* ಬಿಜೆಪಿಗೆ ಲಾಭ: ಬಿಜೆಪಿಯು ಪಂಜಾಬ್‌ನಲ್ಲಿ ಯಾವಾಗಲೂ 'ಕಿರಿಯ ಪಾಲುದಾರ'ನಾಗಿ ಅಕಾಲಿದಳದ ನೆರಳಿನಲ್ಲಿತ್ತು. ಆದರೆ ಈಗ ಸ್ವತಂತ್ರವಾಗಿ ಪಂಜಾಬ್ ಆಳುವ ಹಸಿವು ಬಿಜೆಪಿಯಲ್ಲಿದೆ. ರಾಘವ್ ಚಡ್ಡಾ ಅವರಂತಹ ಸುಶಿಕ್ಷಿತ, ಪಂಜಾಬಿ ಮೂಲದ ಮತ್ತು ಯುವಜನರಲ್ಲಿ ಪ್ರಭಾವ ಇರುವ ನಾಯಕ ಬಿಜೆಪಿಗೆ ಒಂದು ದೊಡ್ಡ ಶಕ್ತಿಯಾಗಲಿದ್ದಾರೆ. ಇದು ನಗರ ಪ್ರದೇಶದ ಸಿಖ್ ಮತದಾರರನ್ನು ಸೆಳೆಯಲು ಬಿಜೆಪಿಗೆ ಸಹಾಯ ಮಾಡಲಿದೆ.

* ಚಡ್ಡಾಗೆ ಲಾಭ: ಎಎಪಿಯಂತಹ ಸಣ್ಣ ವೇದಿಕೆಯಿಂದ ಹೊರಬಂದು, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಭಾವ ಹೊಂದಿರುವ ಬಿಜೆಪಿಯ ಭಾಗವಾಗುವುದು ಅವರ ವೃತ್ತಿಜೀವನಕ್ಕೆ ಹೊಸ ಆಯಾಮ ನೀಡಲಿದೆ. ಕೇಂದ್ರ ಸಚಿವ ಸಂಪುಟದಲ್ಲಿ ಸ್ಥಾನ ಅಥವಾ ಪಂಜಾಬ್‌ನ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸಿಕೊಳ್ಳುವ ಅವಕಾಶ ಅವರಿಗೆ ಇಲ್ಲಿ ಸಿಗಬಹುದು.

1. ಪ್ರಾದೇಶಿಕ ಪಕ್ಷಗಳ ಮೇಲಿನ ದಾಳಿ ಮತ್ತು ಎಎಪಿಯ ವೈಫಲ್ಯ : ಬಿಜೆಪಿಯು 'ಏಕರೂಪದ ರಾಜಕಾರಣ' (ಗಟಿಣಚಿಡಿಥಿ ಕಅಟುಣಚಿಛಿ) ಮತ್ತು 'ಕಾಂಗ್ರೆಸ್ ಮುಕ್ತ ಭಾರತ'ದ ನಂತರ ಈಗ 'ಪ್ರಾದೇಶಿಕ ಪಕ್ಷಗಳ ಮುಕ್ತ ಭಾರತ'ದತ್ತ ದಾಪುಗಾಲು ಹಾಕುತ್ತಿದೆ. ಮಹಾರಾಷ್ಟ್ರದಲ್ಲಿ ಶಿವಸೇನೆ ಮತ್ತು ಎನ್ಸಿಪಿ ಪಕ್ಷಗಳನ್ನು ಒಡೆದ ಮಾದರಿಯನ್ನೇ ಎಎಪಿ ಮೇಲೆಯೂ ಪ್ರಯೋಗಿಸಲಾಗುತ್ತಿದೆ.

ಆದರೆ, ಇದಕ್ಕೆ ಎಎಪಿ ಕೂಡ ಅಷ್ಟೇ ಜವಾಬ್ದಾರಿಯಾಗಿದೆ:

1. ವ್ಯಕ್ತಿ ಪೂಜೆ: ಭ್ರಷ್ಟಾಚಾರದ ವಿರುದ್ಧದ ಚಳವಳಿಯಿಂದ ಬಂದ ಪಕ್ಷವು ಕಾಲಕ್ರಮೇಣ ಕೇವಲ ಒಬ್ಬ ವ್ಯಕ್ತಿಯ (ಅರವಿಂದ್ ಕೇಜ್ರಿವಾಲ್) ಸುತ್ತ ಸುತ್ತಲು ಆರಂಭಿಸಿತು. ಆಂತರಿಕ ಪ್ರಜಾಪ್ರಭುತ್ವ ಮಾಯವಾಯಿತು.

2. ಸಿದ್ಧಾಂತದ ಕೊರತೆ: ಎಎಪಿಗೆ ಸ್ಪಷ್ಟವಾದ ಸಿದ್ಧಾಂತವಿಲ್ಲ. ಅವರ 'ಉಚಿತ ಕೊಡುಗೆ'ಗಳ ರಾಜಕಾರಣವು ಆರ್ಥಿಕವಾಗಿ ಜನರನ್ನು ಸೆಳೆಯಬಹುದು, ಆದರೆ ಸಾಂಸ್ಥಿಕವಾಗಿ ಕಾರ್ಯಕರ್ತರನ್ನು ಕಟ್ಟಿಹಾಕಲು ವಿಫಲವಾಯಿತು.

3. ಅತಿಯಾದ ಆತ್ಮವಿಶ್ವಾಸ: ಬೇರೆ ರಾಜ್ಯಗಳಿಗೆ ವಿಸ್ತರಿಸುವ ಭರದಲ್ಲಿ ತನ್ನ ಭದ್ರಕೋಟೆಯಾದ ದೆಹಲಿಯಲ್ಲೇ ಪಕ್ಷದ ನಾಯಕರನ್ನು ರಕ್ಷಿಸಿಕೊಳ್ಳಲು ಎಎಪಿ ವಿಫಲವಾಯಿತು.

4. ರಾಜಕೀಯ ಇತಿಹಾಸ: 'ಆಯಾ ರಾಮ್, ಗಯಾ ರಾಮ್' ನಿಂದ ಇಂದಿನವರೆಗೆ

ಭಾರತೀಯ ಸಂಸದೀಯ ಇತಿಹಾಸದಲ್ಲಿ ಪಕ್ಷಾಂತರ ಎನ್ನುವುದು ಒಂದು ಶಾಪದಂತೆ ಬೆನ್ನಟ್ಟಿದೆ. ಇದರ ಉಗಮ ಮತ್ತು ವಿಕಾಸವನ್ನು ನೋಡಿದರೆ ಚಡ್ಡಾ ಅವರ ನಡೆ ಹೊಸದೇನಲ್ಲ ಎಂದು ಅನಿಸುತ್ತದೆ.

* 1967ರ ಗಯಾ ಲಾಲ್ ಪ್ರಕರಣ: ಹರಿಯಾಣದ ಹಾಸನ್‌ಪುರ ಕ್ಷೇತ್ರದ ಶಾಸಕ ಗಯಾ ಲಾಲ್ ಅವರು ಕೇವಲ 9 ಗಂಟೆಗಳ ಅವಧಿಯಲ್ಲಿ ಮೂರು ಬಾರಿ ಪಕ್ಷ ಬದಲಾಯಿಸಿದರು. ಇದು "ಆಯಾ ರಾಮ್, ಗಯಾ ರಾಮ್" ಎಂಬ ಹಾಸ್ಯಸ್ಪದ ಆದರೆ ಕಹಿ ಸತ್ಯದ ನಾಣ್ಣುಡಿಗೆ ಕಾರಣವಾಯಿತು. ಇದು ಭಾರತೀಯ ರಾಜಕಾರಣದ ನೈತಿಕ ಅಧಃಪತನದ ಮೊದಲ ಮೆಟ್ಟಿಲಾಗಿತ್ತು.

* ಭಜನ್ ಲಾಲ್ ಅವರ ಚಾಣಕ್ಯತನ (1980): ಹರಿಯಾಣದ ಅಂದಿನ ಮುಖ್ಯಮಂತ್ರಿ ಭಜನ್ ಲಾಲ್ ಅವರು ಇಡೀ ಸರ್ಕಾರದ ಶಾಸಕರನ್ನೇ ಜನತಾ ಪಕ್ಷದಿಂದ ಕಾಂಗ್ರೆಸ್ಗೆ ಸೇರಿಸುವ ಮೂಲಕ ಇತಿಹಾಸ ನಿರ್ಮಿಸಿದ್ದರು. ಇದು ವೈಯಕ್ತಿಕ ಪಕ್ಷಾಂತರವಲ್ಲದೆ, 'ಸಗಟು ಪಕ್ಷಾಂತರ'ಕ್ಕೆ ಮಾದರಿಯಾಯಿತು.

* ಪಕ್ಷಾಂತರ ವಿರೋಧಿ ಕಾಯ್ದೆ (1985): ರಾಜೀವ್ ಗಾಂಧಿ ಸರ್ಕಾರವು ಇದನ್ನು ತಡೆಯಲು ಸಂವಿಧಾನದ 10ನೇ ಅನುಸೂಚಿಯನ್ನು ತಂದಿತು. ಆದರೆ, ಈ ಕಾಯ್ದೆಯು 2/3ರಷ್ಟು ಸದಸ್ಯರು ಪಕ್ಷ ಬಿಟ್ಟರೆ ಅದನ್ನು 'ವಿಲೀನ' ಎಂದು ಪರಿಗಣಿಸುತ್ತದೆ. ಇಂದಿನ ರಾಜಕಾರಣಿಗಳು ಈ ಕಾನೂನು ಬದ್ಧ ರಸ್ತೆಯನ್ನೇ ಪಕ್ಷಾಂತರಕ್ಕೆ ಬಳಸಿಕೊಳ್ಳುತ್ತಿದ್ದಾರೆ.

### ನವ–ಭಾರತದ ರಾಜಕಾರಣ:

ರಾಘವ್ ಚಡ್ಡಾ ಅವರ ಈ ನಡೆ ಭಾರತದ ರಾಜಕೀಯ ಇತಿಹಾಸದಲ್ಲಿ ಒಂದು ದೊಡ್ಡ ಮೈಲಿಗಲ್ಲಾಗಲಿದೆ. ಇದು ಪ್ರಾದೇಶಿಕ ಪಕ್ಷಗಳಿಗೆ ಎಚ್ಚರಿಕೆಯ ಗಂಟೆಯಾಗಿದ್ದು, ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಕೇವಲ 'ಭಾವನಾತ್ಮಕ ರಾಜಕಾರಣ' ಸಾಕಾಗುವುದಿಲ್ಲ, ಸಂಘಟನಾತ್ಮಕ ಶಕ್ತಿ ಮತ್ತು ನೈತಿಕ ಬದ್ಧತೆ ಅತಿ ಮುಖ್ಯ ಎಂಬುದನ್ನು ಸಾಬೀತುಪಡಿಸಿದರು

## ವಿನಯ ಕುಲಕರ್ಣಿ ಮೇಲ್ಮನವಿ

ಶಾಸಕರು ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಈ ಶಿಕ್ಷೆ ವಿಧಿಸಿ ಆದೇಶಿಸಿದ್ದರು.

## ಪ್ರವಾಸಿಗರ ಮೇಲೆ ಕಾಡಾನೆ ದಾಳಿ

ಒಂಟಿಸ ಲಗ ಪ್ರವಾಸಿಗರ ಮೇಲೆ ದಾಳಿ ಮಾಡುವ ದೃಶ್ಯ ಸ್ಥಳೀಯರ ಮೊಬೈಲ್‌ನಲ್ಲಿ ಸೆರೆಯಾಗಿದೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕೋಡಿಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## ಒಳ ಮೀಸಲಾತಿ ಕಣ್ಣೊರೆಸುವ ತಂತ್ರ

ಮೂರೇ ತಿಂಗಳಲ್ಲಿ ಈ ಕೆಲಸ ಮಾಡಿ ಬಹುದಿತ್ತು. ದಲಿತ ಹೋರಾಟಗಾರರ ಒತ್ತಡ ಮತ್ತು ಆಕ್ರೋಶದಿಂದ ತಪ್ಪಿಸಿಕೊಳ್ಳಲು ಸಿದ್ದರಾಮಯ್ಯ ಈ ತರಾತುರಿಯ ತೀರ್ಮಾನ ಮಾಡಿದ್ದಾರೆ ಎಂದು ಟೀಕಿಸಿದರು. ಸಚಿವ ಸಂಪುಟ ಸಭೆಗೆ ಉಪಮು ಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಂದಿರ ಲಿಲ್ಲ. ಈ ಒಳಮೀಸಲಾತಿ ನಿರ್ಧಾರ ತೃಪ್ತಿಕರ ಆಗುವುದಿಲ್ಲ ಎನ್ನುವುದು ಅವರಿಗೆ ಗೊತ್ತಿತ್ತು. ಸಚಿವ ಮುನಿಯಪ್ಪ ಅವರಿಗೆ ಸಂತೋಷದಿಂದ ಮಾತ ನಾಡು ಎಂದು ಸಿಎಂ ಹೇಳುವುದನ್ನು ನೋಡಿದರೆ, ಕಾಂಗ್ರೆಸ್‌ನ ದಲಿತ ನಾಯಕರಿಗೇ ಈ ನಿರ್ಧಾರದ ಮೇಲೆ ತೃಪ್ತಿ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ ಎಂದು ಟೀಕಿಸಿದರು.

ಆದಿ ಕರ್ನಾಟಕ, ಆದಿ ಆಂಧ್ರ ಹಾಗೂ ಆದಿ ದ್ರಾವಿಡ ಸಮುದಾಯಗಳಿಗೆ ಈ ನಿರ್ಧಾರದಿಂದ ಅನ್ಯಾಯವಾಗಿದೆ. ಅಲೆಮಾರಿಗಳಿಗೆ ನೀಡಬೇಕಾದ ಪ್ರತ್ಯೇಕ ಶೇ.1 ಮೀಸಲಾತಿ ನೀಡಿಲ್ಲ. ಶೇ.6ರಷ್ಟು ಬ್ಯಾಕ್‌ಲಾಗ್ ಹುದ್ದೆಗಳು ಎಲ್ಲಿವೆ? ಹಳೆಯ ಬ್ಯಾಕ್‌ಲಾಗ್ ಹುದ್ದೆಗಳನ್ನೇ ಇನ್ನೂ ಭರ್ತಿ ಮಾಡಿಲ್ಲ. ಈ ಒಳಮೀಸಲಾತಿಯನ್ನು ಮಾನಿಟರ್ ಮಾಡಲು ಯಾವ ಇಲಾಖೆಗೆ ಜವಾಬ್ದಾರಿ ಕೊಟ್ಟಿದ್ದೀರಿ ಎಂದು ಅವರು ಪ್ರಶ್ನಿಸಿದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

ಮೊದಲ ಪುಟದಿಂದ

## ಎಸ್ಸೆಸ್ಸೆಲ್ಸಿ ಫಲಿತಾಂಶ ಅನುಮಾನಾಸ್ಪದ

ಉತ್ತರ ಕರ್ನಾಟಕದಲ್ಲಿ ಈ ಕೊರತೆ ಜಾಸ್ತಿ ಇದೆ. ಹೀಗಿದ್ದರೂ ಶೇ 94ರಷ್ಟು ಫಲಿತಾಂಶ ಬಂದಿದ್ದಾರೂ ಹೇಗೆ? ಮಾತೃ ಭಾಷೆ ಕನ್ನಡದಲ್ಲೇ ಬಹಳ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರಲ್ಲಾ ಏಕೆ? ಇದು ಯಾವ ರೀತಿಯ ಸಾಧನೆ? ಹಟಕ್ಕೆ ಬಿದ್ದು ಪಾಸ್ ಮಾಡಿದ್ದಾರೆ. ಮಕ್ಕಳಿಗೆ ಗುಣಮಟ್ಟದ ಬೋಧನೆ, ಶಿಕ್ಷಕರ ನೇಮಕಾತಿ, ಶಾಲೆಗಳಿಗೆ ಸೌಲಭ್ಯ ಒದಗಿಸುವುದರಲ್ಲಿ ಹಟ ಇರಬೇಕಾಗಿತ್ತು. ಅದನ್ನು ಮುಚ್ಚಿಡಲು ಈ ರೀತಿ ಫಲಿತಾಂಶದ ನಾಟಕ ಮಾಡಲಾಗುತ್ತಿದೆ ಎಂದು ಅವರು ವಾಗ್ದಾಳಿ ನಡೆಸಿದರು. ಬಹಳಷ್ಟು ಶಿಕ್ಷಕರ ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಇಷ್ಟೊಂದು ಫಲಿತಾಂಶ ಬಂದಿದ್ದಾದರೂ ಹೇಗೆ? ಮಕ್ಕಳಲ್ಲಿನ ಓದುವ ಉತ್ಸಾಹವನ್ನೇ ಈ ಸರ್ಕಾರ ಕಿತ್ತುಕೊಂಡಿದೆ. ಸಿದ್ದರಾಮನಹುಂಡಿಯಲ್ಲೇ ಇರುವ ಸಿದ್ದರಾಮಯ್ಯ ಇನ್ನಾದರೂ ಹೊರಬರಲಿ. ವಸ್ತುಸ್ಥಿತಿ ತಿಳಿದುಕೊಂಡು ವ್ಯವಸ್ಥೆಯನ್ನು ಬದಲಾಯಿಸಲಿ ಎಂದು ಹೇಳಿದರು. ಹಿಂದಿ ವಿಷಯದಲ್ಲಿ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಛೀಮಾರಿ ಹಾಕಿದೆ. ಆದರೂ, ಸರ್ಕಾರ ಜನ, ಪ್ರಜಾತಂತ್ರ ಹಾಗೂ ಶಿಕ್ಷಣ ವಿರೋಧಿಯಾದ ಕೆಲಸವನ್ನೇ ಮುಂದುವರಿಸುತ್ತಿದೆ. ಇದೆಲ್ಲವನ್ನೂ ನೋಡಿದರೆ, ಶಿಕ್ಷಣ ಸಚಿವನಾಗಿದ್ದ ನನಗೆ ನೋವಾಗುತ್ತಿದೆ ಎಂದರು.

### ಸಚಿವ ಸುಧಾಕರ್ ಸ್ಥಿತಿ ಗಂಭೀರ

ಸುಧಾಕರ್ ಅನಾರೋಗ್ಯಕ್ಕೆ ಒಳಗಾಗಿದ್ದಾರೆ. ಖಾಸಗಿ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

### ದರ ಏರಿಕೆ

ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗುವ ಸಾಧ್ಯತೆ ಇದೆ. ಆದರೆ ಸಾಮಾನ್ಯ ಜನರು ಬಳಸುವ ಮದ್ಯದ ಬೆಲೆ ಶೇ.20ರಷ್ಟು ಏರಿಕೆಯಾಗಲಿದೆ. 2023ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಐದನೇ ಬಾರಿಗೆ ದರ ಏರಿಕೆ ಮಾಡುತ್ತಿರುವುದಕ್ಕೆ ಮದ್ಯಪ್ರಿಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

### ಮತ ಮರು ಎಣಿಕೆ

ಸಲ್ಲಿಸಿಕೊಳ್ಳಲು ಅವಕಾಶ ನೀಡಲಾಗಿತ್ತು. ಆದರೆ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸದ ಕಾರಣ ಈಗ ಹೈಕೋರ್ಟ್ ಆದೇಶ ಜಾರಿಗೊಳಿಸಲಾಗುತ್ತಿದೆ.

## ರಿಯಾಯಿತಿ ಘೋಷಿಸಿದ ಗುರುಕುಲ

ಮೈಸೂರು: ರಾಜ್ಯ ಸರ್ಕಾರದ ಅನುದಾನಿತ ಶಾಲಾ ನೌಕರರ ಮಕ್ಕಳಿಗೆ ವಿಶೇಷ ರಿಯಾಯಿತಿ ಹಾಗೂ ಉಚಿತ ಸೌಲಭ್ಯವನ್ನು ಮಾಲ್ಲಾಡಿಹಳ್ಳಿಯ ಸ್ವತಂತ್ರಪದವಿ ಪೂರ್ವ ಕಾಲೇಜು ಮತ್ತು ಕುವೆಂಪುನಗರದ ಎಂ.ಎ.ಎಸ್.ವಿ.ಎಸ್. ಗುರುಕುಲ ಪಿಯು ಕಾಲೇಜು ಘೋಷಣೆ ಮಾಡಿದೆ.

ಈ ಸಂಬಂಧ ಕಾಲೇಜಿನಲ್ಲಿ ಭಿತ್ತಿಪತ್ರ ಬಿಡುಗಡೆ ಮಾಡಿದ ಕರ್ನಾಟಕ ರಾಜ್ಯ ಅನುದಾನಿತ ಶಾಲಾ–ಕಾಲೇಜುಗಳ ಸಂಘದ ಗೌರವಾಧ್ಯಕ್ಷ ಡಿ.ಸಿ.ಗೋಪಿನಾಥ್ ಮಾತನಾಡಿ, ಅನುದಾನಿತ ಶಾಲಾ ನೌಕರರ ಮಕ್ಕಳಿಗೆ ವಿಶೇಷ ಸೌಲಭ್ಯ ಶುಲ್ಕ ರಿಯಾಯಿತಿ ನೀಡಿದ್ದು, ಇದರ ಸದ್ಬಳಕೆ ಮಾಡಿಕೊಳ್ಳುವಂತೆ ಮನವಿ ಮಾಡುತ್ತೇನೆಂದರು. ಹಿಂದಿ ಭಾಷಾ ಪರೀಕ್ಷೆಯಲ್ಲಿ ಸರ್ಕಾರ ಹಾಗೂ ಶಿಕ್ಷಣ ಇಲಾಖೆಗೆ ಹೈಕೋರ್ಟ್ ಛೀಮಾರಿ ಹಾಕಿದೆ. ಹಿಂದಿನ ಅಂಕಪದ್ಧತಿಯನ್ನು ತರಬೇಕು. ಗ್ರೇಡ್ ಪದ್ಧತಿಯನ್ನು ಕೈ ಬಿಡಬೇಕೆಂದು ಹೇಳಿದೆ. ಸರ್ಕಾರ ಗ್ರೇಡ್ ಪದ್ಧತಿ ತರಲು ಮುಂದಾದಾಗ ನಮ್ಮ ಸಂಘಕ್ಕೆ ಅದಕ್ಕೆ ವಿರೋಧ ಮಾಡಿ ರಾಜ್ಯ ಸರ್ಕಾರ ಹಾಗೂ ನ್ಯಾಯಾಲಯಕ್ಕೂ ಸಹ ಗ್ರೇಡ್ ಪದ್ಧತಿ ಕೈ ಬಿಟ್ಟು ಹಿಂದಿನಂತೆ ಅಂಕಪದ್ಧತಿಯನ್ನೇ ಮುಂದುವರೆಸಬೇಕೆಂದು ಮನವಿ ಮಾಡಿದ್ದೇವು. ಈ ಹಿನ್ನೆಲೆಯಲ್ಲಿ ನ್ಯಾಯಾಲಯ ಆದೇಶವನ್ನು ಸ್ವಾಗತಿಸುತ್ತೇವೆ. ಮುಂದಿನ ದಿನಗಳಲ್ಲಿಯೂ ಅಂಕಪದ್ಧತಿಯನ್ನೇ ಮುಂದುವರೆಸಬೇಕೆಂದು ಮನವಿ ಮಾಡುತ್ತೇವೆಂದರು.



ಅನುದಾನಿತ ಶಾಲೆಗಲ್ಲಿ 2006ರಿಂದ ಹಿಂದೆ ನೇಮಕಗೊಂಡವರಿಗೆ ಯಾವುದೇ ನಿವೃತ್ತಿ ಸೌಲಭ್ಯವಿಲ್ಲ. ಅಂತಹವರಿಗೆ ಯಾವುದೇ ರೀತಿಯಾದ ಸೌಲಭ್ಯ ಇಲ್ಲವಾಗಿದೆ. ಈ ವಿಚಾರವಾಗಿ 2014ರಿಂದ ಪಿಂಚಣಿ ಸೌಲಭ್ಯಕ್ಕಾಗಿ ಹೈಕೋರ್ಟ್ ಮಾಹಿತಿ ಪಡೆದು ಆದೇಶವನ್ನು ಕೊಡುತ್ತಿದೆ. ಮುಂದಿನ ನ್ಯಾಯಾಲಯದ ಆದೇಶವನ್ನು ಯಥಾವತ್ ಜಾರಿಗೊಳಿಸಬೇಕೆಂದು ಕೋರುತ್ತೇವೆ. ಒಳಮೀಸಲಾತಿ ನೆಪದಲ್ಲಿ 2016ರಿಂದ ಶಿಕ್ಷಕರ ನೇಮಕಾತಿ ಆಗಿಲ್ಲ. ಶೀಘ್ರ ನೇಮಕಾರಿ ಮಾಡಬೇಕೆಂದು ನನ್ನ ಒತ್ತಾಯವಾಗಿದೆ. ಅದೇ ರೀತಿ ಆರೋಗ್ಯ ಸಂಜೀವಿನಿ ಜಾರಿಗೆ ತರಬೇಕಿದೆ ಎಂದು ಹೇಳಿದರು.

ಮಾಲ್ಲಾಡಿಹಳ್ಳಿಯ ಸ್ವತಂತ್ರಪದವಿಪೂರ್ವ ಕಾಲೇಜಿನ ಉಪಾಧ್ಯಕ್ಷ ಶ್ರೀ ಕಂಠಮೂರ್ತಿ ಮಾತನಾಡಿ, ರಾಜ್ಯ ಸರ್ಕಾರದ ಅನುದಾನಿತ ಶಾಲಾ ನೌಕರರ ಮಕ್ಕಳಿಗೆ ವಿಶೇಷ ಸೌಲಭ್ಯಗಳು ಶೇ.94ರಷ್ಟು ಮೇಲಿದ್ದವರಿಗೆ ಶೇ.50ರಷ್ಟು ರಿಯಾಯಿತಿ ಶೇ.96ಕ್ಕಿಂತ ಮೇಲೆ ಇರುವ ಮಕ್ಕಳಿಗೆ ಪೂರ್ಣ ವಿನಾಯಿತಿ ನೀಡಿದ್ದೇವೆ. ವಿದ್ಯಾರ್ಥಿನಿಲಯ, ಊಟ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಳ್ಳುವಂತೆ ಕೋರಿದರು.

ಮೊದಲ ಪುಟದಿಂದ

## ನಿಲ್ದಾಣಕ್ಕೆ ಭೂಮಿ ನೀಡಿ

ಯುಟಿಲಿಟಿ ಡಕ್ಟ್ ಸೇರಿದಂತೆ 3.5 ಕಿ.ಮೀ. ಮಾರ್ಗ ತಿರುವನ್ನು 612 ಕೋಟಿ ಪರಿಷ್ಕೃತ ವೆಚ್ಚದಲ್ಲಿ ಪ್ರಸ್ತಾಪಿಸಲಾಗಿದೆ. 2023ರ ಹಿಂದಿನ ಭೂಸ್ವಾಧೀನ ಸೇರಿದಂತೆ ಹೆಚ್ಚುವರಿ ವೆಚ್ಚವನ್ನು ಎನ್‌ಎಚ್‌ಎಐ ಭರಿಸಬೇಕೆಂದು ಪ್ರಾಧಿಕಾರ ಕೋರಿದೆ. ಇದನ್ನು ನವದೆಹಲಿಯ ಎನ್‌ಎಚ್‌ಎಐ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು. ರನ್‌ವೇ ವಿಸ್ತರಣೆಗೊಂಡರೆ ಇಲ್ಲಿಗೆ ಹೆಚ್ಚಿನ ವಿಮಾನಗಳ ಕಾರ್ಯಾಚರಣೆ ಕಲ್ಪಿಸಬಹುದಾಗಿದೆ. ಪ್ರಮುಖ ನಗರಗಳಿಗೆ ಸಂಪರ್ಕ ದೊರೆಯಲಿದೆ. ಈಗಿನ ರನ್‌ವೇ 1,740 ಮೀಟರ್ ಅಳತೆ ಹೊಂದಿದೆ. ಇದು ಎಟಿಆರ್ 72 ವಿಮಾನಗಳಿಗೆ ಸೂಕ್ತವಾಗಿದೆ. ಇದನ್ನು 2,300 ಮೀಟರ್ *45 ಮೀಟರ್‌ಗೆ ವಿಸ್ತರಿಸಿದರೆ ದೊಡ್ಡ ಏರ್‌ಬಸ್ ಎ–320 ಮತ್ತು ಬೋಯಿಂಗ್ 737 ಮಾದರಿಯ ವಿಮಾನಗಳ ಕಾರ್ಯಾಚರಣೆಗಳಿಗೆ ಅವಕಾಶ ದೊರೆಯುತ್ತದೆ. ಇದಕ್ಕೆ 240 ಎಕರೆ ಭೂಮಿ ಬೇಕಾಗುತ್ತದೆ. ಅದರಲ್ಲಿ 206 ಎಕರೆಯನ್ನು ಕೆಐಎಡಿಬಿ ಸ್ವಾಧೀನಪಡಿಸಿಕೊಂಡಿದೆ ಮತ್ತು ಭೂಮಾಲೀಕರಿಗೆ ಪರಿಹಾರವನ್ನು ಸಂಪೂರ್ಣವಾಗಿ ವಿತರಿಸಲಾಗಿದೆ. ಉಳಿದ 34 ಎಕರೆ ಸರ್ಕಾರಿ ಭೂಮಿಯಾಗಿದೆ. ನಿಲ್ದಾಣದ ಉತ್ತರ ಭಾಗದಲ್ಲಿ 7 ಎಕರೆಯಲ್ಲಿ ರಚಿಸಲಾದ ಕಂದಾಯ ಬಡಾವಣೆಗೆ ಸೇರಿದ ಜಾಗದ ಸಮಸ್ಯೆ ನಿವಾರಿಸಬೇಕಿದೆ ಎಂದು ವಿಮಾನನಿಲ್ದಾಣದ ನಿರ್ದೇಶಕಿ ಪಿ.ವಿ. ಉಷಾಕುಮಾರಿ ತಿಳಿಸಿದರು. ಶಾಸಕ ಜಿ.ಟಿ. ದೇವೇಗೌಡ, ಡಿಸಿಪಿ ಹರ್ಷ ಪ್ರಿಯಂವದ ಪಾಲ್ಗೊಂಡಿದ್ದರು.

## ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತೋತ್ಸವ

ಗುಂಡ್ಲುಪೇಟೆ: ಕರ್ನಾಟಕ ರಾಜ್ಯ ಮೂಲ ಭೂತ ಹಕ್ಕುಗಳ ರಕ್ಷಣೆ ಹಾಗೂ ಭ್ರಷ್ಟಾಚಾರ ನಿರ್ಮೂಲನಾ ಸಮಿತಿಯ ಕೇಂದ್ರ ಕಚೇರಿ ತೆರಕಣಾಂಬಿಯಲ್ಲಿ ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತೋತ್ಸವ ಕಾರ್ಯಕ್ರಮವನ್ನು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಅಚರಣೆಮಾಡಲಾಯಿತು

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಮಿತಿಯ ಸಂಸ್ಥಾಪಕ ರಾಜ್ಯಾಧ್ಯಕ್ಷೆ ಲಕ್ಷ್ಮಿ ಮಹೇಶ್ ರವರು ಮಾತನಾಡಿ ಪ್ರಸ್ತುತ ಕಾಲಘಟ್ಟದಲ್ಲಿ ಹಿಂದಿನ ಕಾಲಘಟ್ಟ ದಲ್ಲಿದ್ದ ಅಸಮಾನತೆ ಕಡಿಮೆಯಾಗಿದೆ, ನಮ್ಮ ಮುಂದಿನ ತಲೆಮಾರಿನಲ್ಲಿ ಜಾತಿವ್ಯವಸ್ಥೆ ಸಂಪೂರ್ಣವಾಗಿ ನಾಶ ಹೊಂದಿ ಬಸವಣ್ಣ ನವರ ಆಶಯ ನೆರವೇರುತ್ತದೆ ಅದಕ್ಕೆ ಪ್ರಸ್ತುತ ಕಾಲಮಾನದಲ್ಲಿರುವ ನಾವು ಸಮಾನತೆ ಆಚರಿಸುವುದು, ಜಾತಿ ತಾರತಮ್ಯ ವಿರೋಧಿಸಿ ಆರೋಗ್ಯಕರ ಸಮಾಜ ನಿರ್ಮಾಣ ಮಾಡಬೇಕು ಎಂದು ತಿಳಿಸಿದರು.

ಸಾಹಿತಿ ಕಾಳಿಂಗ ಸ್ವಾಮಿ ಸಿದ್ದಾರ್ಥ್ ರವರು ಮಾತನಾಡಿ ಬಸವಣ್ಣ ನವರ ಜೀವನ ಹಾಗೂ ವಿಚಾರದಾರೆ ತಿಳಿಸಿಕೊಟ್ಟರು,



ಜಿಲ್ಲಾಧ್ಯಕ್ಷರಾದ ಎಚ್ ಎಸ್ ಸುಪ್ರೀತ್ ಕುಮಾರ್ ಮಾತನಾಡಿ ಖಾಸಗಿ ಶಾಲೆ ಗಳಲ್ಲಿಗೆ ಮಕ್ಕಳನ್ನು ಸೇರಿಸಿ ಪೋಷಕರು ಸಾಲ ಮಾಡಿ ಸಾಲಗಾರರಾಗುತ್ತಿದ್ದಾರೆ ಇದರಿಂದ ಸರ್ಕಾರಿ ಶಾಲೆಗಳು ನಾಶ ಹೊಂದಿ ಪೋಷಕರು ನಾಶಹೊದುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು ಈ ಕಾರ್ಯಕ್ರಮ ದಲ್ಲಿ ರಾಜ್ಯ ಗೌರವ ಅಧ್ಯಕ್ಷ ಗುರುಸ್ವಾಮಪ್ಪ, ರಾಜ್ಯ ಸಹಕಾರ್ಯ ದರ್ಶಿ ಡಿ ಮಾದೇಶ್, ಚಾಮರಾಜನಗರ ಜಿಲ್ಲಾಧ್ಯಕ್ಷ ಎಚ್ ಎಸ್ ಸುಪ್ರೀತ್ ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ ಪಿ ಮಂಜು ನಾಥ್ ಕೊಡಸೋಗೆ, ಶೇಖರ್, ತಗ್ಗಲೂರು ಸಿದ್ದಪ್ಪ, ಕಾಳಿಂಗ ಸ್ವಾಮಿ, ತಾಲ್ಲೂಕು ಪಂಚಾಯ್ತಿ ಮಾಜಿ ಉಪಾಧ್ಯಕ್ಷೆ ಜಯಂತಿ, ನರಸೀಪುರ ತಾಲ್ಲೂಕು ಅಧ್ಯಕ್ಷರು ರಾಮು, ತಾಳವಾಡಿ ಅಧ್ಯಕ್ಷ ಮಲ್ಲೇಶ್, ಮಹಿಳಾ ಅಧ್ಯಕ್ಷ ಇಂದಿರಾ ಶಾಂತಮಲ್ಲಪ್ಪ, ಬೆಂಡರ ವಾಡಿ ಚಿನ್ನಸ್ವಾಮಿ, ಮನಸು ಕಣ್ಣೆಗಾಲ, ಹಾಗೂ ಶಿವ ನಂಜಯ್ಯ, ಸಿದ್ದಪ್ಪ, ಕರ್ಣ, ಮಂಜುಳಾ, ಯಶೋದಾ, ಚಿಕ್ಕುಸಯ್ಯ ಇತರರು ಹಾಜರಿದ್ದರು

ಡಾ.ಸಿಪಿಕೆ ವಿಷಾದ –

## ಪ್ರಸ್ತುತ ಸಮಾಜದಲ್ಲಿ ಮಾನವೀಯತೆಗೆ ಬೆಲೆಯಿಲ್ಲ

ಮೈಸೂರು: ಪ್ರಸ್ತುತ ಸಮಾಜದಲ್ಲಿ ಮಾನವೀಯತೆಗೆ ಬೆಲೆಯಿಲ್ಲ ಎಂದು ಹಿರಿಯ ಸಾಹಿತಿ ಪ್ರೊ.ಸಿ.ಪಿ. ಕೃಷ್ಣಕುಮಾರ್ ವಿಷಾದಿಸಿದರು,

ವಿಶ್ವೇಶ್ವರ ನಗರದಲ್ಲಿ ಶನಿವಾರ ಏರ್ಪಡಿಸಿದ್ದ ಹಿರಿಯ ವಕೀಲ ಎಚ್‌ವಿಎಸ್ ಮೂರ್ತಿ ಅವರ 80ನೇ ವರ್ಷದ ಅಭಿನಂದನಾ ಸಮಾರಂಭದಲ್ಲಿ 'ಎಚ್‌ವಿಎಸ್ ಮೂರ್ತಿ ಬದುಕು ಹೋರಾಟದ ಅವಕಲೋಕನ' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಇದಲ್ಲದೇ ಪ್ರಸ್ತುತ .ಪುಸ್ತಕ ,ಸತ್ಯಾಗ್ರಹಗಳಿಗೆ ಬೆಲೆ ಇಲ್ಲದಂತಾಗಿದೆ ಎಂದರು. ಎಚ್‌ವಿಎಸ್ ಮೂರ್ತಿ ಅವರು. ಜ್ಞಾನವೃದ್ಧರು ಹಾಗೂ ತಪೋವೃದ್ಧರೂ ಹೌದು.. ಅವರ ನಡೆ–ನುಡಿಯನ್ನು ಸಂಕೇತಿಸುವ ಕೃತಿ ಇದು.. ಅವರು ಬದುಕು– ಹೋರಾಟದ ಬಗ್ಗೆ ಕೇಳದವರು ವಿರಳ. ಅಪರೂಪದ ಆತ್ಮೀಯ ಎನಿಸಬಹುದಾದ ಗ್ರಂಥ ಇದಾಗಿದ್ದು, ಅವರು ಬರೆದಿಲ್ಲ. ಆದರೆ ಲಿಪಿಕಾರರ ಮೂಲಕ ಅದನ್ನು ದಾಟಿಸಿದ್ದಾರೆ ಎಂದರು ಈ ಕೃತಿಯಲ್ಲಿ ಹಿರಿಕಿರಿಯರು



ತಿಳಿದುಕೊಳ್ಳಬಹುದಾದ ಸಾಕಷ್ಟು ವಿಷಯಗಳಿವೆ ಸಂದೇಶ ಮತ್ತು ಸೂಕ್ತಿಗಳು ತುಂಬಿ ತುಳುಕುತ್ತಿವೆ.. ಮೂರ್ತಿ ಅವರು ಕೃಷಿ ಅಪಾರ ಜ್ಞಾನವುಳ್ಳವರು ಮತ್ತು ಶಾರದಾ ನಿಕೇತನದ ಸಂಸ್ಥಾಪಕರಲ್ಲಿ ಒಬ್ಬರು. ಇದೊಂದು ರೀತಿಯಲ್ಲಿ ಆತ್ಮಕತೆ ಇದ್ದಹಾಗೆ..ಕೃಷಿಯ ಮೌಲಿಕತೆಯನ್ನು ಕೃತಿಯಲ್ಲಿ ಹೇಳಿದ್ದಾರೆ ಎಂದು ಹೇಳಿದರು.

ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಸರ್ವಜಯಾನಂದಜಿ ಸಾನ್ನಿಧ್ಯ ವಹಿಸಿದ್ದರು. ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್, ಕಾರ್ಯದರ್ಶಿ ಎ.ಜಿ. ಸುಧೀರ್, ರಾಜ್ಯ ಪರಿಷತ್ ಸದಸ್ಯ ಚಂದ್ರಮೌಳಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಶಾರದವಿಲಾಸ ಶಿಕ್ಷಣ ಸಂಸ್ಥೆ ಮಾಜಿ ಅಧ್ಯಕ್ಷ ಎಸ್. ನಾರಾಯಣ ರಾವ್, ನಂಜನಗೂಡಿನ ಸಮಾಜ ಸೇವಕ ಯು.ಎನ್. ಪದ್ಮನಾಭರಾವ್, ಎಂಕೆಬಿಎಸ್ ಅಧ್ಯಕ್ಷ ವಿಶ್ವನಾಥಯ್ಯ, ನಗರ ಜೆಡಿಎಸ್ ಅಧ್ಯಕ್ಷ ಎಸ್‌ಬಿಎಂ ಮಂಜು, ಪ್ರಕಾಶಕ ಶ್ರೀಧರ್ ಮುಖ್ಯಅತಿಥಿಗಳಾಗಿದ್ದರು. ನಗರಪಾಲಿಕೆ ಮಾಜಿ ಸದಸ್ಯ ಎಂ. ಸುನಿಲ್ ಸ್ವಾಗತಿಸಿದರು. ಕನ್ನಡ ಚಳವಳಿಗಾರ ಬಿ.ಎ. ಶಿವಶಂಕರ್ ನಿರೂಪಿಸಿದರು. ಎಚ್.ಎಸ್. ವೀಣಾ ಮೂರ್ತಿ ಪ್ರಾಸ್ತಾವಿಕ ಭಾಷಣ ಮಾಡಿದರು. ಎಚ್.ಎಸ್. ವಿದ್ಯಾ ಮೂರ್ತಿ, ಡಾ.ಎಚ್.ಎಸ್. ವಾಣಿ ಮೂರ್ತಿ, ಶ್ರೀನಿಧಿ ಜೋಷಿ, ಎಂಕೆಎಸ್ ಈಶ್ವರ್, ಎಂ.ಎಸ್. ರವೀಂದ್ರ, ಎಚ್.ವಿ.ರವಿಕಾಂತ್, ಸಿ.ಗುರುಸ್ವಾಮಿ, ಶೈಲೇಂದ್ರ ಮೊದಲಾದವರು ಇದ್ದರು.

# ಎಸ್‌ಎಸ್‌ಎಲ್‌ಸಿ: ವಿದ್ಯಾರ್ಥಿಗೆ ಸನ್ಮಾನ

ಚಾಮರಾಜನಗರ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಚಾಮರಾಜನಗರ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿರುವ ತಾಲೂಕಿನ ಲಕ್ಷ್ಮೀಪುರ ಗ್ರಾಮದ ವಿದ್ಯಾರ್ಥಿ ಎಸ್.ಮಹದೇವಸ್ವಾಮಿ ಅವರನ್ನು ಜಿಲ್ಲಾ ಉಪ್ಪಾರ ಯುವಕರ ಸಂಘದ ವತಿಯಿಂದ ಸನ್ಮಾನಿಸಲಾಯಿತು.

ತಾಲೂಕಿನ ಲಕ್ಷ್ಮೀಪುರ ಗ್ರಾಮದ ಶಿವರಾಜ ಶೆಟ್ಟಿ, ರತ್ನಮ್ಮ ದಂಪತಿ ಪುತ್ರ ಹಾಗೂ ಮಲ್ಲಯ್ಯನ ಪುರ ಸರ್ಕಾರಿ ಆದರ್ಶ ಶಾಲೆಯ ವಿದ್ಯಾರ್ಥಿ ಎಸ್. ಮಹದೇವಸ್ವಾಮಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 614 ಅಂಕ ಪಡೆಯುವ ಚಾಮರಾಜನಗರ ತಾಲೂಕಿಗೆ ಪ್ರಥಮ ಪಡೆದಿರುವ ಅವರನ್ನು ಜಿಲ್ಲಾ ಉಪ್ಪಾರ ಯುವಕರ ಸಂಘದ ಸನ್ಮಾನಿಸಲಾಯಿತು. ನಗರದ ಸೆಸ್ಕಾಂ ಕಚೇರಿಯಲ್ಲಿ ವಿದ್ಯಾರ್ಥಿಯನ್ನು ಸನ್ಮಾನಿಸಿದ ಕೆಇಬಿ ಲೆಕ್ಕಾಧಿಕಾರಿ ಎನ್.ಮಹೇಶ್ ಮಾತನಾಡಿ, ಸರ್ಕಾರಿ ಆದರ್ಶ ಶಾಲೆಯಲ್ಲಿ ಓದಿದ ವಿದ್ಯಾರ್ಥಿ ಎಸ್. ಮಹದೇವಸ್ವಾಮಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 614 ಅಂಕ ಪಡೆಯುವ ಚಾಮರಾಜನಗರ ತಾಲೂಕಿಗೆ ಪ್ರಥಮ ಪಡೆದಿರುವ ತುಂಬಾ ಸಂತಸವಾಗಿದೆ. ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಒಳ್ಳೆಯದಾಗಲಿ ಎಂದು ಶುಭ ಕೋರಿದರು.



### ಉಪ್ಪಾರ ಸಮುದಾಯಕ್ಕೆ ಹೆಮ್ಮೆ

ಜಿಲ್ಲಾ ಉಪ್ಪಾರ ಯುವಕರ ಸಂಘದ ಅಧ್ಯಕ್ಷ ಎಂ. ಜಯಕುಮಾರ್ ಮಾತನಾಡಿ, ನಮ್ಮ ಸಮುದಾಯದ ವಿದ್ಯಾರ್ಥಿ ಎಂ.ಮಹದೇವಸ್ವಾಮಿ : ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 614 ಅಂಕ ಪಡೆಯುವ ಚಾಮರಾಜನಗರ ತಾಲೂಕಿಗೆ ಪ್ರಥಮ ಪಡೆದಿರುವ ಉಪ್ಪಾರ ಸಮುದಾಯಕ್ಕೆ ಹೆಮ್ಮೆ ತರುವಂತಾಗಿದೆ. ಸರ್ಕಾರಿ ಶಾಲೆಯಲ್ಲಿ ಓದಿ ಹೆಚ್ಚಿನ ಅಂಕ ಪಡೆಯುವ ಮೂಲಕ ವಿದ್ಯಾರ್ಥಿ ಮಹದೇವಸ್ವಾಮಿ ಇತರ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿದ್ದಾನೆ ಎಂದರು. ಈ ಸಂದರ್ಭದಲ್ಲಿ ಸೆಸ್ಕಾಂ ಜೆಇ ಮರಿಸ್ವಾಮಿ, ಸಂಘದ ಉಪಾಧ್ಯಕ್ಷ ಬಿ.ಸ್ವಾಮಿ ಹೊಂಗನೂರು ಯಜಮಾನ ಜಯಸಿದ್ದು, ಕೋಡಿಮೋಳೆ ರಂಗಸ್ವಾಮಿ ಇತರರು ಹಾಜರಿದ್ದರು

# ರಾಷ್ಟ್ರೀಯ ಪಂಚಾಯತ್ ರಾಜ್ ದಿನ ಆಚರಣೆ

ಚಾಮರಾಜನಗರ, ಇಲ್ಲಿನ ತಾಲೂಕು ಪಂಚಾಯತಿಯಲ್ಲಿ ರಾಷ್ಟ್ರೀಯ ಪಂಚಾಯತ್ ರಾಜ್ ದಿನವನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಲಾಯಿತು.

ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಪಿತಾಮಹ ಅಬ್ದುಲ್ ನಜೀರ್ ಸಾಬ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಣೆ ಮಾಡಲಾಯಿತು.

ತಾಲೂಕು ಪಂಚಾಯತಿ ಕಾರ್ಯನಿರ್ವಾಹಕಾಧಿಕಾರಿ ಗಿರಿಧರ್ ಪುಷ್ಪಾರ್ಚನೆ ಮಾಡಿ ಮಾತನಾಡಿ, ದೇಶದಲ್ಲಿ ಪ್ರತಿವರ್ಷ ಏ. 24 ರಂದು ರಾಷ್ಟ್ರೀಯ ಪಂಚಾಯತ್ ರಾಜ್ ದಿನವನ್ನು ಆಚರಿಸಲಾಗುತ್ತದೆ. 1993 ರಲ್ಲಿ ಸಂವಿಧಾನದ 73ನೇ ತಿದ್ದುಪಡಿ ಕಾಯ್ದೆಯಡಿ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಬಂದ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ, ಇದು ಗ್ರಾಮ ಮಟ್ಟದಲ್ಲಿ ಅಧಿಕಾರ ವಿಕೇಂದ್ರೀಕರಣ, ಸ್ಥಳೀಯ ಸ್ವ-ಆಡಳಿತ ಮತ್ತು ಗ್ರಾಮೀಣಾಭಿವೃದ್ಧಿಯನ್ನು ಉತ್ತೇಜಿಸುತ್ತದೆ ಎಂದರು. ಗ್ರಾಮೀಣ ಜನರಿಗೆ ಆಡಳಿತದಲ್ಲಿ ಪಾಲ್ಗೊಳ್ಳುವ ಅವಕಾಶ ನೀಡುವುದು ಮತ್ತು ಸ್ಥಳೀಯ ಆಡಳಿತವನ್ನು ಬಲಪಡಿಸುವುದು ಇದರ ಉದ್ದೇಶವಾಗಿದೆ. 2010 ರಿಂದ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಮೊದಲ ರಾಷ್ಟ್ರೀಯ ಪಂಚಾಯತ್ ರಾಜ್ ದಿನವನ್ನು ಘೋಷಿಸಿದರು.ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯ, ಕುಡಿಯುವ ನೀರು, ಮತ್ತು ಮೂಲಸೌಕರ್ಯಗಳ ಅಭಿವೃದ್ಧಿಯಲ್ಲಿ ಪಂಚಾಯತ್‌ಗಳ ಪಾತ್ರವನ್ನು ಇದು ಗುರುತಿಸುತ್ತದೆ ಎಂದರು.




### ಸಾಧಕರಿಗೆ ಸನ್ಮಾನ

ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿದ, ತೆರಿಗೆ ವಸೂಲಾತಿಯಲ್ಲಿ ಶೇ 100% ಗುರಿ ತಲುಪಿದ ತಾಲೂಕಿನ ಗ್ರಾಮ ಪಂಚಾಯತಿಗಳಾದ ಸಾಗಡೆ, ಅರಕಲವಾಡಿ, ಯರಗನಹಳ್ಳಿ, ಬಿಸಲವಾಡಿ.

### ಮಹಿಳಾ ಸ್ನೇಹಿ ಪಂಚಾಯಿತಿ

ಇರಸವಾಡಿ, ಉತ್ತಮ ಅರಿವು ಕೇಂದ್ರ ಸಂತೆಮರಹಳ್ಳಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಹಾಯಕ ಲೆಕ್ಕಾಧಿಕಾರಿ ಪ್ರಭುಸ್ವಾಮಿ, ಅಧಿಕಾರಿಗಳು, ಸಿಬ್ಬಂದಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ಬಿಲ್ ಕಲೆಕ್ಟರ್‌ಗಳು, ಕ್ಲರ್ಕ್ ಕಮ್ ಡೇಟಾ ಎಂಟ್ರಿ ಆಪರೇಟರ್‌ಗಳು ಹಾಗೂ ವಾಟರ್‌ಮ್ಯಾನ್‌ಗಳು , ಹಾಜರಿದ್ದರು.

# ಡಾ.ರಾಜ್‌ಕುಮಾರ್ ಕೊಡುಗೆ ಅಪಾರ

## ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅಭಿಮತ | ಡಾ.ರಾಜ್‌ಕುಮಾರ್ 97ನೇ ಜಯಂತಿ

ಚಾಮರಾಜನಗರ, ಕನ್ನಡ ಭಾಷೆ, ಕಲೆ, ಸಂಸ್ಕೃತಿಗೆ ವರನಟ ಡಾ. ರಾಜ್‌ಕುಮಾರ್ ಕೊಡುಗೆ ಅಪಾರವಾಗಿದೆ ಎಂದು ಎಂ.ಎಸ್.ಐ.ಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ತಿಳಿಸಿದರು.

ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಂಯುಕ್ತಾಶ್ರಯದಲ್ಲಿ ಕನ್ನಡದ ಮೇರುನಟ ಡಾ. ರಾಜ್‌ಕುಮಾರ್ ಅವರ 97ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಡಾ. ರಾಜ್‌ಕುಮಾರ್ ಚಾಮರಾಜನಗರ ಜಿಲ್ಲೆಯವರು ಎಂಬುದು ನಮ್ಮ ಹೆಮ್ಮೆಯಾಗಿದೆ. ಬಾಲ್ಯದಲ್ಲಿ ತಂದೆಯವರಾದ ಪುಟ್ಟಸ್ವಾಮಿಯವರು ನಡೆಸುತ್ತಿದ್ದ ಸಂಚಾರಿ ನಾಟಕ ಕಂಪನಿಯಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ಮಾಡಿ ಮೆಚ್ಚುಗೆ ಗಳಿಸಿದ್ದರು. 1956 ರಲ್ಲಿ ಬೇಡರ ಕಣ್ಣಪ್ಪ ಚಲನಚಿತ್ರದ ಮೂಲಕ ಮೊದಲ ಬಾರಿಗೆ ನಾಯಕ ನಟರಾಗಿ ನಟಿಸಿದರು. ಕನ್ನಡ ಭಾಷೆ ಬಿಟ್ಟು ಇತರೆ ಬಾಷೆಗಳಲ್ಲಿ ನಟಿಸಲು ಅವಕಾಶ ಬಂದರೂ ಅದನ್ನು ಒಪ್ಪಿಕೊಳ್ಳದ ರಾಜ್ ಕುಮಾರ್ ಅವರ ಕನ್ನಡ ಭಾಷಾಪ್ರೇಮ ಇತರರಿಗೂ ಮಾದರಿಯಾಗಿದೆ ಎಂದರು.



ಶ್ರೀನಿವಾಸ ಕಲ್ಯಾಣ, ಒಹಿಲೇಶ್ವರ ಸೇರಿದಂತೆ ಅನೇಕ ಪೌರಾಣ ಕ, ಸಾಮಾಜಿಕ, ಭಕ್ತಿಪ್ರಧಾನ ಚಿತ್ರಗಳಲ್ಲಿ ಮನೋಜ್ಞ ಅಭಿನಯ ನೀಡಿದ ರಾಜ್ ಕುಮಾರ್ ಅವರಿಗೆ ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು. ನಟನೆ ಜೊತೆಗೆ ಗಾಯಕರಾಗಿಯೂ ಪ್ರಸಿದ್ಧರಾಗಿದ್ದರು. ಜಿಲ್ಲಾಕೇಂದ್ರದಲ್ಲಿ ಡಾ. ರಾಜ್‌ಕುಮಾರ್ ಹೆಸರಿನಲ್ಲಿ ರಂಗಮಂದಿರ ಇರುವುದು ಜಿಲ್ಲೆಗೆ ಸಂದ ಗೌರವವಾಗಿದೆ ಎಂದು ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ಚಂದ್ರು ಮಾತನಾಡಿ

> ಆಡು ಮುಟ್ಟದ ಸೊಪ್ಪಿಲ್ಲ, ರಾಜ್‌ಕುಮಾರ್ ಅಭಿನಯಿಸದಿರುವ ಪಾತ್ರಗಳೇ ಇಲ್ಲ. ರಾಜ್ ಕುಮಾರ್ ಅವರ ವ್ಯಕ್ತಿತ್ವವನ್ನು ಇಂದಿನ ಯುವಜನರು ಮಾದರಿಯಾಗಿಸಿಕೊಳ್ಳಬೇಕು. ಭಾರತ ಸರ್ಕಾರ ರಾಜ್‌ಕುಮಾರ್ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಬೇಕು.
>
> **ಸಿ.ಎಂ. ನರಸಿಂಹಮೂರ್ತಿ** ಗಾಯಕ


ರಾಜ್‌ಕುಮಾರ್ ಅವರ ಸರಳಜೀವನ ನಮ್ಮೆಲ್ಲರಿಗೂ ಒಂದು ಪಾಠವಾಗಿದೆ. ಅವರ ಚಿತ್ರಗಳಲ್ಲಿ ಉತ್ತಮ ಸಾಮಾಜಿಕ ಸಂದೇಶವಿರುತ್ತಿತ್ತು. ಬಂಗಾರದ ಮನುಷ್ಯ ಚಿತ್ರ ವೀಕ್ಷಿಸಿದ ಸಾಕಷ್ಟು ಮಂದಿ ಕೃಷಿ ಕ್ಷೇತ್ರದತ್ತ ಒಲವು ತೋರಿದರು. ಎಲ್ಲಾ ಬಗೆಯ ಪಾತ್ರಗಳಗೂ ಜೀವ ತುಂಬುತ್ತಿದ್ದ ಕೀರ್ತಿ ರಾಜ್‌ಕುಮಾರ್ ಅವರಿಗೆ ಸಲ್ಲುತ್ತದೆ. ರಾಜ್‌ಕುಮಾರ್ ನಡೆ–ನುಡಿ ಅನುಕರಣ ?ಯವಾಗಿದೆ ಇಂದಿನ ವಿದ್ಯಾರ್ಥಿಗಳಿಗೆ, ಯುವಕರಿಗೆ ಶಿಕ್ಷಣದ ಜೊತೆಗೆ ಸಂಸ್ಕಾರವು ಬೇಕು. ಅದಕ್ಕಾಗಿ ಯುವಕರು ಹೆಚ್ಚಾಗಿ ರಾಜ್‌ಕುಮಾರ್ ಚಿತ್ರಗಳನ್ನು ವೀಕ್ಷಿಸಬೇಕು ಎಂದರು. ಹೆಚ್ಚುವರಿ ಜಿಲ್ಲಾಧಿಕಾರಿ ಟೀ.ಜವರೇಗೌಡ ಕಾರ್ಯಕ್ರಮದಲ್ಲಿ ಸಂವಿಧಾನ ಪೀಠಿಕೆ ಬೋಧಿಸಿದರು. ಇದೇ ವೇಳೆ ಹನೂರಿನ ಗಾಯಕರಾದ ಕೃಷ್ಣಕುಮಾರ್ ಮತ್ತು ಪುಷ್ಪಾ ಹಾಗೂ ಹರನಹಳ್ಳಿ ನಟರಾಜ್ ರಾಜ್‌ಕುಮಾರ್ ಅವರ ಗೀತಗಾಯನ ಕಾರ್ಯಕ್ರಮ ನಡೆಸಿಕೊಟ್ಟು ಕಾರ್ಯಕ್ರಮದಲ್ಲಿ ಹಾಜರಿದ್ದ ಕಲಾಭಿಮಾನಿಗಳನ್ನು ರಂಜಿಸಿದರು. ನಗರದ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ರಾಜ್‌ಕುಮಾರ್ ಅವರ ಗೀತೆಗಳಿಗೆ ನೃತ್ಯ ಪ್ರದರ್ಶನ ನೀಡಿ ಗಮನ ಸೆಳೆದರು. ನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ. ಎಸ್. ಜಯಣ್ಣ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಎ. ರಮೇಶ, ವಾರ್ತಾ ಸಹಾಯಕರಾದ ಸುರೇಶ್ ಕುಮಾರ್, ಇತರರು ಉಪಸ್ಥಿತರಿದ್ದರು.

### ಮಾನವತೆ, ಸರಳತೆ, ಸಜ್ಜನಿಕೆಗೆ ಇನ್ನೊಂದು ಹೆಸರೇ ರಾಜ್‌ಕುಮಾರ್

**ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು ಅವರು ಮಾತನಾಡಿ ರಾಜ್‌ಕುಮಾರ್ ಅವರು ಚಾಮರಾಜನಗರದ ಜನರನ್ನು ಗುರುತಿಸಿದರೆ ನಮ್ಮ ಕಾಡಿನವರು ಎಂದು ಮನತುಂಬಿ ಮಾತನಾಡಿಸುತ್ತಿದ್ದರು. ಮಾನವತೆ, ಸರಳತೆ, ಸಜ್ಜನಿಕೆಗೆ ಇನ್ನೊಂದು ಹೆಸರೇ ರಾಜ್ ಕುಮಾರ್. ಕನ್ನಡಕ್ಕೆ ಒಬ್ಬ ಕವಿ ಏನು ಕೊಡುಗೆ ನೀಡಬಹುದೋ ಅದಕ್ಕಿಂತ ಹೆಚ್ಚಿನ ಕೊಡುಗೆ ನೀಡಿದ ರಾಜ್ ಕುಮಾರ್ ಅತ್ಯಂತ ಸಂಸ್ಕಾರವುಳ್ಳ ವ್ಯಕ್ತಿ ಆಗಿದ್ದರು ಎಂದು ತಿಳಿಸಿದರು. ಡಾ. ರಾಜ್ ಕುಮಾರ್ ಅವರು ಕನ್ನಡದ ಅಸ್ಮಿತೆ ಕುರಿತು ಮುಖ್ಯ ಭಾಷಣ ಮಾಡಿದ ಚಲನಚಿತ್ರ ನಿರ್ದೇಶಕರು ಹಾಗೂ ಕರ್ನಾಟಕ ಸಾಹಿತ್ಯ ಅಕಾಡಮಿ ಸದಸ್ಯ ಪ್ರಕಾಶ್ ರಾಜ್ ಮೇಹು ರಾಷ್ಟ್ರಕವಿ ಕುವೆಂಪು ಹಾಗೂ ರಾಜ್‌ಕುಮಾರ್ ಇಬ್ಬರೂ ಕನ್ನಡನಾಡಿನ ಅಸ್ಮಿತೆಗಳಾಗಿದ್ದಾರೆ. ಕನ್ನಡಭಾಷೆಗೆ ಇಬ್ಬರು ಅಷ್ಟೂ ಕೊಡುಗೆ ನೀಡಿದ್ದಾರೆ. ಚಾಮರಾಜನಗರದ ಗಡಿಭಾಗದಲ್ಲಿ ಹುಟ್ಟಿದ ರಾಜ್‌ಕುಮಾರ್ ಬಾಲ್ಯದಲ್ಲಿ ಬಡತನದ ಬೇಗೆಯಲ್ಲಿ ಬೆಂದು ಬೆಳೆದು ಕನ್ನಡ ಬೆಳ್ಳಿತೆರೆಯಲ್ಲಿ ಮಹಾರಾಜನಾಗಿ ಉದಯಿಸಿದರು. ಜಗತ್ತಿನಲ್ಲಿ, ಭಾರತದಲ್ಲಿ ಸಾಕಷ್ಟು ನಾಯಕನಟರಿದ್ದಾರೆ. ಅವರಲ್ಲಿ ವಿಶಿಷ್ಟ, ವಿಭಿನ್ನವಾಗಿ ಕಾಣುವವರು ರಾಜ್‌ಕುಮಾರ್ ಒಬ್ಬರೇ. ನಟನೆ, ಗಾಯನ ಎರಡನ್ನೂ ಮೀರಿದ ಸರಳ ವ್ಯಕ್ತಿತ್ವ ರಾಜ್‌ಕುಮಾರ್ ಅವರದ್ದಾಗಿದೆ ಎಂದರು.ರಾಜ್‌ಕುಮಾರ್ ಅವರು ಕರ್ನಾಟಕದ, ಉತ್ತರ ಕರ್ನಾಟಕದ, ಭಾರತದ ರಾಜ ಮಹಾರಾಜರು, ಸಂತರು, ದಾರ್ಶನಿಕರ ತತ್ವಸಿದ್ಧಾಂತಗಳನ್ನು ಪಾತ್ರಗಳ ಮೂಲಕ ಸುಲಲಿತವಾಗಿ ಅಭಿನಯಿಸಿ ಭಾರತದ, ಕರ್ನಾಟಕದ ಚಲನಚಿತ್ರರಂಗದ ಸಾಂಸ್ಕೃತಿಕ ರಾಯಭಾರಿಯಾಗಿದ್ದಾರೆ. ಪ್ರತಿ ಸಮುದಾಯ ಗಳ, ಜಾತಿ, ಧರ್ಮಗಳ ಪಾತ್ರಗಳನ್ನು ನಿರ್ವಹಿಸುವ ಮೂಲಕ ಎಲ್ಲಾ ಜನಾಂಗಗಳ ಪ್ರತಿನಿಧಿಯಾಗಿದ್ದಾರೆ. ದೇಶ, ರಾಜ್ಯದಲ್ಲಿ ಯಾವ ಕಲಾವಿದರಿಗೂ ರಾಜ್ ಕುಮಾರ್ ಅವರಷ್ಟು ಪಾತ್ರಗಳು ದೊರೆತಿಲ್ಲ. ಮಹಿಷಾಸುರ ಮರ್ದಿನಿ, ಹಿರಣ್ಯರ ರಾಕ್ಷಸ ಪಾತ್ರಗಳಲ್ಲಿಯೂ ಪರಕಾಯ ಪ್ರವೇಶ ಮಾಡು ತ್ತಿದ್ದ ರಾಜ್‌ಕುಮಾರ್ ಅವರು ಇತರ ನಟರಿಗೂ ಮಾದರಿಯಾಗಿದ್ದಾರೆ. ದೊಡ್ಡವರು, ಚಿಕ್ಕವರೆನ್ನದೇ ಎಲ್ಲರನ್ನು ಗೌರವದಿಂದ ನೋಡುತ್ತಿದ್ದ ರಾಜ್ ಕುಮಾರ್ ಅವರು ಅದರ್ಶಪ್ರಾಯರಾಗಿದ್ದಾರೆ ಎಂದು ಹೇಳಿದರು.**

# ಸಾವಿರ ದಿನಗಳಲ್ಲಿ ತಂಬಾಕು ಮುಕ್ತ : ಮೈಸೂರಿಗೆ ಪಣ

## 'ಧೂಮಪಾನ ಮುಕ್ತ ಮೈಸೂರು, ಆರೋಗ್ಯವಂತ ಮೈಸೂರು' ಗೋಷ್ಠಿ



ಮೈಸೂರು: ಮುಂದಿನ ಸಾವಿರ ದಿನಗಳಲ್ಲಿ ಮೈಸೂರನ್ನು ತಂಬಾಕು ಮುಕ್ತ ನಗರವನ್ನಾಗಿ ರೂಪಿಸುವ ಮಹತ್ವಾಕಾಂಕ್ಷಿ ಗುರಿಬ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು.

ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್ ಲಿಮಿಟೆಡ್ ಹಾಗೂ ಭಾರತ್ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಸ್ಥೆ(ಬಿ.ಎಚ್.ಐ.ಓ) ಸಹಯೋಗದಲ್ಲಿ "ಧೂಮಪಾನ ಮುಕ್ತ ಮೈಸೂರು, ಆರೋಗ್ಯವಂತ ಮೈಸೂರು" ಎಂಬ ವಿಷಯದ ಗೋಷ್ಠಿಯ ಅಧ್ಯಕ್ಷತೆವಹಿಸಿದ ಕ್ಯಾನ್ಸರ್ ತಜ್ಞ ಡಾ.ಬಿ.ಎಸ್.ಅಜಯ್ ಕುಮಾರ್ ಮಾತನಾಡಿ, ಕಟ್ಟುನಿಟ್ಟಿನ ಕಾನೂನು ಜಾರಿ, ಸಕ್ರಿಯ ಸಾರ್ವಜನಿಕ ಭಾಗವಹಿಸುವಿಕೆ ಮತ್ತು ದೀರ್ಘಕಾಲೀನ ಆರೋಗ್ಯ ಯೋಜನೆಗಳ ಸಮನ್ವಯ ಅಗತ್ಯ. ಕಾನೂನುಗಳು ಕೇವಲ ಕಾಗದದಲ್ಲೇ ಉಳಿಯದೇ, ದೃಶ್ಯಮಾನ ಮತ್ತು ನಿರಂತರ ಜಾರಿಯ ಮೂಲಕ ಪರಿಣಾಮಕಾರಿಯಾಗಬೇಕು ಎಂದು ಒತ್ತಿಹೇಳಿದರು.

ತಂಬಾಕು ಬಳಕೆಯನ್ನು ದೇಶದ ಅತ್ಯಂತ ಗಂಭೀರ ಸಾರ್ವಜನಿಕ ಆರೋಗ್ಯ ಸವಾಲು ಎಂದು ವರ್ಣಿಸಿದರು. ತಂಬಾಕು ನಿರ್ಮೂಲನೆಯಿಂದ ಸುಮಾರು ಶೇ.40 ಆರೋಗ್ಯ ಸಮಸ್ಯೆಗಳನ್ನು ತಡೆಯಲು ಸಾಧ್ಯವಿದೆ. ಭಾರತ ದಲ್ಲಿ ವರ್ಷಕ್ಕೆ ಸುಮಾರು 23 ಲಕ್ಷ ಜನರು ಮತ್ತು ಜಾಗತಿ ಕವಾಗಿ 80 ಲಕ್ಷಕ್ಕೂ ಹೆಚ್ಚು ಜನರು ತಂಬಾಕು ಸಂಬಂಧಿತ ಕಾರಣಗಳಿಂದ ಸಾವನ್ನಪ್ಪುತ್ತಿರುವುದನ್ನು ಉಲ್ಲೇಖಿಸಿದ ಅವರು, ಪ್ರತಿ ಒಂಬತ್ತು ಮಂದಿಯಲ್ಲಿ ಒಬ್ಬರಿಗೆ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿರುವುದರಲ್ಲಿ ತಂಬಾಕು ಬಳಕೆಯೇ ಪ್ರಮುಖ ಕಾರಣವೆಂದರು. ಜೊತೆಗೆ, ಪರೋಕ್ಷ ಧೂಮಪಾನವು ಭಾರತದಲ್ಲಿ ಮೂರನೇ ಭಾಗದಷ್ಟು ವಯಸ್ಕರನ್ನು ಪ್ರಭಾವಿತ ಗೊಳಿಸುತ್ತಿದ್ದು, ಜಾಗತಿಕವಾಗಿ 12 ಲಕ್ಷ ಸಾವುಗಳಿಗೆ ಕಾರಣವಾಗುತ್ತಿದೆ. ಪೋಲಿಯೋ ನಿರ್ಮೂಲನೆಯಂತೆಯೇ ತಂಬಾ ಕನ್ನೂ ನಿರ್ಮೂಲನೆ ಮಾಡುವುದು ಸಾಧ್ಯವೆಂದು ಅಭಿ ಪ್ರಾಯಪಟ್ಟರು. ಗೋಷ್ಠಿಯಲ್ಲಿ ಸಿ.ಎಫ್.ಟಿ.ಆರ್.ಐ ಮಾಜಿ ನಿರ್ದೇಶಕ ಡಾ.ವಿ.ಪ್ರಕಾಶ್, ರೈತ ಮುಖಂಡ ರಾಮೇಗೌಡ, ಮಂಜು ಕಿರಣ್, ಕ್ಯಾನ್ಸರ್‌ನಿಂದ ಚೇತರಿಸಿಕೊಂಡ ಮಹದೇವ್ ಮತ್ತು ನಾಗರಾಜ್, ಜಿಲ್ಲಾ ತಂಬಾಕು ನಿಯಂತ್ರಣಾಧಿಕಾರಿ ಡಾ.ಎಸ್.ಗೋಪಿನಾಥ್, ಉಪಮೇಯರ್ ಪುಷ್ಪವಲ್ಲಿ ಮತ್ತು ಹಿರಿಯ ಪತ್ರಕರ್ತ ಲೈಕ್ ಖಾನ್ ಹಾಗೂ ಸಿ.ಜೆ.ರಾಜೀವ ಅಭಿಪ್ರಾಯಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಬಿ.ಎಚ್.ಐ.ಓ ಸಿ.ಒ.ಒ ಗೌತಮ್ ಧಮೇರ್ಲಾ, ಅಂತರ್ಧ್ವನಿ ಸಂಸ್ಥೆಯ ರಾಹುಲ್ ನಂದನ್ ಮತ್ತು ಸೀತಾಲಕ್ಷ್ಮಿ, ಕಾರ್ಯಕ್ರಮ ಮುಖ್ಯಸ್ಥ ಎನ್.ಮಧು, ಹಿರಿಯ ವಿಕಿರಣ ಕ್ಯಾನ್ಸರ್ ತಜ್ಞ ಡಾ.ವಿನಯ್ ಕುಮಾರ್ ಮುತ್ತಗಿ ಇನ್ನಿತರರು ಉಪಸ್ಥಿತರಿದ್ದರು.

# ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ

ಗುಂಡ್ಲುಪೇಟೆ: ಹೊರೆಯಾಲ ಗ್ರಾಮದಲ್ಲಿ ಆಧುನಿಕ ಭಾರತದ ನಿರ್ಮಾತೃ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ರವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಡಾ.ನವೀನ್ ಮೌರ್ಯ ಅನಾವರಣಗೊಳಿಸಿದರು.



ಈ ಸಂದರ್ಭದಲ್ಲಿ ಹೊರೆಯಾಲ ಗ್ರಾಮದ ಸುರೇಶ್ ರವರು, ವಕೀಲರಾದ ಮಹೇಶ್, ಶಿವಣ್ಣ, ಹಿರಿಯ ದಲಿತ ಹೋರಾಟಗಾರ ಶಿವಬುದ್ಧಿ, ಕಾಂಟ್ರಾಕ್ಟ್ರ ಭೀಮಣ್ಣ, ಪುಷ್ಪ, ಗ್ರಾಮ ಪಂಚಾಯಿತಿ ಸದಸ್ಯೆ ನಾಗಮಣಿ, ಅರೇಪುರ ಮಹೇಶ್, ಉಪನ್ಯಾಸಕ ಮಹೇಶ್, ಹೊರೆಯಾಲ ಗ್ರಾಮದ ಯುವಕರು, ಮಹಿಳೆಯರು, ಯಜಮಾನರುಗಳು ಹಾಜರಿದ್ದರು.

# ಕಾಂಕ್ರೆಟ್ ರಸ್ತೆ ಕಾಮಗಾರಿ ಪರಿಶೀಲನೆ



ಗುಂಡ್ಲುಪೇಟೆ:ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ವಾರ್ಡ್ ಗಳಲ್ಲಿ ಸಿಮೆಂಟ್ ಕಾಂಕ್ರೆಟ್ ರಸ್ತೆ ನಿರ್ಮಾಣ ಕಾಮಗಾರಿಯನ್ನು ಪುರಸಭೆ ಮುಖ್ಯಾಧಿಕಾರಿ ಸರವಣ ವಿಕ್ಷೀಸಿದರು.

ಪಟ್ಟಣದ ವಿವಿಧ ವಾರ್ಡ್ ಗಳಾದ 22ನೇ ವಾರ್ಡ್ ಜನತಾ ಕಾಲೋನಿ ಮತ್ತು ವಾರ್ಡ್ ನಂಬರ್ 23 ದಾರಾ ಬೇಂದ್ರೆ ನಗರದಲ್ಲಿ ಡಾಂಬರ್ ರಸ್ತೆ ಎರಡು ಸೇರಿ 10 ಲಕ್ಷ 15ನೇ ಹಣಕಾಸು ಯೋಜನೆಯ ಕಾಮಗಾರಿಯನ್ನು ಪರಿಶೀಲನೆ ಮಾಡಿದರು.


ಬಳಿಕ ಮಾತನಾಡಿದ ಅವರು, ಸಂದರ್ಭದಲ್ಲಿ ಬೇಸಿಗೆಕಾಲ ಇರೋದ್ರಿಂದ ರಸ್ತೆಯನ್ನು ಕ್ಯೂರಿಂಗ್ ಮಾಡಲು ಹೆಚ್ಚಿನ ಪ್ರಮಾಣದಲ್ಲಿ ಪ್ರತಿದಿನ ನೀರು ಹಾಕಬೇಕೆಂದು. ಇದರಿಂದ ರಸ್ತೆ ಬಿರುಕು ಬಿಡುವುದನ್ನು ತಪ್ಪಿಸಬಹುದೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಿವಿಲ್ ಇಂಜಿನಿಯರ್ ಮಂಜುನಾಥ್ ಮತ್ತು ಗುತ್ತಿಗೆದಾರರು ಬಸವರಾಜ್, ಕಿರಿಯ ಅಭ್ಯಂತರರು ಹಾಜರಿದ್ದರು

# ಅಕ್ರಮ ಪಡಿತರ ಅಕ್ಕಿ ವಶ

ಗುಂಡ್ಲುಪೇಟೆ: ತಾಲೂಕಿನ ಮಡಹಳ್ಳಿ ಗ್ರಾಮದಿಂದ ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಸಾಗಿಸುತಿದ್ದ ಮೈಸೂರಿನ ಗೌಸಿಯಾ ನಗರದ ನಿವಾಸಿ ಮಹಮ್ಮದ್ ಜುನೈದ್ ಎಂಬ ಆರೋಪಿಯನ್ನು ಗುಂಡ್ಲುಪೇಟೆ ಪೊಲೀಸರು ಬಂಧಿಸಿ ಆತನಿಂದ 700ಕೆಜಿ ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರೆ.

ಮಡಹಳ್ಳಿ ಗ್ರಾಮದಿಂದ ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಣೆ ಮಾಡುತಿದ್ದಾರೆ ಎಂದು ಖಚಿತ ಮಾಹಿತಿ ದೊರೆತ ಹಿನ್ನಲೆ ಗುಂಡ್ಲುಪೇಟೆ ಪಟ್ಟಣದ ಬೀಡಿ ಫ್ಯಾಕ್ಟರಿ ಬಳಿ ಕೆಎ–10 7512 ಗೂಡ್ಸ್ ವಾಹನವನ್ನು ತಡೆದು ಪರಿಶೀಲಿಸಿದಾಗ ಅನ್ನ ಭಾಗ್ಯ ಯೋಜನೆಯ ಪಡಿತರ ಅಕ್ಕಿಯನ್ನು ಹೊನ್ನಶೆಟ್ಟರಹುಂಡಿ ಗ್ರಾಮದಿಂದ ಕಡಿಮೆ ದರಕ್ಕೆ ಖರೀದಿಸಿ ಮೈಸೂರಿನಲ್ಲಿ ಹೆಚ್ಚಿನ ದರಕ್ಕೆ ಮಾರಾಟ ಮಾಡಲು ಸಾಗಾಣೆ ಮಾಡುತ್ತಿರುವುದನ್ನು ಖಚಿತ ಪಡಿಸಿಕೊಂಡ ಪೋಲಿಸರು ಆರೋಪಿಯನ್ನು ಬಂಧಿಸಿ ಅಕ್ಕಿಯನ್ನು ಜಪ್ತಿ ಮಾಡಿದ್ದಾರೆ.




ಕಾರ್ಯಾಚರಣೆಯಲ್ಲಿ ಆಹಾರ ನಿರೀಕ್ಷಕ ಅರವಿಂದ್ ಗುಂಡ್ಲುಪೇಟೆ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್ ಜಯಕುಮಾರ್ ಮತ್ತು ಎ.ಎಸ್.ಐ ಮಹೇಶ್ ಮತ್ತು ಪಾಲ್ಗೊಂಡಿದ್ದರು.

ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

# ಹೆಬ್ಬಸೂರು ಶ್ರೀ ಶೃಂಗೇರಿ ಶಂಕರಮಠದಲ್ಲಿ ವಾರ್ಷಿಕೋತ್ಸವದ ಅಂಗವಾಗಿ ವಿಶೇಷಪೂಜೆ

ಚಾಮರಾಜನಗರ, –ಚಾಮರಾಜನಗರ ತಾಲ್ಲೂಕಿನ ಹೆಬ್ಬಸೂರಿನ ಶಂಕರಮಠದಲ್ಲಿ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷಪೂಜಾ ಕಾರ್ಯಕ್ರಮಗಳು ನಡೆಯಲಿದೆ ಎಂದು ಹೆಬ್ಬಸೂರು ಶಂಕರ ಮಠ ಧರ್ಮಾಧಿಕಾರಿ ಹೆಚ್.ಎಸ್. ಶ್ರೀಧರ್ ಪ್ರಸಾದ್ ತಿಳಿಸಿದ್ದಾರೆ.



ಏ.26ರಂದು ಪ್ರತಿಕ್ಷಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಬೆಳಗ್ಗೆ ಗಣಪತಿ ಹೋಮ, ರುದ್ರಹೋಮ, ಲಲಿತಾಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ಅನ್ನ ಸಂತರ್ಪಣೆ, ದುರ್ಗಸಪ್ತಶತಿ ಪಾರಾಯಣ ಹಾಗೂ ಏ,27 ರಂದು ನವಚಂಡಿಕಾ ಯಾಗ, ಪೂರ್ಣಾಹುತಿ, ರಥಸಂಪ್ರೋಕ್ಷಣೆ, ಉಯ್ಯಾಲೋತ್ಸವ ನಡೆಯಲಿದೆ. ಏ, 28 ರಂದು ಸುಬ್ರಹ್ಮಣ್ಯಹೋಮ, ರಾಮತಾರಕಹೋಮ, ಮಹಾಭೀಷೇಕ, ರಥಾರೋಹಣ , ಮಿಥುನ ಲಗ್ನದಲ್ಲಿ ಶ್ರೀಶಾರದಾ ಮಾತೆಯ ರಥೋತ್ಸವ ಹೆಬ್ಬಸೂರಿನಲ್ಲಿ ನಡೆಯಲಿದೆ. ಸುತ್ತಮುತ್ತಲಿನ ಗ್ರಾಮಸ್ಥರು, ರಥೋತ್ಸವದಲ್ಲಿ ಭಾಗವಹಿಸಬೇಕೆಂದು ತಿಳಿಸಲಾಗುತ್ತದೆ ಎಂದು ಶೃಂಗೇರಿ ಮಠದ ಧರ್ಮಾದರ್ಶಿಗಳು ತಿಳಿಸಿದ್ದಾರೆ.

## ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ, ಮುಖ್ಯಮಂತ್ರಿಗಳಿಗೆ ಅಭಿನಂದನೆ

# ಒಳಮೀಸಲಾತಿ: ಸಿಹಿ ಹಂಚಿ ಸಂಭ್ರಮಾಚರಣೆ

ಚಾಮರಾಜನಗರ, ಪರಿಶಿಷ್ಟ ಜಾತಿಯಲ್ಲಿನ ಗ್ರೂಪ್ 'ಎ' ಗೆ ಶೇ 5.25ರಷ್ಟು, ಗ್ರೂಪ್ 'ಬಿ'ಗೆ ಶೇ 5.25ರಷ್ಟು ಮತ್ತು ಗ್ರೂಪ್ 'ಸಿ'ಗೆ ಶೇ 4.5ರಷ್ಟು ಒಳಮೀಸಲಾತಿ ನೀಡಲು ರಾಜ್ಯ ಸರ್ಕಾರದ ವಿಶೇಷ ಸಚಿವ ಸಂಪುಟದ ಸಭೆಯು ಒಮ್ಮತದ ನಿರ್ಧಾರ ಕೈಗೊಂಡಿರುವುದನ್ನು ಸ್ವಾಗತಿಸಿ ನಗರದಲ್ಲಿ ಕರ್ನಾಟಕ ಮಾದಾರ ಮಹಾಸಭಾ ಜಿಲ್ಲಾ ಸಮಿತಿ ವತಿಯಿಂದ ಸಂಭ್ರಮಾಚರಣೆ ನಡೆಸಿದರು.

ನಗರದ ಜಿಲ್ಲಾಡಳಿತ ಮುಂಭಾಗದಲ್ಲಿ ಕರ್ನಾಟಕ ಮಾದಾರ ಮಹಾಸಭಾ ಜಿಲ್ಲಾಧ್ಯಕ್ಷ ಜಿಲ್ಲಾಧ್ಯಕ್ಷ ಎಂ.ಶಿವಮೂರ್ತಿ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಸಂಘದ ಪದಾಧಿಕಾರಿಗಳು ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ಗೆ ಮಾಲಾರ್ಪಣೆ ಮಾಡಿ ಸರ್ಕಾರ, ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಸಮುದಾಯ ಸಚಿವರು, ಹೋರಾಟಗಾರ ಪರ ಜೈಕಾರ ಕೂಗಿ ಸಂಭ್ರಮಿಸಿದರು. ನೇತೃತ್ವ ವಹಿಸಿದ ಮಾದಾರ ಮಹಾಸಭಾ ಜಿಲ್ಲಾಧ್ಯಕ್ಷ ಜಿಲ್ಲಾಧ್ಯಕ್ಷ ಎಂ.ಶಿವಮೂರ್ತಿ ಮಾತನಾಡಿ, ರಾಜ್ಯದ ಸರ್ವಜಾತಿಯ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಶೇಕಡ 15ರ ಮೀಸಲಾತಿಯಲ್ಲಿ ಎಡಗೈ, ಬಲಗೈ ಮತ್ತು ಇತರರಿಗೆ ಹಂಚುವ ನಿರ್ಧಾರ ಸ್ವಾಗತಾರ್ಹ. ಇದು ಸಮಾಜದ ಹಲವು ಹೋರಾಟಗಾರರ ದೀರ್ಘಕಾಲದ ಹೋರಾಟದ ಫಲವಾಗಿದೆ. ಸುಮಾರು 35 ವರ್ಷಗಳ ಶ್ರಮಕ್ಕೆ ನ್ಯಾಯ ದೊರಕಿದಂತಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.



'ಒಳಮೀಸಲಾತಿ ವಿಷಯವಾಗಿ 35 ವರ್ಷಗಳಿಂದ ನಡೆಯುತ್ತಿದ್ದ ಹೋರಾಟಕ್ಕೆ ರಾಜ್ಯ ಸರ್ಕಾರವು ತೆರೆ ಎಳೆದಿದೆ. ಜಾತಿಗಳ ಸಂಘರ್ಷ ಸರಿಪಡಿಸಿ, ಸುಪ್ರೀಂಕೋರ್ಟ್ ಆದೇಶ ಉಲ್ಲಂಘಣೆ ಆಗದಂತೆ ಎಲ್ಲ ಜಾತಿಗಳನ್ನು ಒಗ್ಗೂಡಿಸಿ ಒಂದು ಸಂದೇಶ ಕೊಟ್ಟ ಮುಖ್ಯಮಂತ್ರಿ ಅವರಿಗೆ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿದರು.

ಕರ್ನಾಟಕದ ಮಾದಾರ ಮಹಾಸಭಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಾಳ್ಯರಾಚಪ್ಪ, ತಾಲೂಕು ಎಂ.ರಾಜು, ಉಪಾಧ್ಯಕ್ಷ ರಾಚಯ್ಯ ರಾಮಸಮುದ್ರ, ಗುಂಡ್ಲುಪೇಟೆ ತಾಲೂಕು ಸಿದ್ದಯ್ಯ ಅಂಕಹಳ್ಳಿ, ಕಾರ್ಯದರ್ಶಿ ರಾಚಯ್ಯ, ಮುಖಂಡರಾದ ಜಯಶಂಕರ್, ಸೋಮಶೇಖರ್, ನಾಗಯ್ಯ ಹೊನ್ನೇಗೌಡಹಳ್ಳಿ, ರಂಗಸ್ವಾಮಿ ಮಾದಾಪುರ, ಡಿ.ಕೆ.ಶಿವಕುಮಾರ್, ಕೊತ್ತಲವಾಡಿ ಮಟ್ಟಲಿಂಗಯ್ಯ, ದೊಡ್ಡಮಾದಯ್ಯ, ವೆಂಕಟರಾಜು ಕಿಲಗೆರೆ, ರಾಜೇಶ್, ಆರ್.ಕೆ.ಶಿವಕುಮಾರ್, ರಜಿನಿ, ಲಿಂಗಣ್ಣ, ರಾಜಣ್ಣ. ರವೀಶ್, ಮಹದೇವಸ್ವಾಮಿ ಅಮಚವಾಡಿ, ಎಸ್.ಸುನೀಲ್ ಕುಮಾರ್, ನಾರಾಯಣ್‌ಇತರರು ಹಾಜರಿದ್ದರು.

# ಎಸ್‌ಎಸ್‌ಎಲ್‌ಸಿ: ಎಚ್.ಡಿ.ಕೋಟೆ ಜಿಲ್ಲೆಗೆ ಮೊದಲು

## ಫಲಿಸಿದ ಬಿಇಒ ರಾಜು ಪ್ರಯತ್ನ | ಎರಡು ವರ್ಷಗಳಿಂದ ಕೊನೆ ಸ್ಥಾನ ಪಡೆದಿದ್ದ ಎಚ್.ಡಿ.ಕೋಟೆ

**ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: ಈ ಬಾರಿಯ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶದಲ್ಲಿ ಎಚ್.ಡಿ.ಕೋಟೆ ತಾಲೂಕು ಶೇ.96.80 ಫಲಿತಾಂಶದೊಂದಿಗೆ ಜಿಲ್ಲೆಗೆ ಪ್ರಥಮ ಸ್ಥಾನಗಳಿಸುವ ಮೂಲಕ ಗಮನ ಸೆಳೆಯುವುದರೊಂದಿಗೆ ಬಿಇಒ ರಾಜು ಅವರ ಭಗೀರಥ ಪ್ರಯತ್ನ ಫಲಿಸಿದೆ.

ಮಾ.18ರಿಂದ ಏ.2ರವರೆಗೆ ನಡೆದ ವಾರ್ಷಿಕ ಪರೀಕ್ಷೆಯಲ್ಲಿ 31 ಪ್ರೌಢಶಾಲೆ, 23-ಖಾಸಗಿ ಹಾಗೂ 4 ವಸತಿ ಶಾಲೆಗಳ 3369 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು. 2971 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. 2876 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ 95 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ.

ಹೆಚ್.ಡಿ.ಕೋಟೆ ಟೌನ್ , ಸರಗೂರು, ಹ್ಯಾಂಡ್ ಪೋಸ್ಟ್, ಡಿ.ಬಿ.ಕುಪ್ಪೆ, ಹೊಮ್ಮರಗಳ್ಳಿ, ಅಂತರಸಂತೆ, ಮಾದಾಪುರ, ಬೀಚನಹಳ್ಳಿ, ಮುಳ್ಳೂರು, ಬಿ.ಮಟಕೆರೆ ಸೇರಿದಂತೆ ಹದಿಮೂರು ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು. ಪಟ್ಟಣದ ಸರ್ಕಾರಿ ಆದರ್ಶ ವಿದ್ಯಾ ಶಾಲೆಯ ವೇದಶ್ರೀ 618(625) ಪ್ರಥಮ, ಸೊಳ್ಳೇಪುರ ಏಕಲವ್ಯ ವಸತಿ ಶಾಲೆಯ ವಿದ್ಯಾರ್ಥಿ ಆದಿತ್ಯ 614(625), ಆದರ್ಶ ವಿದ್ಯಾಶಾಲೆಯ ಲಿಖಿತಾ 614(625) ಅಂಕಗಳೊಂದಿಗೆ ತಾಲೂಕಿಗೆ ಮೊದಲಿಗರಾಗಿದ್ದಾರೆ. 28 ವಿದ್ಯಾರ್ಥಿಗಳು ಪ್ರಥಮ ಭಾಷೆ ಕನ್ನಡದಲ್ಲಿ 125ಕ್ಕೆ 125 ಅಂಕಗಳನ್ನು ಪಡೆದು ಸಾಧನೆ ಮಾಡಿದ್ದಾರೆ. 600ಕ್ಕಿಂತ ಹೆಚ್ಚಿನ ಅಂಕಗಳನ್ನು ಇಪ್ಪತ್ತ ಎಂಟು ವಿದ್ಯಾರ್ಥಿಗಳು ಪಡೆದಿದ್ದಾರೆ.

ವಿದ್ಯಾರ್ಥಿ ಜೀವನದಲ್ಲಿ ನಿರ್ಣಾಯಕ ಮತ್ತು ಪ್ರಮುಖ ಘಟ್ಟ ಎನಿಸಿರುವ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕಳೆದ ಎರಡು ವರ್ಷಗಳಿಂದ ತಾಲೂಕು ಕೊನೆಯ ಸ್ಥಾನದಲ್ಲಿದ್ದರಿಂದ, ಶಿಕ್ಷಣ ಇಲಾಖೆ ಸಾರ್ವಜನಿಕರು ಹಾಗೂ ಶಿಕ್ಷಣಾಸಕ್ತರಿಂದ ವ್ಯಾಪಕ ಟೀಕೆಗೆ ಗುರಿಯಾಗಿತ್ತು. ಫಲಿತಾಂಶ ಸುಧಾರಿಸಲು ಮುಂದಾಗಿದ್ದ ಬಿಇಒ ರಾಜು, ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಪ್ರೌಢಶಾಲೆಯ ಮುಖ್ಯಶಿಕ್ಷಕರು ಹಾಗೂ ವಿಷಯವಾರು ಶಿಕ್ಷಕರಿಗೆ ಹಲವು ಕಾರ್ಯಾಗಾರಗಳನ್ನು ನಡೆಸಿದ್ದರು.





### ಕಲಿಕಾ ಖಾತ್ರಿ ಎಂಬ ವಿನೂತನ ಪ್ರಯೋಗ

**ವಿಷಯಾವಾರು ಬೋಧಿಸಿದ ಎರಡು ಪಠ್ಯಗಳಿಗೆ 20 ಅಂಕಗಳಿಗೆ ವಾರ್ಷಿಕ ಪರೀಕ್ಷೆ ಮಾದರಿಯಲ್ಲಿ ಪರೀಕ್ಷೆ ನಡೆಸಲಾಗಿತ್ತು. ವಾರ್ಷಿಕ ಪರೀಕ್ಷೆ ಮಾದರಿಯ ಪ್ರಶ್ನೆ ಪತ್ರಿಕೆಗಳು ಹಾಗೂ ಉತ್ತರ ಪತ್ರಿಕೆಗಳನ್ನು ರಾಜ್ಯದಲ್ಲಿ ನಡೆಯುವ ಮೌಲ್ಯ ಮಾಪನ ಮಾದರಿಯಲ್ಲಿ ಮೌಲ್ಯಮಾಪನ ನಡೆಸಿ, ನಿಗದಿಯಾಗಿದ್ದ 20 ಅಂಕಗಳನ್ನು ಹಂತ, ಹಂತವಾಗಿ 100 ಅಂಕಗಳಿಗೆ ಹೆಚ್ಚಳ ಮಾಡಿ ವಿದ್ಯಾರ್ಥಿಗಳಿಗೆ ಇದ್ದ ಮುಖ್ಯ ಪರೀಕ್ಷೆಯ ಭಯವನ್ನು ನಿವಾರಿಸಲಾಗಿತ್ತು.**

### ರಾಜ್ಯದಲ್ಲೇ ಪ್ರಥಮಗಳಿಗೆ ಕಾರಣವಾಗಿದ್ದ ಕಾರ್ಯಕ್ರಮಗಳು

ಕಲಿಕೆ ಮಕ್ಕಳಿಗೆ ಕಷ್ಟ ಎನಿಸಬಾರದು ಎಂಬ ದೃಷ್ಟಿಯಿಂದ ನಲಿದು, ಕಲಿಯುವಂತೆ 2009-10ರಲ್ಲಿ ನಲಿ-ಕಲಿ ಯೋಜನೆಗೆ ಶಿಕ್ಷಣ ಇಲಾಖೆ ರಾಜ್ಯದಲ್ಲಿ ಪ್ರಥಮವಾಗಿ ಕೋಟೆ ತಾಲೂಕಿನಲ್ಲಿ ಚಾಲನೆ ನೀಡಿತ್ತು. ಇದೀಗ, "ನಾನು ಓದುತ್ತಿದ್ದೇನೆ" ಎಂಬ ನೂತನ ಪ್ರಯೋಗವೊಂದನ್ನು ರಾಜ್ಯದಲ್ಲಿ ಪ್ರಥಮವಾಗಿ ಮಾಡಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ರಾಜು, ಇದರ ಮೂಲಕ ವಿದ್ಯಾರ್ಥಿಗಳು, ಶಿಕ್ಷಕರಿಲ್ಲಿ ಕಲಿಕಾಸಕ್ತಿ ವೃದ್ಧಿಸಿದ್ದರು. ಮಕ್ಕಳನ್ನು ಆಸ್ತಿ ಮಾಡದೆ ಮಕ್ಕಳನ್ನೇ ಆಸ್ತಿ ಮಾಡುವೆವು. ನಮ್ಮ ಮಗು ಓದಬೇಕು ಎಂಬ ಪ್ರತಿಜ್ಞೆಯೊಂದಿಗೆ ಪೋಷಕರ ರುಜುವಾತಿನೊಂದಿಗೆ ಹೆಚ್ಚಿನ ಹೊಣೆಗಾರಿಕೆ ಮತ್ತು


ಜವಾಬ್ದಾರಿ ನೀಡಲಾಗಿತ್ತು. ತರಗತಿ ಶಿಕ್ಷಕರು, ಮುಖ್ಯ ಶಿಕ್ಷಕರ ಸಹಿಯೊಂದಿಗೆ, ಪ್ರತಿ ವಿದ್ಯಾರ್ಥಿ ಮನೆಯ ಪ್ರವೇಶ ದ್ವಾರದಲ್ಲಿ ಪೋಸ್ಟರ್ ಅಂಟಿಸುವುದರ ಜೊತೆಗೆ, ವಿದ್ಯಾರ್ಥಿಗಳನ್ನು ವಿಂಗಡಿಸಿ ಶಾಲೆಯ ಪ್ರತಿ ಶಿಕ್ಷಕರಿಗೆ ಶೈಕ್ಷಣಿಕ ದತ್ತು ನೀಡಲಾಗಿತ್ತು, ವಿದ್ಯಾರ್ಥಿ ಎಷ್ಟು ಗಂಟೆಗೆ ಯಾವ ವಿಷಯ, ಯಾವ ಪಠ್ಯ ಓದಬೇಕು, ಬರಯಬೇಕು. ಪುನರಾವರ್ತನೆ ಮಾಡಬೇಕು ಎಂಬುದನ್ನು ನಾನು ಓದುತ್ತಿದ್ದೇನೆ ಕಾರ್ಡ್ ನಲ್ಲಿ ನಮೂದಿಸಿ, ಪೋಷಕರು. ಶಿಕ್ಷಕರ ಸಹಿ ಮಾಡಿಸಿದ್ದರು. ಮುಂಜಾನೆ 5 ಗಂಟೆಗೆ ಪೋಷಕರ ದೂರವಾಣಿಗೆ ಕರೆಮಾಡಿ ವಿದ್ಯಾರ್ಥಿಗಳನ್ನು ಎಬ್ಬಿಸುವ ಜವಾಬ್ದಾರಿಯನ್ನು ಶಿಕ್ಷಕರಿಗೆ ನೀಡಲಾಗಿತ್ತು. ಬೆ.9:30ರಿಂದ 5:30ರವರೆಗೂ ಶಿಕ್ಷಕರು ಶಾಲೆಯಲ್ಲಿ ಕಡ್ಡಾಯವಾಗಿ ಇರಲೇಬೇಕು ಎಂಬ ಕಟ್ಟಪ್ಪಣೆ ತಂದಿದ್ದರು. ಭಾನುವಾರ ಮತ್ತು ಸರ್ಕಾರಿ ರಜಾ ದಿನಗಳಲ್ಲೂ ವಿಶೇಷ ತರಗತಿಗಳನ್ನು ನಡೆಸಿದ್ದರು. ಮೀರಿದ್ದವರಿಗೆ ಕೆಲ ಶಿಕ್ಷೆಯನ್ನೂ ನೀಡಿದ್ದರು. ಮಧ್ಯವಾರ್ಷಿಕ ಪರೀಕ್ಷೆ ಮುಗಿದು, ಮುಖ್ಯ ಪರೀಕ್ಷೆ ಸಮೀಪಿಸುತ್ತಿರುವಾಗ ಬಿಇಒ ರಾಜು, ಪ್ರೌಢಶಾಲೆ ವ್ಯಾಪ್ತಿಯ ಗ್ರಾಮಗಳಲ್ಲಿ ವಾಸ್ತವ್ಯ ಹೂಡಿ, ಎಲ್ಲ ಗ್ರಾಮಗಳಿಗೆ ರಾತ್ರಿ, ಮುಂಜಾನೆ ವೇಳೆ ವಿದ್ಯಾರ್ಥಿ ಮನೆಗಳಿಗೆ ದಿಢೀರ್ ಭೇಟಿ ನೀಡಿ, ಹತ್ತನೆ ತರಗತಿಯ ಎಲ್ಲ ವಿಷಯಗಳ ಪ್ರಶ್ನೆ ಕೇಳಿ ಉತ್ತರ ಪಡೆಯುವ, ಉತ್ತರ ತಪ್ಪಿದ್ದರೆ ತಿದ್ದುವ, ಕಲಿಕೆಯಲ್ಲಿ ತೀರಾ ಹಿಂದುಳಿದಿರುವ ಮಕ್ಕಳಿಗೆ ಬಗ್ಗೆ ಹೆಚ್ಚಿನ ಒತ್ತು ನೀಡುವಂತೆ ಸ್ಥಳದಲ್ಲಿಯೇ ಶಿಕ್ಷಕ, ಮುಖ್ಯ ಶಿಕ್ಷಕರಿಗೆ ದೂರವಾಣಿ ಮೂಲಕ ಖಡಕ್ ಸೂಚನೆ ನೀಡಿದ್ದರು.



ನಾನು ಅಧಿಕಾರ ವಹಿಸಿಕೊಂಡ ಒಂಬತ್ತು ತಿಂಗಳಲ್ಲಿ ವಾರ್ಷಿಕ ಫಲಿತಾಂಶ ಸುಧಾರಣೆಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಯಶಸ್ಸಿಗೆ ಶಿಕ್ಷಕ ವೃಂದ, ವಿದ್ಯಾರ್ಥಿಗಳು, ಪೋಷಕರು ಹಾಗೂ ಜನಪ್ರತಿನಿಧಿಗಳ ಸಹಕಾರ ಕಾರಣ. ಒಂದೆರಡು ಅಂಕಗಳಿಂದ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಮರು ಮೌಲ್ಯಮಾಪನಕ್ಕೆ ಅರ್ಜಿ ಹಾಕಲಾಗುವುದು. ಅದಾಗ್ಯೂ ಉಳಿಕೆಯವರಿಗೆ ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣವಾಗುವಂತೆ ಇಂದಿನಿಂದಲೇ ವಿಶೇಷ ತರಗತಿಗಳನ್ನು ಪ್ರಾರಂಭಿಸಲಾಗಿದೆ.

**–ರಾಜು** ಕ್ಷೇತ್ರಶಿಕ್ಷಣಾಧಿಕಾರಿ, ಹೆಚ್.ಡಿ.ಕೋಟೆ ಸರಗೂರು ತಾಲೂಕು.

### 13 ಸರ್ಕಾರಿ ಶಾಲೆಗಳಲ್ಲಿ ಪೂರ್ಣ ಫಲಿತಾಂಶ

ಬಾಯ್ಸ್ ಜೂನಿಯರ್ ಕಾಲೇಜು ಸರಗೂರು, ಕೆಂಚನಹಳ್ಳಿ, ಮುಳ್ಳೂರು, ಕಂಚಮಹಳ್ಳಿ, ಎಂ.ಸಿ. ತಳಲು, ದಡದಹಳ್ಳಿ, ಗಾಂಧೀನಗರ, ಜೆ.ಬಿ.ಸರಗೂರು, ಡಿ.ಬಿ.ಕುಪ್ಪೆ, ಅಂತರಸಂತೆ, ಇಟ್ನ, ಸೊಳ್ಳೇಪುರ ಸೇರಿದಂತೆ ಕಂದಲಿಕೆ ಗ್ರಾಮದ ಸರ್ಕಾರಿ ಪ್ರೌಢಶಾಲೆಗಳು ಪೂರ್ಣ ಫಲಿತಾಂಶ ಪಡೆದಿವೆ. ಅನುದಾನಿತ ಮೇಟಿಕುಪ್ಪೆಯ ಜೆಎಸ್‌ಎಸ್, ಎಚ್.ಡಿ.ಕೋಟೆ ಪಟ್ಟಣದ ಸೇಂಟ್ ಮೇರಿಸ್ ಶಾಲೆಗಳು ಪೂರ್ಣ ಫಲಿತಾಂಶ ಪಡೆದವೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳ ಈ ಕಾರ್ಯ ತಾಲೂಕಿನಾದ್ಯಂತ ಪ್ರಶಂಸೆಗೆ ಪಾತ್ರವಾಗಿತ್ತು. ಹೀಗೆ ಈ ಸಾಲಿನ ಫಲಿತಾಂಶ ಸುಧಾರಣೆಗೆ ಅನುಸರಿಸಿದ ಹಲವು ಕ್ರಮಗಳು ಯಶಸ್ಸು ಕಂಡಿರುವುದು ಗಮನಾರ್ಹವಾಗಿದೆ.

---

## ಧಾರ್ಮಿಕ ಅವಮಾನ: ಖಂಡನೆ ವ್ಯಕ್ತ

ಚಾಮರಾಜನಗರ: ಬೆಂಗಳೂರಿನ ಕೃಪಾನಿಧಿ ಕಾಲೇಜಿನಲ್ಲಿ ಸಿ.ಇ.ಟಿ ಪರೀಕ್ಷೆ ಬರೆಯಲು ಬಂದಿದ್ದ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಯೊಬ್ಬರಿಗೆ ಯಜ್ಞಪವೀತ (ಜನಿವಾರ) ತೆಗೆಸಲು ಒತ್ತಾಯಿಸಿರುವ ಘಟನೆ ಖಂಡನೀಯವೆಂದು ವಿವಿಧ ವಲಯಗಳಿಂದ ಆಕ್ರೋಶ ವ್ಯಕ್ತವಾಗಿದೆ.

ವಿದ್ಯಾರ್ಥಿಯ ಧಾರ್ಮಿಕ ಆಚರಣೆಯ ಭಾಗವಾಗಿರುವ ಯಜ್ಞಪವೀತವನ್ನು ತೆಗೆಸಲು ಒತ್ತಾಯಿಸಿರುವುದು ಅವರ ಧರ್ಮಸ್ವಾತಂತ್ರ್ಯ ಹಕ್ಕಿಗೆ ಧಕ್ಕೆಯಾಗಿದೆ ಎಂದು ಆರೋಪಿಸಲಾಗಿದೆ. ಭಾರತೀಯ ಸಂವಿಧಾನವು ವ್ಯಕ್ತಿಯ ಧಾರ್ಮಿಕ ನಂಬಿಕೆಗಳನ್ನು ಕಾಪಾಡುವ ಹಕ್ಕು ನೀಡಿದ್ದು, ಇಂತಹ ಕ್ರಮಗಳು ಮಾನವೀಯ ಗೌರವಕ್ಕೂ ಧಕ್ಕೆ ತರುತ್ತವೆ ಎಂದು ಹೇಳಲಾಗಿದೆ. ಇದೇ ರೀತಿಯ ಘಟನೆ ಕಳೆದ ವರ್ಷವೂ ನಡೆದಿರುವುದಾಗಿ ವರದಿಗಳು ಸೂಚಿಸುತ್ತಿದ್ದು, ಇಂತಹ ಘಟನೆಗಳ ಮರುಕಳಿಕೆ ಬಗ್ಗೆ ಅನುಮಾನ ವ್ಯಕ್ತವಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ನಿಯಮಗಳನ್ನು ಜಾರಿಗೆ ತರುವ ಸಂದರ್ಭದಲ್ಲಿ ವಿದ್ಯಾರ್ಥಿಗಳ ಧಾರ್ಮಿಕ ನಂಬಿಕೆಗಳಿಗೆ ಗೌರವ ನೀಡಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಇಂತಹ ಘಟನೆಗಳು ಮರುಕಳಿಸದಂತೆ ಸ್ಪಷ್ಟ ಮಾರ್ಗಸೂಚಿಗಳನ್ನು ರೂಪಿಸಬೇಕು ಎಂದು ಒತ್ತಾಯಿಸಲಾಗಿದೆ. ಈ ಬಗ್ಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಯುವ ವಿಭಾಗದ ಜಿಲ್ಲಾ ಸಂಚಾಲಕ ಪ್ರತಾಪ್ ಎಸ್ ಅವರು ಖಂಡನೆ ವ್ಯಕ್ತಪಡಿಸಿದ್ದಾರೆ. ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಧಾರ್ಮಿಕ ಹಾಗೂ ಸಾಂಸ್ಕೃತಿಕ ವೈವಿಧ್ಯತೆಯನ್ನು ಗೌರವಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

## ಪ್ರಕೃತಿ ಸಂರಕ್ಷಣೆಯಿಂದ ಅಂತರ್ಜಲ ವೃದ್ದಿ

ಚಾಮರಾಜನಗರ, ಗಿಡಮರಗಳನ್ನು ಬೆಳೆಸುವುದರಿಂದ ಅಂತರ್‌ಜಲ ಮಟ್ಟವನ್ನು ಹೆಚ್ಚಿಸಲು ಸಹಕಾರಿಯಾಗಲಿದೆ ಎಂದು ಪರಿಸರವಾದಿ ಪುಣನೂರು ದೊರೆಸ್ವಾಮಿ ಹೇಳಿದರು.

ನಗರದ ರೈಲ್ವೆ ನಿಲ್ದಾಣದ ರಸ್ತೆಯಲ್ಲಿ ಈಶ್ವರಿ ಸೋಷಿಯಲ್ ಟ್ರಸ್ಟ್ ಆಯೋಜಿಸಿದ್ದ ಸಾಲು ಗಿಡ ಮರಗಳ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ನಗರದ ಸುತ್ತಾಮುತ್ತಾ ಹಿಂದೆ ದೊಡ್ಡ ದೊಡ್ಡ ಕರೆಕಟ್ಟೆಗಳಿದ್ದವು. ಇದರಿಂದ ಅಂತರ್ಜಲ ವೃದ್ಧಿಯಾಗಿ ನೀರಿನ ಸಮಸ್ಯೆ ದೂರವಾಗಿತ್ತು. ಕಾಲಕ್ರಮೇಣ ರಾಜಕಾರಣಿಗಳ ನಿರ್ಲಕ್ಷದಿಂದ ಕೆರೆ ಕಟ್ಟೆಗಳು ಮುಚ್ಚಿಹೋದವು.ಪ್ರಸ್ತುತ ಕುಡಿಯುವ ನೀರಿನ ಸಮಸ್ಯೆ ಭೀಕರವಾಗಿರುವುದಕ್ಕೆ ಇದು ಸಹ ಕಾರಣವಾಗಿದೆ ಎಂದರು.

ಬಿಜೆಪಿ ಮುಖಂಡ ನಿಜಗುಣರಾಜು ಗಿಡ ನೆಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಕಳೆದ ಹತ್ತುವರ್ಷಗಳ ಹಿಂದೆ ನೆಟ್ಟ ಸಾಲು ಗಿಡಗಳು ಇಂದು ಮರಗಳಾಗಿ ಉತ್ತಮವಾದ ಆಮ್ಲಜನಕವನ್ನು ಮತ್ತು ನೆರಳನ್ನು ನೀಡುತ್ತಿದೆ ಇದನ್ನು ಸಂರಕ್ಷಣೆ ಮಾಡಿ ಪೋಷಣೆ ಮಾಡುವ ಹೊಣೆ ನಮ್ಮೆಲ್ಲರ



ಮೇಲಿದೆ ಎಂದರು. ಈಶ್ವರಿ ಸೋಷಿಯಲ್ ಟ್ರಸ್ಟ್ ಸಂಸ್ಥಾಪಕ ಸಿ.ಎಂ.ವೆಕಟೇಶ್ ಮಾತನಾಡಿ ಈ ಹತ್ತು ವರ್ಷಗಳಲ್ಲಿ 17 ಸಾವಿರ ಸಾಲು ಗಿಡಮರಗಳನ್ನು ಬೆಳೆಸಲು ಹಾಗೂ ಪೋಷಣೆಮಾಡಲು ಸಹಕಾರ ಮತ್ತು ಸಹಾಯಮಾಡಿದ ಚಾಮರಾಜನಗರ ಜಿಲ್ಲೆಯ ಜನತೆಗೆ ಮತ್ತು ಸಂಘ ಸಂಸ್ಥೆಗಳಿಗೆ ಕೃತಜ್ಞತೆಯನ್ನು ತಿಳಿಸಿದರು. ರೋಟರಿ ವಲಯ ಸಹಾಯಕ ಗರ?ನರ್ ಡಿ.ಎಸ್.ಗಿರೀಶ್, ವರ್ತಕರಾದ ಆರ್.ಯೋಗರಾಜು, ಮಹದೇವ ಸ್ವಾಮಿ, ಮಾಜಿ ನಗರಸಭಾ ಸದಸ್ಯ ಇಮ್ರಾನ್, ಕನ್ನಡಪರ ಹೋರಾಟಗಾರ ಚಾ.ಹ.ಶಿವರಾಜು, ಗಾಯಕ ಆರ್.ಮಹೇಂದ್ರ, ಜನಪದ ಕಲಾವಿದ ಸಿ.ಎಂ.ನರಸಿಂಹಮೂರ್ತಿ, ವೇಣುಗೋಪಾಲ್, ಸಿದ್ದು, ಜಯಲಕ್ಷ್ಮಿ ?ಮ, ಹರಿಕೃಷ್ಣ, ನೀಲಕಂಠ, ಚಲುವಮೂರ್ತಿ ಇತರರು ಹಾಜರಿದ್ದರು.


## ಸಾಧಿಖ ತಾಲ್ಲೂಕಿನಲ್ಲಿ ದ್ವಿತೀಯ ಸ್ಥಾನ


ರಾಮನಗರ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 613 ಅಂಕಗಳನ್ನು (ಶೇ 98.08) ಗಳಿಸುವುದರ ಮೂಲಕ ನಗರದ ತಿಲಕ್ ಮೆಮೋರಿಯಲ್ ಆಂಗ್ಲ ಶಾಲೆಯ ವಿದ್ಯಾರ್ಥಿನಿ ಸಾದಿಖಾ ಬಾನು ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಂಕಗಳಿಸಿದವರ ಪೈಕಿ ಎರಡನೇ ಸ್ಥಾನದಲ್ಲಿದ್ದಾರೆ.

ಇಂಗ್ಲೀಷ್ ಭಾಷೆಯಲ್ಲಿ 120, ಕನ್ನಡ ಭಾಷೆಯಲ್ಲಿ 100, ಹಿಂದಿಯಲ್ಲಿ 100, ಗಣಿತದಲ್ಲಿ 98, ವಿಜ್ಞಾನದಲ್ಲಿ 100 ಮತ್ತು ಸಮಾಜ ವಿಜ್ಞಾನದಲ್ಲಿ 95 ಅಂಕಗಳನ್ನುಗಳಿಸಿ ಶಾಲೆಯ ಕೀರ್ತಿಯನ್ನು ಬೆಳೆಗಿದ್ದಾರೆ ಎಂದು ಶಾಲೆಯ ಮುಖ್ಯಶಿಕ್ಷಕರು, ಬೋಧಕ ವರ್ಗ ಮತ್ತು ಆಡಳಿತ ವರ್ಗ ಮೆಚ್ಚುಗೆ ವ್ಯಕ್ತಪಡಿಸಿದೆ.

ಶ್ರೀ ಶಿವಗಂಗ ಶಾಲೆಯ ಸಾಧನೆ

ತಾಲ್ಲೂಕಿನ ಮಾಯಗಾನಹಳ್ಳಿಯಲ್ಲಿರುವ ಶ್ರೀ ಶಿವಗಂಗಾ ಪಬ್ಲಿಕ್ ಸ್ಕೂಲ್‌ನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ನೀಡಿದ್ದಾರೆ. ಅತ್ಯುನ್ನತ ಶ್ರೇಣಿಯಲ್ಲಿ 20 ವಿದ್ಯಾರ್ಥಿಗಳು, ಪ್ರಥಮ ಶ್ರೇಣಿಯಲ್ಲಿ 28, ದ್ವಿತೀಯ ಶ್ರೇಣಿಯಲ್ಲಿ 6 ವಿದ್ಯಾರ್ಥಿಗಳು ಮತ್ತು ಇಬ್ಬರು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ಶಾಲೆಯ ಕಾರ್ಯದರ್ಶಿ ಬಾಲಗಂಗಾಧರ ಮೂರ್ತಿ ಸಿ, ಮುಖ್ಯ ಶಿಕ್ಷಕಿ ಸುಮತಿ ತಿಳಿಸಿದ್ದಾರೆ. 596 ಅಂಕಗಳನ್ನು ಗಳಿಸುವುದರ ಮೂಲಕ ರಘುನಂದನ



ನಾಯಕ್ ಶಾಲೆಯಲ್ಲಿ ಪ್ರಥಮ ಸ್ಥಾನದಲ್ಲಿದ್ದಾರೆ. 593 ಅಂಕಗಳನ್ನುಗಳಿಸಿರುವ ರೇವತಿ.ಎಮ್ ದ್ವಿತೀಯ ಸ್ಥಾನ ಮತ್ತು 592 ಅಂಕಗಳನ್ನು ಗಳಿಸಿರುವ ಸುಮುಖ ಎಸ್.ಡಿ ಶಾಲೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ತೃತೀಯ ವಿದ್ಯಾರ್ಥಿಯಾಗಿದ್ದಾರೆ. ಮತ್ತೋರ್ವ ವಿದ್ಯಾರ್ಥಿನಿ ಸಿಂಚನ ಕೆ.ಆರ್. ಕನ್ನಡ ಭಾಷೆಯಲ್ಲಿ 125ಕ್ಕೆ 125 ಅಂಕಗಳನ್ನುಗಳಿಸಿದ್ದಾರೆ ಎಂದು ಶಾಲೆಯ ಕಾರ್ಯದರ್ಶಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

---

## ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಪದವಿ ಪ್ರದಾನ

ಮೈಸೂರು: ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಸಂಸ್ಥೆಯಲ್ಲಿ 2023–25 ಬ್ಯಾಚ್‌ನ ಎಂ.ಎಸ್.ಸಿ. ಫುಡ್ ಟೆಕ್ನಾಲಜಿ ಪದವೀಧರರ ಪದವಿ ಪ್ರದಾನ ಸಮಾರಂಭಕ್ಕೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು ಚಾಲನೆ ನೀಡಿದರು.




ಬಳಿಕ ಮಾತನಾಡಿದ ಅವರು, ಪರಿಸರ ಸ್ನೇಹಿ ಆಹಾರ ಉದ್ಯಮದ ಅಭಿವೃದ್ಧಿಯ ಮೂಲಕ ಶಾಶ್ವತ ಸಮಾಜ ನಿರ್ಮಾಣದ ಅಗತ್ಯತೆಯನ್ನು ಒತ್ತಿಹೇಳಿದರು. ಸುರಕ್ಷಿತ ಹಾಗೂ ಪೌಷ್ಟಿಕ ಆಹಾ ರವನ್ನು ಒದಗಿಸುವುದರ ಜೊತೆಗೆ ಆಹಾರ ತಂತ್ರ ಜ್ಞಾನದ ಪ್ರಗತಿಯಿಂದ ರೈತರಿಗೆ ಪ್ರಯೋಜನವಾಗುವಂತೆ ನೋಡಿಕೊಳ್ಳಬೇಕೆಂದು ಹೇಳಿದರು. ಮೈಸೂರಿನ ಪ್ರಮುಖ ಸಂಸ್ಥೆಗಳು ಎಂಎಸ್‌ಎಂ ಇಗಳು ಹಾಗೂ ಆಹಾರ ಸ್ಟರ?ಟ್‌ಅಪ್‌ಗಳಿಗೆ ಉತ್ತೇಜನ ನೀಡಲು ಇಂಕ್ಯೂಬೇಶನ್ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸಬೇಕೆಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ ಆಹಾರ ಸಂಸ್ಕರಣಾ ಕ್ಷೇತ್ರವು ಈಗ ಮಹತ್ವದ ಹಂತದಲ್ಲಿ ಇರುವುದನ್ನು ವಿವರಿಸಿದರು. ವಿಜ್ಞಾನಿ ಡಾ. ರೇವತಿ ಬಾಸ್ಕರನ್ ಸ್ವಾಗತ ಕೋರಿದರು. ಡಾ.ಬಿ.ಪ್ರವೀಣಾ ಮುಖ್ಯ ಅತಿಥಿಯನ್ನು ಪರಿಚಯಿಸಿದರು. ಡಾ.ಬಿ.ಕೆ.ಬೆಟ್ಟ ದಯ್ಯ, ಸಿಂಧು ಇನ್ನಿತರರು ಇದ್ದರು.

ಒಟ್ಟು 29 ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಮತ್ತು ನವೀನ ಸಂಶೋಧನಾ ಅಕಾಡೆಮಿವತಿಯಿಂದ ಎಂ.ಎಸ್.ಸಿ. ಫುಡ್ ಟೆಕ್ನಾಲಜಿ ಪದವಿಗಳನ್ನು ಪ್ರದಾನ ಮಾಡಲಾಯಿತು. ಎಚ್.ಎಸ್. ಪೂರ್ಣಿಮಾ (ಪ್ರಥಮ ರ?ಯಾಂಕ್), ಪವಿತ್ರ (ದ್ವಿತೀಯ ರ?ಯಾಂಕ್) ಮತ್ತು ಶುಭ್ರಾ (ತೃತೀಯ ರ್ಯಾಯಾಂಕ್) ಶ್ರೇಷ್ಟ ಸ್ಥಾನಗಳನ್ನು ಪಡೆದರು

## ಬಸವಣ್ಣ, ಅಂಬೇಡ್ಕರ್‌ ಜಯಂತಿ ಆಚರಣೆ

ಗುಂಡ್ಲುಪೇಟೆ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜಗಜ್ಯೋತಿ ಬಸವಣ್ಣ ಹಾಗ ಡಾ ಬಿ ಅರ್ ಅಂಬೇಡ್ಕರ್ ರವರ ಜಯಂತಿಯನ್ನು ಜಯ ಕರ್ನಾಟಕ ರಕ್ಷಣಾ ಸೇನೆ ವತಿಯಿಂದ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಯಿತು

ಕಾರ್ಯಕ್ರಮದಲ್ಲಿ ಜಿಲ್ಲಾ ಗೌರವಾಧ್ಯಕ್ಷೆ ಪುಟ್ಟಮ್ಮ ಮಾತನಾಡಿ ಸಮಾಜದಲ್ಲಿನ ಅಂಕು ಡೊಂಕುಗಳನ್ನು ತಿದ್ದಿದ ಮಹನೀಯರ ತತ್ವ ಆದರ್ಶಗಳ ಮೈಗೂಡಿಸಿಕೊಳ್ಳಬೇಕು ಜಯಂತಿ ಆಚರಣೆ ಮಾಡಿದರೆ ಸಾಲದು ಅವರ ದಾರಿಯಲ್ಲಿ ನಾವು ನಡೆದುಕೊಳ್ಳಬೇಕು ಬಸವಣ್ಣನವರು ಸಮ ಸಮಾಜದ ನಿರ್ಮಾತೃ ಜಾತಿಯ ಪಿಡುಗು ಬಡಿದೊಡಿಸಲು ಪಣತೊಟ್ಟ ಮಹಾನ್ ಚೇತನ ಹಾಗೆ ಅಂಬೇಡ್ಕರ್ ರವರು ಇದೆ ಮಾರ್ಗದಲ್ಲೇ ಸಮಸಮಾನತೆ ನಿರ್ಮಿಸಲು ಅಡಿಪಾಯ ಹಾಕಿಕೊಟ್ಟ ಮಹಾನ್ ಧೀಮಂತ ಸ್ವತಂತ್ರವಾಗಿ ಜೀವಿಸಲು ಅವಕಾಶ ಕಲ್ಪಿಸಿದ ಅದ್ಭುತ ಜ್ಞಾನಿ ಇವರ ಜ್ಞಾನಕ್ಕೆ ಇಡೀ ಪ್ರಪಂಚವೇ ತಲೆ ಬಾಗಿ ಅಂಬೇಡ್ಕರ್ ರವರ ಪೂಜಿಸಲಾಗುತ್ತಿದೆ ಬಸವಣ್ಣ ಮತ್ತು ಅಂಬೇಡ್ಕರ್ ಮಹಾನ್ ದಿಗ್ಗಜರು ಎಂದು ತಿಳಿಸಿದರು

ಜಿಲ್ಲಾ ಅಧ್ಯಕ್ಷ ಈಶ್ವರ್ ಎಸ್ ಮಾತನಾಡಿ ಸಮಾಜವನ್ನು ಸಮ ಸಮಾನತೆಗೆ ಕೊಂಡೊಯ್ಯಲು ಶ್ರಮಿಸಿದ ಆದಿಗುರು ಕಾಯಕವೇ ಕೈಲಾಸ ತತ್ವದಡಿ ಜಾತೀಯತೆಯ ಸಂಕೋಲೆಯನ್ನ ಬಿಡಿಸಲು ಅನುಭವ ಮಂಟಪವನ್ನೆ ಸ್ಥಾಪಿಸಿದರು ಅಂಬೇಡ್ಕರ್ ರವರು ಇಡೀ



ವಿಶ್ವದಲ್ಲೇ ಅತೀ ಹೆಚ್ಚಿನ ಜ್ಞಾನ ಹಾಗೂ ಶಿಕ್ಷಣವನ್ನು ಪಡೆದು ಸಂವಿಧಾನ ರಚಿಸಿ ನೊಂದ ಪ್ರತಿಯೊಬ್ಬ ಪ್ರಜೆಯೂ ರಕ್ಷಣೆ ಹಾಗೂ ತನ್ನ ಹಕ್ಕನ್ನು ಪಡೆಯಲು ಸಮಾನ ಅವಕಾಶ ಕಲ್ಪಿಸಿದ ಜ್ಞಾನಿ ದೇವ ಮಾನವ ಎಂದು ತಿಳಿಸಿದರು ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜು ಲಕ್ಕೂರು ಜಿಲ್ಲಾ ಉಪಾಧ್ಯಕ್ಷ ಬೆಳವಾಡಿ ರಾಜಪ್ಪ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ರೇಖಾ ಭಾಸ್ಕರ್ ಚಾಮರಾಜನಗರ ತಾಲ್ಲೂಕು ಅಧ್ಯಕ್ಷೆ ಬಿ ಸವಿತಾ ಯುಟ್ಯೂಬರ್ ರಾಜು ಉಪಾಧ್ಯಕ್ಷ ಶಿವಕುಮಾರ್ ಬಲಚವಾಡಿ ಟೌನ್ ಅಧ್ಯಕ್ಷ ಅಜಿತ್ ಕುಮಾರ್ ಉಪಾಧ್ಯಕ್ಷ ಗುರುಪ್ರಸಾದ್ ಪಿ ವೆಂಕಟರಮಣಸ್ವಾಮಿ ಕೃಷ್ಣ ಮಹದೇವಸ್ವಾಮಿ ಮಾದ್ಯಮ ಸಲಹೆಗಾರ ಸದಾನಂದ ಕಣ್ಣೆಗಾಲ ಇನ್ನಿತರರು ಹಾಜರಿದ್ದರು..

---

## ಕಾಗಲವಾಡಿಯಲ್ಲಿ ಉಚಿತ ಕಣ್ಣಿನ ತಪಾಸಣೆ

ಚಾಮರಾಜನಗರ, ತಾಲೂಕಿನ ಕಾಗಲವಾಡಿಯಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರ ನಡೆಯಿತು.

ಗ್ರಾಮದ ಜಾಮಿಯಾ ಮಸೀದಿಯಲ್ಲಿ ರೋಟರಿ ಕ್ಲಬ್, ಜಾಮಿಯಾ ಮಸ್ಜಿದ್ ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ,ಇವರುಗಳ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ 184 ಮಂದಿ ತಪಾಸಣೆ ಮಾಡಿಸಿಕೊಂಡರು.61ಮಂದಿ ಶಸ್ತ್ರ ಚಿಕಿತ್ಸೆ ಗೆ ಆಯ್ಕೆಯಾದರು. ಜಾಮಿಯಾ ಮಸ್ಜಿದ್ ಮುಖಂಡ ಅಲ್ತಾಫ್ ಅಹಮದ್ ಮಾತನಾಡಿ, ಸಾಮಾಜಿಕ ಕಳಕಳಿಯೊಂದಿಗೆ ಈ ಭಾಗದಲ್ಲಿ ಕಣ್ಣಿನ ತೊಂದರೆಯಿಂದ ಬಳಲುತ್ತಿದ್ದ ಅವರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಜಾಮಿಯಾ ಮಸ್ಜಿದ್, ರೋಟರಿ ಕ್ಲಬ್, ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ,ಇವರುಗಳ ಸಂಯುಕ್ತಾಶ್ರಯದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದರು.

ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯವಾಗಿದೆ. ದೈನಂದಿನ ಜೀವನದಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳುವ ಮೂಲಕ ಕಣ್ಣಿನ ದೃಷ್ಟಿಯನ್ನು ಸುಧಾರಿಸಬಹುದು ಮತ್ತು ದೀರ್ಘಕಾಲದ ವರೆಗೆ ಆರೋಗ್ಯವಾಗಿರಿಸಬಹುದು ಎಂದರು. ಚಂದಕವಾಡಿ ಹೋಬಳಿಯ ಜನರು ಚಾಮರಾನಗರ ಬಂದು




ಕಣ್ಣಿನ ತಪಾಸಣೆ ಮಾಡಿಸಲು ತೊಂದರೆಯಾ ಗುತ್ತಿತ್ತು ಇದನ್ನು ಮನಗಂಡು ಜಾಮಿಯ ಮಸ್ಜಿದ್ ಮುಖಂಡರೊಂದಿಗೆ ಚರ್ಚಿಸಿದಾಗ ಜಾಮಿಯಾ ಮಸ್ಜಿದ್ ಉಚಿತ ಆರೋಗ್ಯ ತಪಾಸಣೆ ಶಿಬಿರ ವನ್ನು ಅಯೋಜಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗಿದೆ. ಎಂದು ಆಶಿಸಿದರು. ಧರ್ಮಗುರುಗಳಾದ ಮೊಹಮ್ಮದ್ ಯಾಸೀರ್ ಅರ್ಫತ್ ರಷಾದಿ, ವಕ್ಫ್ ಬೋರ್ಡ್ ಲೆಕ್ಕಾಧಿಕಾರಿ ರುಮಾನ್ ಖಾನ್, ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು, ಮುಖಂಡರಾದ ..,ಅಲ್ತಾಫ್ ಅಹಮದ್, ಸೈಯದ್ ಆರೀಪ್ ಉಲ್ಲಾ, ಮುಬಾರಕ್ ಪಾಷ, ಸುಮೇರ್, ಸಿದಾರತ್, ಅಬ್ಜಲ್ ಪಾಷ, ಅಬ್ದುಲ್ ಮುತಾಲಿಬ್, ಪಾಜೀಲ್ ಪಾಷ, ನಿಜಾಂಪಾಷ, ಪಿಆರ್ ಓ ವಿಜಯಕುಮಾರ್ ಇತರರು ಭಾಗವಹಿಸಿದ್ದರು.

**ಶಾಸಕ ಗಣೇಶ್ ಪ್ರಸಾದ್, ಮಾಜಿ ಶಾಸಕ ನಿರಂಜನ್ ಕುಮಾರ್ ಸಮ್ಮುಖದಲ್ಲಿ ಪೂರ್ವಭಾವಿ ಸಭೆ**

## ಮೇ23ಕ್ಕೆ ಬಸವ ಜಯಂತಿ ಅದ್ದೂರಿ ಅಚರಣೆ

ಗುಂಡ್ಲುಪೇಟೆ: ತಾಲ್ಲೂಕು ವೀರಶೈವ ಲಿಂಗಾಯತ ಮಹಾಸಭಾ, ವಿವಿಧ ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು ಹಾಗೂ ಸಮುದಾಯದ ವತಿಯಿಂದ ಮೇ.23 ರಂದು ಅದ್ದೂರಿಯಾಗಿ ಬಸವ ಜಯಂತಿ ಆಚರಣೆ ನಡೆಸಲು ಪಟ್ಟಣದ ಸೋಮೇಶ್ವರ ಹಾಸ್ಟೆಲ್ ನಲ್ಲಿ ಕರೆದಿದ್ದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಪಟ್ಟಣದಲ್ಲಿ ಅದ್ದೂರಿಯಾಗಿ ಬಸವ ಜಯಂತಿ ಅಚರಣೆ ನಡೆಸುವ ಸಂಬಂಧ ಪಟ್ಟಣದ ಸೋಮೇಶ್ವರ ಹಾಸ್ಟೆಲ್ ನಲ್ಲಿ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಮಾಜಿ ಶಾಸಕ ಸಿ ಎಸ್ ನಿರಂಜನ್ ಕುಮಾರ್ ನೇತೃತ್ವದಲ್ಲಿ ಸಮುದಾಯದ ಮುಖಂಡರ ಪೂರ್ವಭಾವಿ ಸಭೆ ನಡೆಸಲಾಯಿತು ಈ ಸಂದರ್ಭದಲ್ಲಿ ಬಸವ ಜಯಂತಿ ಅದ್ದೂರಿಯಾಗಿ ನಡೆಸಲು ಸಕಲ ಸಿದ್ದತೆ ನಡೆಸಲು ಕರೆ ನೀಡಲಾಯಿತು.

ಜೆಎಸ್ ಎಸ್ ಕಾಲೇಜಿನಿಂದ ಬೆಳ್ಳಿ ರಥದಲ್ಲಿ ಬಸವೇಶ್ವರರ ಪುತ್ಥಳಿ ಮೆರವಣಿಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಾಗುವುದು, ನಂದಿಕಬ ಸತ್ತಿಗೆ ಸುರಪಾನಿ



,ವಿವಿಧ ಕಲಾ ತಂಡಗಳ ಮೂಲಕ ಡಿಜೆ ಬಳಸಿ ಮೆರವಣಿಗೆ ಸಾಗಿ ಬರುವುದು, ನಂತರ ಸೋಮೇಶ್ವರ ಹಾಸ್ಟಲ್ ಆವರಣದಲ್ಲಿ ಮಧ್ಯಾಹ್ನ ಪ್ರಸಾದ ವ್ಯವಸ್ಥೆ ಮಾಡಿಸಲಾಗುವುದು.

ತಾಲ್ಲೂಕಿನ ಮಠಾಧೀಶರು ಹಾಗೂ ಶಾಸಕ ಗಣೇಶ್ ಪ್ರಸಾದ್ ಮಾಜಿ ಶಾಸಕ ನಿರಂಜನ್ ಕುಮಾರ್ ರವರು ಬಸವ ಜಯಂತಿ ಮೆರವಣಿಗೆ ಗೆ ಚಾಲನೆ ನೀಡುವರು ಈ ಸಂದರ್ಭದಲ್ಲಿ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯಂತ ಹೆಚ್ಚು ಅಂಕ ಪಡೆದ ತಲಾ ಹತ್ತು ಮಕ್ಕಳಿಗೆ ಸನ್ಮಾನಿಸಲು ಸಬೆಯಲ್ಲಿ ತೀರ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಮಹಾಸಭೆ ಮಾಜಿ ಅಧ್ಯಕ್ಷರುಗಳು, ಜಿಲ್ಲಾ ನಿರ್ದೇಶಕರುಗಳು, ತಾಲ್ಲೂಕು ನಿರ್ದೇಶಕರುಗಳು, ಯುವ ಘಟಕದ ಅಧ್ಯಕ್ಷರು ಸಮುದಾಯದ ಮುಖಂಡರು. ಯುವ ಮುಖಂಡರು ಭಾಗಿಯಾಗಿದ್ದರು.

# ಐತಿಹಾಸಿಕ ಮದ್ದೂರು ಉತ್ಸವ-2026ಕ್ಕೆ ವಿಧ್ಯುಕ್ತ ಚಾಲನೆ

# ಸಂಸ್ಕೃತಿ ಉಳಿಸಿ, ಬೆಳೆಸುವುದು ಸರ್ಕಾರದ ಆದ್ಯತೆ: ಸಚಿವ ಚಲುವರಾಯಸ್ವಾಮಿ



**ಮದ್ದೂರು:** ಐತಿಹಾಸಿಕ ಮದ್ದೂರು ಉತ್ಸವ–2026ಕ್ಕೆ ಮಂಡ್ಯ ಜಿಲ್ಲಾ ಉಸ್ತುವಾರಿ ಹಾಗೂ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ವಿಧ್ಯುಕ್ತ ಚಾಲನೆ ನೀಡಿದರು.

ದೀಪ ಬೆಳಗಿಸಿ ಉತ್ಸವ ಉದ್ಘಾಟಿಸಿ ಮಾತನಾಡಿದ ಸಚಿವರು,ಮದ್ದೂರು ಕೇವಲ ಭೌಗೋಳಿಕ ಗಡಿಯಲ್ಲ, ಇದು ತ್ಯಾಗರಾಜರ ನಾಡು, ಇತಿಹಾಸದ ಪುಟಗಳಲ್ಲಿ ದಾಖಲಾದ ಪುಣ್ಯಭೂಮಿ. ನಮ್ಮ ಜಾನಪದ, ಕಲೆ, ಕೃಷಿ ಸಂಸ್ಕೃತಿಯನ್ನು ಜಗತ್ತಿಗೆ ಸಾರಲು ಇಂತಹ ಉತ್ಸವಗಳು ಸೇತುವೆಯಾಗಬೇಕು. ಸಂಸ್ಕೃತಿ ಉಳಿಸಿ ಬೆಳೆಸುವುದು ಸರ್ಕಾರದ ಆದ್ಯ ಕರ್ತವ್ಯ ಎಂದು ಪ್ರತಿಪಾದಿಸಿದರು.

**ಪ್ರಮುಖ ಘೋಷಣೆಗಳು:**

- ಮದ್ದೂರು ಉತ್ಸವವನ್ನು ಮುಂದಿನ ವರ್ಷದಿಂದ ರಾಜ್ಯಮಟ್ಟದ ಉತ್ಸವವನ್ನಾಗಿ ಆಚರಿಸಲು ಕ್ರಮ ಕೈಗೊಳ್ಳಲಾಗುವುದು.?
- ಸ್ಥಳೀಯ ಕಲಾವಿದರಿಗೆ ಶಾಶ್ವತ ವೇದಿಕೆ ನಿರ್ಮಿಸಲು 2 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗುವುದು.?
- ಮದ್ದೂರು ಕೆರೆಯನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಿ, ದೋಣಿ ವಿಹಾರಕ್ಕೆ ವ್ಯವಸ್ಥೆ ಮಾಡಲಾಗುವುದು.

ರೈತರಿಲ್ಲದೆ ಉತ್ಸವವಿಲ್ಲ. ಕೃಷಿ ಮೇಳದ ಮೂಲಕ ನಮ್ಮ ಅನ್ನದಾತರಿಗೆ ಹೊಸ ತಂತ್ರಜ್ಞಾನ ಪರಿಚಯಿಸುತ್ತಿದ್ದೇವೆ. ಯುವಕರು ಕೃಷಿಯತ್ತ ಒಲವು ತೋರಿಸಬೇಕು? ಎಂದು ಸಚಿವ ಚಲುವರಾಯಸ್ವಾಮಿ ಕರೆ ನೀಡಿದರು. ಈ ಸಂದರ್ಭದಲ್ಲಿ ಜಾನಪದ ಕಲಾವಿದೆ ಲಕ್ಷ್ಮಮ್ಮ, ಕೃಷಿ ಸಾಧಕ ಪುಟ್ಟಸ್ವಾಮಿ ಸೇರಿದಂತೆ 15 ಸಾಧಕರನ್ನು ಸಚಿವರು ಸನ್ಮಾನಿಸಿದರು. ಶಾಲಾ ಮಕ್ಕಳ ಕಾವೇರಿ ಆರತಿ ನೃತ್ಯರೂಪಕ ಪ್ರೇಕ್ಷಕರ ಮನಗೆದ್ದಿತು.

ಶಾಸಕ ಕೆ.ಎಂ. ಉದಯ್ ಗೌಡ ಅಧ್ಯಕ್ಷತೆ ವಹಿಸಿದ್ದರು. ಶಾಸಕ ದಿನೇಶ್ ಗೂಳಿಗೌಡ,ಜಿಲ್ಲಾಧಿಕಾರಿ ಡಾ. ಕುಮಾರ್, ಜಿ.ಪಂ. ಸಿಇಒ ಕೆ ಆರ್ ನಂದಿನಿ,ಮೈಶುಗರ್ ಅಧ್ಯಕ್ಷ ಸಿ ಡಿ ಗಂಗಾಧರ್ ತಹಶೀಲ್ದಾರ್ ಉಪಸ್ಥಿತರಿದ್ದರು.

# ಯಶಸ್ವಿಯಾಗಿ ಜರುಗಿದ ಆಚಾರ್ಯದ್ವಯರ ಶೋಭಾಯಾತ್ರೆ

**ಮಂಡ್ಯ:** ಶ್ರೀ ಶಂಕರ ತತ್ವ ಪ್ರಸಾರ ಅಭಿಯಾನ ಸಮಿತಿ ಮಂಡ್ಯ ವತಿಯಿಂದ ಜಿಲ್ಲಾ ಶ್ರೀ ವೈಷ್ಣವ ಸಂಘ,ಧಾರ್ಮಿಕ ಸೇವಾ ಟ್ರಸ್ಟ್ ಹಾಗೂ ನಗರದ ಹಲವು ವಿಪ್ರ ಸಂಘಟನೆಗಳ ಸಹಯೋಗದೊಂದಿಗೆ ಆದಿ ಜಗದ್ಗುರು ಶ್ರೀ ಶಂಕರಾಚಾರ್ಯರು ಮತ್ತು ಶ್ರೀ ರಾಮಾನುಜಾಚಾರ್ಯರ ಜಯಂತಿ ಅಂಗವಾಗಿ ಮಂಡ್ಯದ ಪ್ರಮುಖ ಬೀದಿಗಳಲ್ಲಿ ಶುಕ್ರವಾರ ಸಂಜೆ ನಡೆದ ಆಚಾರ್ಯದ್ವಯರ ಶೋಭಾಯಾತ್ರೆ ಯಶಸ್ವಿಯಾಗಿ ಸಂಪನ್ನಗೊಂಡಿತು.

ಮಂಡ್ಯ ವಿದ್ಯಾನಗರದ ಶ್ರೀ ವಿದ್ಯಾಗಣಪತಿ ದೇವಸ್ಥಾನದ ಆವರಣದಲ್ಲಿ ಪುಷ್ಪಾಲಂಕೃತಗೊಂಡ ಶ್ರೀ ಶಂಕರಾಚಾರ್ಯರು ಮತ್ತು ಶ್ರೀ ರಾಮಾನುಜಾಚಾರ್ಯರ ಚಿತ್ರಪಟಗಳನ್ನು ತೆರೆದ ವಾಹನದಲ್ಲಿ ಇರಿಸಿ ಪೂಜೆ ನೆರವೇರಿಸಲಾಯಿತು.

ನಂತರ ಮಂಗಳವಾದ್ಯ ಮತ್ತು ವೇದಮಂತ್ರ ಘೋಷದೊಂದಿಗೆ ವಿದ್ಯಾನಗರ 1 ನೇ ತಿರುವಿನ ಅನ್ನಪೂರ್ಣೇಶ್ವರಿ ದೇವಾಲಯ ಮತ್ತು ಕೆಆರ್ ರೋಡ್ ನಲ್ಲಿನ ವ್ಯಾಸರಾಜ ಮಠದ ಆವರಣದ ಶ್ರೀ ಗುರು ರಾಘವೇಂದ್ರರ ಸನ್ನಿಧಿಯಲ್ಲಿ ಪೂಜೆ ಸಲ್ಲಿಸಿ ವಿವಿ ರಸ್ತೆಯಲ್ಲಿ ಸ್ವಲ್ಪ ದೂರ ಸಂಚರಿಸಿ ಅಶೋಕನಗರ ಮೂರನೇ ತಿರುವು, ಆಸ್ಪತ್ರೆ ರಸ್ತೆ ಮೂಲಕ ಶಂಕರ ಮಠವನ್ನು ತಲುಪಿದ ನಂತರ ಅಲ್ಲಿ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು.

ಅಲ್ಲಿಂದ ಮತ್ತೆ ವಿದ್ಯಾಗಣಪತಿ ದೇವಾಲಯದ ಆವರಣಕ್ಕೆ ಮರಳಿದ ನಂತರ ಪ್ರಸಾದ ವಿನಿಯೋಗ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಹೊಯ್ಸಳ ಕರ್ನಾಟಕ ಸೇವಾ ಟ್ರಸ್ಟ್ ಗೌರವಾಧ್ಯಕ್ಷರಾದ ಅಶ್ವಿನ್ ನಾರಾಯಣಸ್ವಾಮಿ, ವೇದ ಗುರುಗಳಾದ ಅನಂತನಾರಾಯಣ ಶಾಸ್ತ್ರಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಂಡ್ಯ ಪ್ರತಿನಿಧಿ ಶಂಕರನಾರಾಯಣ ಶಾಸ್ತ್ರಿ, ಮಂಡ್ಯ ಜಿಲ್ಲಾ ಬ್ರಾಹ್ಮಣ ಸಭಾದ ಕಾರ್ಯದರ್ಶಿ ಗೋಪಾಲಕೃಷ್ಣ ಶೆಣೈ, ಜಿಲ್ಲಾ ಬ್ರಾಹ್ಮಣ ಸಭಾ ನಿರ್ದೇಶಕರುಗಳಾದ ಜಿ.ವಿ.ನಾಗರಾಜು , ವೆಂಕಟೇಶ,ಶ್ರೀ ವೈಷ್ಣವ ಸಭಾದ ಬಾಲಾಜಿ, ಮುರಳೀಧರ್, ಅಖಿಲ ಭಾರತೀಯ ಬ್ರಾಹ್ಮಣ ಮಹಾ ಸಂಘದ ಅಧ್ಯಕ್ಷರಾದ ಶ್ರೀಪತಿ ಭಾರದ್ವಾಜ್, ಬ್ರಾಹ್ಮಣ ಯುವ ಸೇವಾ ಟ್ರಸ್ಟ್ ನ ಕಾರ್ಯದರ್ಶಿ ಬಾಲಾಜಿ ಕೆ.ಆರ್, ಹೊಯ್ಸಳ ಕರ್ನಾಟಕ ಸೇವಾ ಟ್ರಸ್ಟ್ ಕಾರ್ಯದರ್ಶಿ ಹೊಳಲು ರಾಘವೇಂದ್ರ , ಖಜಾಂಚಿ ಗೋಪಾಲಕೃಷ್ಣ, ಮಂಡ್ಯ ಜಿಲ್ಲಾ ಬ್ರಾಹ್ಮಣ ಸಭಾ ಮಾಜಿ ಕಾರ್ಯದರ್ಶಿ ಜೆ. ಲಕ್ಷ್ಮೀನಾರಾಯಣ, ಅದ್ವೈತ ಸಂಸ್ಥಾನಂ ನ ಕಾರ್ಯದರ್ಶಿ ಎನ್. ಗೋಪಿನಾಥ್, ಯುವ ವೇದಿಕೆಯ ಮಾಜಿ ಕಾರ್ಯದರ್ಶಿ ವಿಶ್ವನಾಥ್ ವಿಪ್ರ ಪ್ರಮುಖರಾದ ಹೊಳಲು ಮಂಜುನಾಥ್, ಜಿ.ಡಿ .ನರಸಿಂಹನ್, ಡಾ॥ಕಾಂತರಾಜು,ದೊರೆಸ್ವಾಮಿ, ಪತ್ರಕರ್ತರಾದ ಹೊಳಲು ಶ್ರೀಧರ್,ಭಾರತಿ ಅಡಿಗ, ಜ್ಯೋತಿ, ಪುಷ್ಪ, ಕಾಂತಾಮಣಿ ಸೇರಿದಂತೆ ನೂರಾರು ವಿಪ್ರ ಬಂಧುಗಳು ಭಾಗವಹಿಸಿದ್ದರು.



# ಮೇ1ರಂದು ಷಡಾಕ್ಷರದೇವ ಮಂಗಳ ಮಂಟಪ ಉದ್ಘಾಟನೆ



**ಮಂಡ್ಯ:** ಮಳವಳ್ಳಿ ತಾಲೂಕಿನ ಡಿ.ಹಲಸಹಳ್ಳಿ ಗ್ರಾಮದ ಶ್ರೀಷಡಕ್ಷರಿ ಮಠ, ದಾಸೋಹ ಮಠ, ಮಹಾಕವಿ ಶ್ರೀಷಡಕ್ಷರದೇವ ಮಂಗಳ ಮಂಟಪದ ನೂತನ ಕಟ್ಟಡಗಳ ಉದ್ಘಾಟನೆ ಹಾಗೂ ರಾಜಗೋಪುರ ಮತ್ತು ಬಸವ ಮಹಾದ್ವಾರ ಲೋಕಾರ್ಪಣೆ ಕಾರ್ಯಕ್ರಮವು ಮೇ.1ರಂದು ನಡೆಯಲಿದೆ ಎಂದು ಬಸವೇಶ್ವರ ಕೇಂದ್ರದ ತಾಲೂಕು ಅಧ್ಯಕ್ಷ ಚನ್ನಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನಕಪುರ ಶ್ರೀದೇಗುಲ ಮಠಾಧ್ಯಕ್ಷ ಶ್ರೀ.ಡಾ.ಮುಮ್ಮಡಿನಿರ್ವಾಣ ಸ್ವಾಮೀಜಿ ಹಾಗೂ ಶ್ರೀಡಾ.ಚನ್ನಬಸವ ಸ್ವಾಮೀಜಿ ನೇತೃತ್ವದಲ್ಲಿ ಏ.27ರಿಂದ 29ರವರೆಗೆ ಮಠದಲ್ಲಿ ಧಾರ್ಮಿಕ ಪೂಜಾ ವಿಧಿ ವಿದಾನಗಳು ನಡೆಯಲಿದ್ದು, ಏ.29ರಂದು ವಿಮಾನಗೋಪುರ ಕಳಶಾರೋಹಣ ಹಾಗೂ ಕುಂಭಾಭಿಷೇಕ ನಡೆಯಲಿದೆ ಎಂದರು.

ಮೇ.1ರಂದು ಧಾರ್ಮಿಕರ ಕಾರ್ಯಕ್ರಮ ನಡೆಯಲಿದ್ದು, ಸುತ್ತೂರು ಮಠದ ಶ್ರೀಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ ಆದಿಚುಂನಗಿರಿಯ ಶ್ರೀ.ಡಾ.ನಿರ್ಮಲಾನಂದನಾಥ ಸ್ವಾಮೀಜಿ ದೇಗುಲ ಮಠದ ಶ್ರೀ. ಡಾ.ಮುಮ್ಮಡಿನಿರ್ವಾಣ ಸ್ವಾಮೀಜಿ, ಸಿದ್ದಗಂಗಾ ಮಠದ ಶ್ರೀಸಿದ್ದಲಿಂಗ ಸ್ವಾಮೀಇ, ಗುರುಸಿದ್ದೇಶ್ವರ ಮಠದ ಗವಿಸಿದ್ದೇಶ್ವ ಸ್ವಾಮೀಜಿ, ವಿಶ್ವೊಕ್ಕಲಿಗ ಮಹಾಸಂಸ್ಥಾನ ಮಠದ ಶ್ರೀ. ಡಾ.ನಿಶ್ಚಲಾನಂದನಾಥ ಸ್ವಾಮೀಜಿ, ಶ್ರೀಡಾ.ಚನ್ನಬಸವ ಸ್ವಾಮೀಜಿ ಅವರು ದಿವ್ಯಸಾನಿಧ್ಯ ವಹಿಸುವರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಧಾರ್ಮಿಕ ಸಭೆ ಉದ್ಘಾಟಿಸುವರು, ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ರಾ ಜ ಗೆ ೊ ೀ ಪ್ ು ರ ವ್ ನ್ ್ು , ಶಾಸಕ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಮದ್ರ ಷಡಕ್ಷರದೇವ ಮಂಗಳ ಮಂಟಪವನ್ನು, ಶಾಸಕ ಎಂ.ಕೃಷ್ಣಪ್ಪ ದಾಸೋಹ ಭವನವನ್ನು, ಶಾಸಕ ಪ್ರಿಯಾಕೃಷ್ಣ ಶ್ರೀಷಡಕ್ಷರಿ ಗವಿಮಠವನ್ನು ಉದ್ಘಾಟಿಸುವರು. ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವ ಈಶ್ವರ್ ಬಿ.ಖಂಡ್ರೆ ಮಠದ ಕಿರು ಸಂಚಿಕೆ ಬಿಡುಗಡೆ ಮಾಡುವರು. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಪುಷ್ಪ ನಮನ ಸಲ್ಲಿಸುವರು, ರಾಜ್ಯ ವಾಯುಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ಅಧ್ಯಕ್ಷತೆ ವಹಿಸುವರು. ಮಾಜಿ ಸಚಿವ ಬಿ.ಸೋಮಶೇಖರ್, ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ, ವಿಧಾನ ಪರಿಷತ್ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ, ಮಾಜಿ ಶಾಸಕ ಡಾ.ಕೆ.ಅನ್ನದಾನಿ, ನಿವೃತ್ತ ಮುಖ್ಯ ಅಭಿಯಂತರ ಕೆ.ಸಿದ್ದರಾಜು, ಉದ್ಯಮಿ ನಿಶಾಂತ್ ಭಾಗವಹಿಸುವರು ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಹಲವು ಮಠಗಳ ಸ್ವಾಮೀಜಿಗಳು ಭಾಗವಹಿಸಲಿದ್ದು, 40 ಸಾವಿರಕ್ಕೂ ಹೆಚ್ಚು ಭಕ್ತರು ಭಾಗವಹಿಸುವ ನಿರೀಕ್ಷೆಯಿದೆ. ಆದ್ದರಿಂದ 50 ಸಾವಿರ ಮಂದಿಗೆ ದಾಸೋಹದ ವ್ಯವಸ್ಥೆ ಮಾಡಲಾಗಿದೆ. ಈ ಎಲ್ಲ ಕಟ್ಟಡಗಳ ನಿರ್ಮಾಣಕ್ಕೆ 3 ಕೋಟಿ ರೂ.ಗಳನ್ನು ವ್ಯಯಿಸಲಾಗಿದ್ದು, ರಾಜ್ಯ ಸರಕಾರದಿಂದ 25 ಲಕ್ಷ ಅನುದಾನ ನೀಡಲಾಗಿದೆ ಎಂದು ಮಾಹಿತಿ ಹಂಚಿಕೊಂಡರು.

ಗೋಷ್ಠಿಯಲ್ಲಿ ಎಚ್.ಅಶೋಕ್, ಎಂ.ಪಿ.ಬಸವರಾಜು, ನಾಗರಾಜು, ಕುಮಾರ್, ಅಶೋಕ್ ಇದ್ದರು.

# ದಿ ಆರ್ಟ್ ಆಫ್ ಲಿವಿಂಗ್ ವತಿಯಿಂದ ಸೋಮನಾಥ ಜ್ಯೋತಿರ್ಲಿಂಗ ಯಾತ್ರೆ



**ಮಂಡ್ಯ:** ದಿ ಆರ್ಟ್ ಆಫ್ ಲಿವಿಂಗ್ ವತಿ ಯಿಂದ ರಾಜ್ಯದಲ್ಲಿ ಸೋಮನಾಥ ಜ್ಯೋತಿರ್ಲಿಂಗ ಯಾತ್ರೆ ನಡೆಯುತ್ತಿದ್ದು, ಏ.27ರಂದು ಮಂಡ್ಯ ನಗರದ ಶ್ರೀ ಶಂಕರಮಠ ದೇವಸ್ಥಾನದಲ್ಲಿ ಅಂದು ಬೆಳಗ್ಗೆ 6 ರಿಂದ ರಾತ್ರಿ 8ರವರೆಗೆ ಸೋಮನಾಥ ಜ್ಯೋತಿರ್ಲಿಂಗ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಸಂಸ್ಥೆಯ ಶಿಕ್ಷಕಿ ಕವಿತ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನವರಿ ತಿಂಗಳಿನಿಂದ ರಾಜ್ಯದ ಎಲ್ಲ ಜಿಲ್ಲೆಗಳಿಗೆ ತಲುಪುವ ಉದ್ದೇಶದಿಂದ ಸೋಮನಾಥ ಜ್ಯೋತಿರ್ಲಿಂಗ ಯಾತ್ರೆ ನಡೆಸಲಾಗುತ್ತಿದೆ. ಈಗಾಗಲೇ 7 ಜಿಲ್ಲೆಗಳನ್ನು ತಲುಪಿರುವ ಜ್ಯೋರ್ತಿಲಿಂಗವು ಏ.27ರಂದು ಮಂಡ್ಯ ಸಾರ್ವಜನಿಕರ ದರ್ಶನ ನಡೆಯಲಿದ್ದು, ರುದ್ರಪೂಜೆಯಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದರು.

ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಈ ಸದಾವಕಾಶ ಬಳಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ 9632646735 ಸಂಖ್ಯೆಯನ್ನು ಸಂಪರ್ಕಿಸುವಂತೆ ಮನವಿ ಮಾಡಿದರು.

# ಕೆಯುಡಬ್ಲ್ಯೂಜೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು:** ಎಸ್ಎಸ್ಎಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ. 90ಕ್ಕೂ ಹೆಚ್ಚು ಅಂಕಗಳಿಸಿದ ಪತ್ರಕರ್ತರ ಮಕ್ಕಳ ಪ್ರತಿಭಾ ಪುರಸ್ಕಾರಕ್ಕಾಗಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ )ಅರ್ಜಿ ಆಹ್ವಾನಿಸಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ತಿಳಿಸಿದ್ದಾರೆ.

ವಿದ್ಯಾರ್ಥಿಯ ಅಂಕ ಪಟ್ಟಿಯ ನಕಲನ್ನು ಶಾಲಾ, ಕಾಲೇಜಿನ ಮುಖ್ಯಸ್ಥರಿಂದ ದೃಢೀಕರಿಸಿರಬೇಕು. ಸಂಘದ ಸದಸ್ಯರ ಆಧಾರ್ ಮತ್ತು ವಿದ್ಯಾರ್ಥಿಯ ಆಧಾರ್ ಜೆರಾಕ್ಸ್ ಮತ್ತು ಸಂಘದ ಐಡಿ ಕಾರ್ಡ್ (ಕಡ್ಡಾಯ) ಜೆರಾಕ್ಸ್ ಹಾಗೂ ವಿದ್ಯಾರ್ಥಿಯ ಭಾವಚಿತ್ರ ಸಹಿತ ಅರ್ಜಿ ಸಲ್ಲಿಸಬೇಕು. (ವಿದ್ಯಾರ್ಥಿ ಭಾವಚಿತ್ರ ಹಿಂಬದಿ ತಪ್ಪದೇ ಅವರ ಹೆಸರು ಬರೆಯಿರಿ)

ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಸಂಘವು ನಿಗಧಿಪಡಿಸಿರುವ ನಮೂನೆಯಲ್ಲಿ ಜಿಲ್ಲಾ ಸಂಘದ ದೃಢೀಕರಣದೊಂದಿಗೆ 10–5–2026 ರೊಳಗಾಗಿ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, 3ನೇ ಮಹಡಿ, ಕಂದಾಯ ಭವನ, ಕೆಜಿ ರಸ್ತೆ, ಬೆಂಗಳೂರು–09 ಇಲ್ಲಿಗೆ ತಲಪುವಂತೆ ಕಳುಹಿಸಬೇಕು.

ಅರ್ಜಿ ಮತ್ತು ಇತರೆ ಮಾಹಿತಿಗಾಗಿ ಆಯಾ ಜಿಲ್ಲಾ ಸಂಘವನ್ನು ಸಂಪರ್ಕಿಸಿ ಪಡೆಯಬಹುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಏ.29ರವರೆಗೆ ಮಳೆ ಸಾಧ್ಯತೆ

**ಬೆಂಗಳೂರು:** ರಾಜ್ಯದಲ್ಲಿ ಏ.29ರವರೆಗೆ ಹಾಗೂ ಬೆಂಗಳೂರಿನಲ್ಲಿ ಮೇ 5ರವರೆಗೆ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬಿಸಿಲ ಬೇಗೆಯಿಂದ ಬಳಲುತ್ತಿರುವ ರಾಜ್ಯದ ಜನರಿಗೆ ವರುಣದೇವ ತಂಪೆರೆಯುವ ಸಾಧ್ಯತೆಯಿದೆ. ಕರಾವಳಿ, ದಕ್ಷಿಣ ಕನ್ನಡ, ಉತ್ತರ ಕರ್ನಾಟಕ ಹಾಗೂ ದಕ್ಷಿಣ ಒಳನಾಡಿನಲ್ಲಿ ಏ.29ರವರೆಗೆ ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರಿಗರಿಗೂ ಬೆಂಕಿ ಬಿಸಿಲಿನಿಂದ ಕೊಂಚ ರಿಲೀಫ್ ಸಿಗುವ ಸಾಧ್ಯತೆಯಿದೆ. ಏ.28ರಿಂದ ಮೇ 5ರವರೆಗೆ ಭಾರೀ ಗಾಳಿ, ಮಳೆಯಾಗಲಿದೆ ಎನ್ನಲಾಗಿದೆ. ಕಳೆದ ಕೆಲ ದಿನಗಳಿಂದ ವಿಪರೀತ ಸೆಕೆ, ಏರಿದ ಉಷ್ಣಾಂಶದಿಂದ ಜನರು ಬಸವಳಿದಿದ್ದಾರೆ.

# ಜೆಡಿಎಸ್ ಮುಖಂಡರುಗಳ ಮನೆಗೆ ಹೆಚ್‌ಡಿಕೆ ಭೇಟಿ

**ಕೆ.ಆರ್.ನಗರ:** ಕ್ಷೇತ್ರದ ಸಾಲಿಗ್ರಾಮ ತಾಲೂಕಿನ ಹರದನಹಳ್ಳಿ ಗ್ರಾಮದ ಜೆಡಿಎಸ್ ಮುಖಂಡರುಗಳ ಮನೆಗೆ ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಭೇಟಿ, ಗ್ರಾಮಕ್ಕೆ ಜೆಡಿಎಸ್ ನಾಯಕರ ದಂಡೆ ಆಗಮನ.

ಹೌದು, ತಾಲೂಕಿನ ಬಹುದೊಡ್ಡ ಗ್ರಾಮವಾದ ಹರದನಹಳ್ಳಿಯ ಜೆಡಿಎಸ್ ಪಕ್ಷದ ಉಪ್ಪಾರ ಸಮಾಜದ ಪ್ರಮುಖ ಮುಖಂಡರುಗಳಾದ ಎಚ್.ಟಿ.ಅನಂತ ಮತ್ತು ಎಲ್.ಐ.ಸಿ ನಿಂಗಪ್ಪ ಅವರುಗಳ ಮನೆಗೆ ಹೆಚ್.ಡಿ.ಕುಮಾರಸ್ವಾಮಿ ಅವರು ಭೇಟಿ ನೀಡಿ ಕೆಲವು ಸಮಯ ಮನೆಯಲ್ಲಿ ಅವರೊಂದಿಗೆ ಇದ್ದು ಮಾತುಕತೆ ನಡೆಸಿ ನಂತರ ಊಟ ಮಾಡಿ ಸನ್ಮಾನವನ್ನು ಸ್ವೀಕರಿಸಿದರು.

ಈ ಬೆಳವಣಿಗೆಯು ಗ್ರಾಮದಲ್ಲಿ ಮತ್ತು ತಾಲೂಕಿನಲ್ಲಿ ರಾಜಕೀಯ ಬಿಸಿ ಬಿಸಿ ಚರ್ಚೆಯಾಗಲು ಕಾರಣವಾಗಿದ್ದು ಈ ಭೇಟಿಯ ಹಿಂದೆ ಪ್ರಮುಖ ಉದ್ದೇಶವಿದೆ ಎಂದು ಜನಸಾಮಾನ್ಯರು ಮಾತನಾಡುತ್ತಿರುವುದು ಕಂಡುಬರುತ್ತಿದೆ.

ಹೆಚ್.ಡಿ.ಕುಮಾರಸ್ವಾಮಿ ಅವರು ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಜೆಡಿಎಸ್ ಕಾರ್ಯಕರ್ತರು, ಮುಖಂಡರುಗಳು ಹಾಗೂ ಅವರ ಅಭಿಮಾನಿಗಳು ಅಪಾರ ಪ್ರಮಾಣದಲ್ಲಿ ಪಟಾಕಿಸಿಡಿಸಿ ಜಯ ಘೋಷಣೆಗಳನ್ನು ಮೊಳಗಿಸುತ್ತ ಹೂಗುಚ್ಛಗಳನ್ನು ನೀಡಿ ಸ್ವಾಗತಿಸಿದರು.

ಮಹಿಳೆಯರು ಆರತಿ ಮಾಡಿ ಹೂಮಳೆ ಸುರಿಸುವ ಮೂಲಕ ಅತ್ಯಂತ ಅಭಿಮಾನದಿಂದ ಬರಮಾಡಿಕೊಂಡಿದ್ದು ವಿಶೇಷವಾಗಿತ್ತು.

ಎಚ್.ಡಿ.ಕುಮಾರಸ್ವಾಮಿಯವರ ಈ ಭೇಟಿಯು ಗ್ರಾಮದಲ್ಲಿ ರಾಜಕೀಯ ಹೊಸ ಸಂಚಲನವನ್ನು ಉಂಟುಮಾಡಿದೆ. ವಿಧಾನಸಭಾ ಚುನಾವಣೆಗೆ ಇನ್ನೂ ಎರಡು ವರ್ಷಗಳು ಬಾಕಿ ಇರುವಾಗಲೇ ತಾಲೂಕಿನಲ್ಲಿ ರಾಜಕೀಯ ಚಟುವಟಿಕೆಗಳು ಹಾಗೂ ಬೆಳವಣಿಗೆಗಳು ನಡೆಯಲು ಆರಂಭವಾಗಿರುವುದು ಎಲ್ಲೆಡೆ ಕಂಡು ಬರುತ್ತಿದೆ.

ಕುಮಾರಸ್ವಾಮಿಯವರು ಆಗಮಿಸುತ್ತಾರೆ ಎಂಬ ವಿಷಯ ತಿಳಿಯುತ್ತಿದ್ದಂತೆ ಹರದನಹಳ್ಳಿ ಗ್ರಾಮಕ್ಕೆ ಜೆಡಿಎಸ್ ಕಾರ್ಯಕರ್ತರು, ಮುಖಂಡರುಗಳು ಹಾಗೂ ಜನಪ್ರತಿನಿಧಿಗಳು ತಂಡೋಪ ತಂಡವಾಗಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು.

ಈ ಸಂದರ್ಭದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಎಲ್ಲಾ ಗಣ್ಯರುಗಳನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಕೇಂದ್ರ ಸಚಿವರೊಂದಿಗೆ ಮಾಜಿ ಸಚಿವ ಸಾ.ರಾ. ಮಹೇಶ್, ಶಾಸಕರಾದ ಅರಕಲಗೂಡು ಕ್ಷೇತ್ರದ ಎ.ಮಂಜು, ವಿಧಾನ ಪರಿಷತ್ ಸದಸ್ಯರಾದ ಸಿ.ಎನ್. ಮಂಜೇಗೌಡ, ಕೆ.ವಿವೇಕಾನಂದ, ಪಿರಿಯಾಪಟ್ಟಣ ಕ್ಷೇತ್ರದ ಮಾಜಿ ಶಾಸಕ ಕೆ.ಮಹದೇವ್, ಟಿ ನರಸೀಪುರ ಕ್ಷೇತ್ರದ ಮಾಜಿ ಶಾಸಕ ಅಶ್ವಿನ್ ಕುಮಾರ್, ನಾಗಮಂಗಲ ಕ್ಷೇತ್ರದ ಮಾಜಿ ಶಾಸಕ ಸುರೇಶ್ ಗೌಡ, ಮಂಡ್ಯ ಜೆಡಿಎಸ್ ಮುಖಂಡ ರಾಮಚಂದ್ರೇಗೌಡ, ಚಲನಚಿತ್ರ ನಿರ್ದೇಶಕ ಪ್ರೇಮ್, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ ನಂಜಪ್ಪ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸಿ.ಜೆ.ದ್ವಾರಕೀಶ್, ಮಾಜಿ ಸದಸ್ಯ ಎಂ.ಟಿ.ಕುಮಾರ್, ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಜೆಡಿಎಸ್ ಅಧ್ಯಕ್ಷ ಮೆಡಿಕಲ್ ರಾಜಣ್ಣ ಸೇರಿದಂತೆ ಹಲವು ಗಣ್ಯರುಗಳು ಆಗಮಿಸಿದ್ದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರುಗಳಾದ ಹೆಚ್.ಟಿ.ಅನಂತ, ಲಕ್ಷ್ಮಿ ಅನಂತ, ಎಲ್.ಐ.ಸಿ ನಿಂಗಪ್ಪ, ಚಿಕ್ಕಮ್ಮನಿಂಗಪ್ಪ ಮತ್ತು ಕುಟುಂಬ ವರ್ಗದವರು, ಸ್ಥಳೀಯ ಮುಖಂಡರುಗಳು ಮತ್ತು ಗ್ರಾಮಸ್ಥರು ಸೇರಿದಂತೆ ಹಲವರು ಇದ್ದರು.



# ಮಹಿಳಾ ಮೀಸಲಾತಿ ಮಸೂದೆ ಸೋಲಿಗೆ ಕಾಂಗ್ರೆಸ್ ಕಾರಣ ಎಂಬುದು ಸುಳ್ಳಿನ ಹೇಳಿಕೆ: ಕುಸುಮಾ ಹನುಮಂತರಾಯಪ್ಪ




**ಮಂಡ್ಯ:** ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆ ಸೋಲಿಗೆ ಕಾಂಗ್ರೆಸ್ ಪಕ್ಷ ಕಾರಣವೆಂದು ದೇಶದ ಪ್ರಧಾನಮಂತ್ರಿಯಿಂದ ಹಿಡಿದು ಬಿಜೆಪಿ ನಾಯಕರೆಲ್ಲರೂ ಸುಳ್ಳಿನ ಹೇಳಿಕೆಯನ್ನು ನೀಡುತ್ತಿದ್ದಾರೆ ಎಂದು ಕಾಂಗ್ರೆಸ್ ಮಹಿಳಾ ಮುಖಂಡೆ ಕುಸುಮಾ ಹನುಮಂತರಾಯಪ್ಪ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆಯರಿಗೆ ದೇಶದಲ್ಲಿ ಸಾಮಾಜಿ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಸ್ವಾತಂತ್ರ್ಯ ದೊರೆಯುತ್ತಿರುವುದು ಕಾಂಗ್ರೆಸ್ ಪಕ್ಷದ ಕೊಡುಗೆಯಾಗಿದೆ. ಲೋಕಸಭಾ ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲಾತಿಗೂ ಹೆಚ್ಚಾಗಿ ಕ್ಷೇತ್ರ ವಿಂಗಡಣೆಯ ಉದ್ದೇಶವಿತ್ತು ಎಂದರು.

ಮಹಿಳಾ ಮೀಸಲಾತಿ ಜತೆಗೆ ಕ್ಷೇತ್ರವಾರು ವಿಂಗಡಣೆಗೆ ವಿರೋಧ ವ್ಯಕ್ತವಾಗಿ ಮಸೂದೆ ಜಾರಿ ವಿಫಲವಾಯಿತು. ಆದರೆ ಕಾಂಗ್ರೆಸ್ ಪಕ್ಷ ಮಹಿಳೆಯರ ವಿರೋಧವಿದೆ ಎಂಬ ಸುಳ್ಳಿನ ಸುದ್ದಿ ಹರಡಿದ್ದಾರೆ. ಆದರೆ 2023ರಲ್ಲೇ ಮಹಿಳಾ ಮೀಸಲಾತಿ ಬಿಲ್ ಜಾರಿಗೆ ಎಲ್ಲ ಪಕ್ಷಗಳು ಸಹಕಾರ ನೀಡಿದ್ದವು. ಆದರೆ ಎನ್‌ಡಿಎ ಸರಕಾರವು 2026ರ ನಂತರ ಜನಗಣತಿಯಾಗಿ, ಕ್ಷೇತ್ರವಾರು ವಿಂಗಡಣೆಯಾಗಿ ನಂತರ ಮಹಿಳಾ ಮೀಸಲಾತಿ ಜಾರಿ ಮಾಡುವುದಾಗಿ ಮುಂದೂಡಿದ್ದರು ಎಂದು ಹೇಳಿದರು.

ಆದರೆ ಇಂದು ತರತುರಿಯಲ್ಲಿ, ದುರುದ್ದೇಶದಿಂದ 2011ರ ಜನಗಣತಿಯಂತೆ ಬಿಲ್ ಜಾರಿ ಮಾಡುವುದಾಗಿ ಹೇಳಿ ಕ್ಷೇತ್ರವಾರು ವಿಂಗಡಣೆಗೆ ಮುಂದಾಗಿದೆ. 2016ರಿಂದಲೂ ಎನ್‌ಡಿಎ ಅಧಿಕಾದಲ್ಲಿದ್ದು, ಮಹಿಳೆಯರ ಪರ ಕಾಳಜಿಯಿದ್ದರೆ 543 ಕ್ಷೇತ್ರಗಳಲ್ಲೇ ಮಹಿಳಾ ಮೀಸಲಾತಿ ತರಬಹುದಿತ್ತು ಎಂದರು.

ಮಹಿಳಾ ಮೀಸಲಾತಿ ಬಿಲ್ ವಿಫಲವಾಗಲಿದೆ ಎಂಬುದು ಬಿಜೆಪಿ ಮೊದಲೇ ಗೊತ್ತಿತ್ತು. ಪಶ್ಚಿಮ ಬಂಗಳಾ, ತಮಿಳುನಾಡು ಸೇರಿದಂತೆ ಹಲವೆಡೆ ಚುನಾವಣೆ ನಡೆಯುತ್ತಿದ್ದು, ಕಾಂಗ್ರೆಸ್ ಪಕ್ಷ ಮಹಿಳಾ ವಿರೋಧಿ ಎಂದು ಬಿಂಬಿಸಿ ಚುನಾವಣೆ ಗೆಲ್ಲಲು ಮಹಿಳೆಯರನ್ನ ಕಾಂಗ್ರೆಸ್ ವಿರುದ್ಧ ಎತ್ತಿಕಟ್ಟುವ ಕೆಲಸ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಪಕ್ಷ ದೇಶಕ್ಕೆ ಮೊದಲ ಮಹಿಳಾ ಪ್ರಧಾನಿ, ರಾಷ್ಟ್ರಪತಿ, ಸಭಾಪತಿಗಳನ್ನು ನೀಡಿದೆ. ರಾಜೀವ್ ಗಾಂಧೀವಯವರು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಒದಗಿಸಲು ಅಡಿಪಾಯ ಹಾಕಿದವರು. ಕಾಂಗ್ರೆಸ್‌ನ ಸಂವಿಧಾನದ ಅಡಿಯಲ್ಲಿ ಕೆಲಸ ಮಾಡಿದರೆ, ಬಿಜೆಪಿ ಮನುಸ್ಮೃತಿಯ ಅಡಿಯಲ್ಲಿ ಕೆಲಸ ಮಾಡುತ್ತದೆ ಎಂದು ದೂರಿದರು.

ಬಿಜೆಪಿ ಪಕ್ಷಕ್ಕೆ ಮಹಿಳಾ ಮೀಸಲಾತಿ ಮಾಡುವ ಯಾವ ಉದ್ದೇಶವೂ ಇರಲಿಲ್ಲ. ಹಾಗಿದ್ದರೆ ಇರುವ 543 ಸ್ಥಾನಗಳಲ್ಲಿ ಮೀಸಲಾತಿ ಕೊಡಬೇಕಿತ್ತು. ಕಾಂಗ್ರೆಸ್ ಪಕ್ಷ ಹಲವು ಕಾರ್ಯಕ್ರಮಗಳನ್ನು ನೀಡಿ ಮಹಿಳೆಯರು ಸಮಾಜದಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಸಹಕಾರ ನೀಡಿದೆ ಎಂದು ನುಡಿದರು.

ಬಿಜೆಪಿ ಪಕ್ಷ ಕಾಂಗ್ರೆಸ್ ಮಹಿಳಾ ವಿರೋಧಿ ಎಂದು ಬಿಂಬಿಸುತ್ತಿದೆ. ರಾಜ್ಯದಲ್ಲೂ ಶಕ್ತಿ, ಗೃಹಲಕ್ಷ್ಮಿ ಸೇರಿದಂತೆ ಹಲವು ಯೋಜನೆಗಳನ್ನು ನೀಡಿರುವುದು ಮಹಿಳೆಯರ ಅಭಿವೃದ್ಧಿಗೆ ನೀಡಲಾಗಿದೆ. ಕೇಂದ್ರ ಸರಕಾರ ಈಗಲೇ 543 ಸ್ಥಾನಗಳಿಗೆ ಮೀಸಲಾತಿ ಜಾರಿ ಮಾಡಿದ್ದೇ ಆದರೆ ಇಂದಿಗೂ ಸಹಕಾರ ನೀಡಲು ಸಿದ್ದರಿದ್ದೇವೆ ಎಂದು ಹೇಳಿದರು. ಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಮಹಿಳಾ ಸಮಿತಿ ಜಿಲ್ಲಾಧ್ಯಕ್ಷ ಶುಭದಾಯಿನಿ, ರಾಜ್ಯ ಸಣ್ಣಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಶಾರದಾ ರಮೇಶ್, ಪಲ್ಲವಿ, ಮಂಗಳಮ್ಮ ಇದ್ದರು.

# ತುಮಕೂರಿನಲ್ಲಿ ಬೈಕ್ ಕಳ್ಳರ ಬಂಧನ : 10 ದ್ವಿಚಕ್ರ ವಾಹನಗಳ ಜಪ್ತಿ



**ತುಮಕೂರು :** ನಗರದ ವಿವಿಧ ಭಾಗಗಳಲ್ಲಿ ಸರಣಿ ಬೈಕ್ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ ಸುಮಾರು ?2.32 ಲಕ್ಷ ಮೌಲ್ಯದ ಒಟ್ಟು 10 ಬೈಕ್ ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಬಂಧಿತರನ್ನು ಮರಳೂರು ದಿಣ್ಣೆಯ ನಾಸೀಂ ಪಾಷ (18) ಮತ್ತು ಖಾದರ್ ನಗರದ ಮಹ್ಮದ್ ಅನೀಸ್ (18) ಎಂದು ಗುರುತಿಸಲಾಗಿದೆ. ಗಮನಾರ್ಹವೆಂದರೆ, ಬಂಧಿತ ಮಹ್ಮದ್ ಅನೀಸ್ ಸಶಸ್ತ್ರ ಮೀಸಲು ಪಡೆಯ (DAR) ನಿವೃತ್ತ ಎಆರ್ ಎಸ್ ಐ (ARSI)ಅವರ ಮೊಮ್ಮಗ ಎಂದು ತಿಳಿದು ಬಂದಿದೆ.


ಆರೋಪಿಗಳಿಂದ ಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳುವಾಗಿದ್ದ 4 ಬೈಕ್ ಗಳು ಹಾಗೂ ಹೊಸ ಬಡಾವಣೆ ಠಾಣಾ ವ್ಯಾಪ್ತಿಯಲ್ಲಿ ಕಳುವಾಗಿದ್ದ 6 ಬೈಕ್ ಗಳು ಸೇರಿದಂತೆ ಒಟ್ಟು 10 ದ್ವಿಚಕ್ರ ವಾಹನಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆದಿದೆ.

ತಿಲಕ್ ಪಾರ್ಕ್ ಸಿಪಿಐ ಎಫ್.ಕೆ.ನದಾಫ್, ಪಿಎಸ್ಐಗಳಾದ ಎನ್. ಮೋಹನ್, ಎಚ್. ಮಂಜುನಾಥ್, ಜಿ. ಚೇತನ್ ಕುಮಾರ್ ಮತ್ತು ಸಿಬ್ಬಂದಿಗಳನ್ನೊಳಗೊಂಡ ತಂಡವು ಆರೋಪಿಗಳನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದೆ.

# ಭಾವುಕತೆಗೆ ಬಲವಾಗಿ ನಿಲ್ಲುವ ಗಳಿಗೆಗಳು





ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.

ಮನದ ಮಾತು...

ನಾಳೆ ವಿಶ್ವ ಮಾತೃ ಭಾಷೆ ದಿನಾಚರಣೆ ಕಾಲೇಜಿಗೆ ಬರಬೇಕು ಎಂದು ಫೋನ್ ಬುಲಾವ್ ಬಂದಿತು. ಮರು ದಿವಸ ಅಡುಗೆಮನೆ ಸೇರಿಕೊಂಡವಳಿಗೆ ಮತ್ತೆ ನೆನಪಾಗಿದ್ದು 12ರ ಹೊತ್ತಿಗೆ!! ಅಡುಗೆ ಅರಮನೆಯ ಪಾರಂಪರಿಕ ಸೇವೆಯನ್ನು ಮಾಡುವಷ್ಟು ಮಾಡಿ ಮುಗಿಯಲಾರದ ಕೆಲಸಗಳನ್ನು ಬದಿಗೆ ಸರಿಸಿ ಇಚ್ಛಾಶಕ್ತಿಯಿಂದ ದೇಹವನ್ನು ಹೊರಗೆ ದಬ್ಬಿ ಅಡುಗೆ ಮನೆಯ ಬಾಗಿಲಿಕ್ಕಿ,ರೂಮಿಗೆ ಬಂದೆ.

ಯಾರಾದರೂ ನನಗೆ ಅಡುಗೆ ಕೆಲಸ ಮುಗಿತಾ ಎಂದು ಕೇಳಿದರೆ ನಾನು ಹೇಳುವುದು ನಾನೇ ಮುಗಿಸಿದೆ ಎಂದು, ಏಕೆಂದರೆ ಈ ಕೆಲಸಗಳು ಮುಗಿಯುವದೇ ಇಲ್ಲ ಅನಂತ ಆಕಾಶದಂತೆ ಸಾಗರದ ತುದಿಯಂತೆ ಅನಂತೋಪಾದಿಯಲ್ಲಿ ಅಸ್ತಿತ್ವದಲ್ಲೇ ಉಳಿದುಕೊಂಡಿರುವವು. ಈ ಗಡಿಯಾರ ದಿನವೂ ಒಂದೇ ತರಹ ಓಡುತ್ತದೆಯಾ ಅಥವಾ ನನಗೆ ಎಲ್ಲಾದರೂ ಹೋಗುವದಿದ್ದರೆ ಬೇಕಂತ ಜೋರಾಗಿ ಓಡುತ್ತದೆ ಅಂತ ನನಗೆ ಸಂಶಯ!! ಆಗಲೇ ಕೊಕ್ಕರೆಯಂತೆ ಬಾಯಿ ತೆಗೆದು ಮುಳ್ಳು ಒಂದುವರೆ ಎಂದು ತೋರಿಸುತ್ತಿತ್ತು. ಅಡುಗೆಯ ಒಗ್ಗರಣೆಗೆ ಹಾಕಿದಷ್ಟೇ ಎಣ್ಣೆ ನನ್ನ ಮುಖದಲ್ಲೂ ಬಸಿಯುತ್ತಿತ್ತು. ಅದಕ್ಕೊಂದಿಷ್ಟು ಸೋಪ್ ಹಾಕಿ ತೊಳೆದುಕೊಂಡೆ. ಮುಖವನ್ನು ಹತ್ತಿಯ ಪಂಚೆಗೆ ಮುತ್ತಿಟ್ಟು ಲಗು ಬಗೆಯಿಂದ ಕಾಟನ್ ಸೀರೆ ಒಂದು ಕಪಾಟಿನಿಂದ ಎಳೆದುಕೊಂಡೆ..ತೇವಾಂಶಕ್ಕೆ ಮುಖಕ್ಕೆ ಒಂದಿಷ್ಟು ಕ್ರಿಮ್,ಮೇಲೆ ಒಂದು ಚಿಟಿಕೆ ಪೌಂಡ್ಸ( ಅರಿಷಿಣ ದ ಲೆಕ್ಕಕೆ ಹಾಕಿ ಅಭ್ಯಾಸಬಲ) ಪೌಡರ್ , ಬಳಿದುಕೊಂಡೆ!! ಅದು ಹಚ್ಚುವದು ಚಂದ ಕಾಣುವುದಕ್ಕೋ ಅಥವಾ ಅಭ್ಯಾಸ ಬಲವೋ... ಎಲ್ಲರೂ ಹಚ್ಚುತ್ತಾರೆ ನಾನು ಹಚ್ಚಬೇಕು ಎನ್ನುವ ಸಂಕಲ್ಪವೋ ಅರ್ಥವಾಗುವುದಿಲ್ಲ.

ಅದನ್ನು ಹಚ್ಚಿಕೊಂಡ ಮೇಲೂ ಅಂತಹ ಚಂದವೇನು ಕಂಡಿಲ್ಲ ನಾನು. ಅಲ್ಲಲ್ಲಿ ಹಣುಕಿ ಇಣುಕಿ ನೋಡುವ ಬೆಳ್ಳಿಯ ರೇಖೆಗಳನ್ನು ಮುಚ್ಚಿ ಮುಚ್ಚಿಟ್ಟು, ಉಳಿದ ನಾಲ್ಕು ಕೂದಲುಗಳನ್ನು ಬಾಚಿಕೊಂಡು ನೀವಾದರೂ ಬಿಟ್ಟು ಹೋಗದಿರಿ ನನ್ನ ಶಿರವನು ಎಂದು ಬೇಡಿಕೊಳ್ಳುತ್ತಾ....ಒಗ್ಗಟ್ಟಿನಲ್ಲಿ ಬಲವಿದೆ ಎಂದು ಹಿಡಿಕೂದಲಿಗೆ ರಬ್ಬರ್ ಬ್ಯಾಂಡ್ ಸುತ್ತಿದೆ. ಬಾಚಣಿಕೆಗೆ ಅಂಟಿಕೊಂಡ ಉದುರಿದ ಕೂದಲುಗಳು, ನನ್ನದು ನಿನ್ನದು ಸಂಬಂಧ ಮುಗಿಯಿತು ಎಂದು ನಿರ್ದಯವಾದ ವಿದಾಯ ಹೇಳಿ ಡಸ್ಟ ಬೀನ್ ಸೇರಿದವು. ಬೇಕೆಂದರೂ ಅವುಗಳನ್ನು ಉಳಿಸಿಕೊಳ್ಳಲಾಗಲಿಲ್ಲ. ಒಮ್ಮೆ ಅಭ್ಯಾಸ ಬಲದಿಂದ ಕನ್ನಡಿಯಲ್ಲಿ ನೋಡಿಕೊಂಡೆ ಮತ್ತೆ ಅದೇ ನಾನು!! ನಾನು.. ನಾನೇ ಅಲ್ಲವೇ? ನನ್ನನ್ನು ನೋಡಿಕೊಂಡು, ನನಗೆ ನಾನೇ ಒಂದು ನಗು ನೀಡಿ ಮೆಚ್ಚುಗೆಯಲ್ಲಿ ಹೆಗಲು ಚೀಲವನ್ನು ಏರಿಸಿಕೊಂಡು ಹೊರಗೆ ಬಂದೆ. ಕಂಡ ಕಂಡ ಆಟೋಗಳಿಗೆ ಕೈ ಮಾಡಿದರು ಅವರಿಗೆಲ್ಲ ನಾನು ಹೋಗುವುದು ಬಿಟ್ಟು ಬೇರೆ ದಾರಿಗೆ ಹೋಗಬೇಕಿತ್ತು. ಒಂದೊಮ್ಮೆ ಅನಿಸುವುದು ಇವರದೆಲ್ಲರದು ಹುನ್ನಾರವೇ ನನ್ನ ವಿರುದ್ಧ ಎಂದು!! ಬಾರದು ಬಪ್ಪದು ಎಂಬುವಂತೆ , ಬರದವನನ್ನು ಒಪ್ಪಿಸಿ ಕಾಲೇಜಿಗೆ ಬಿಡಲು ಬೇಡಿಕೊಂಡೆ. ಹತ್ತು ರೂಪಾಯಿಗೆ ಚೌಕಾಸಿ ಮಾಡಿ ಹತ್ತು ರೂಪಾಯಿ ಕಡಿಮೆ ಮಾಡಿದ್ದಕ್ಕೆ ನಾನು ಗೆದ್ದೆ ಎಂಬ ಭಾವದಲ್ಲಿ ಆಟೋ ಹತ್ತಿ ಕುಳಿತೆ! ಆತ ಉಪಕರಿಸುವ ಎಂಬಂತೆ ನನ್ನನ್ನು ಹತ್ತಿಸಿಕೊಂಡು ದುಡ್ಡು ತೊಗೊಂಡರು ಫ್ರೀ ಬಿಟ್ಟವನಂತೆ ಮುಖ ಭಂಗಿಯಲಿ ಇದ್ದ. ಹತ್ತು ರೂಪಾಯಿ ಕಡಿಮೆ ಮಾಡಿದಕ್ಕೆ ಗೇಟಿನಮುಂದೆಯೇ ಇಳಿಸಿ ಆವರಣದೊಳಗೆ ನಡೆದುಕೊಂಡೇ ಹೊಗಲು ಹೇಳಿದ. ಮನೆಯ ಗಂಡದೇವರು ನೂರು ಸಾರಿ ಹೇಳಿದರು "ಚೌಕಾಶಿ ಬುದ್ಧಿ ಬಿಡು "ಎಂದು ಮನಸ್ಸು ಕೇಳಬೇಕಲ್ಲ.... ಅಷ್ಟಾಗಿ ಗಂಡ ಹೇಳಿದಂತೆ ಯಾವ ಹೆಂಡತಿ ಕೇಳುತ್ತಾಳೆ... ಮೂಲ ನಿಯಮಕೆ ವಿರುದ್ಧವಾದ ತತ್ವ.


ಅವಸರದಿ ಒಳಗೆ ಹೋದರೆ ಆಗಲೇ ಬಂದ ಇಬ್ಬರ ಅಥಿತಿಗಳ ಪರಿಚಯ ಆಯಿತು. ಕಾರ್ಯಕ್ರಮ ಕೂಡ ಶುರುವಾಯಿತು. ಮುಖ್ಯ ಅತಿಥಿಯಾಗಿ ಬಂದವನು ಭಾಷೆಗಳ ಉಗಮದಿಂದ ಹಿಡಿದು ಆಗಮ ನಿಗಮದ ವರೆಗೆ ಒಂದು ದೊಡ್ಡ ಇತಿಹಾಸಿಕ ಭಾಷಣವನ್ನು ಜಡಿಮಳೆಯಂತೆ ಸುರಿಸುತಿದ್ದ. ಒಮ್ಮೊಮ್ಮೆ ಸಮಯವನು ಕೊಲ್ಲುವದು ಕೂಡ ಕಷ್ಟ!! ಮಾತುಗಳೇ ಸಾಕು ಎನುವಷ್ಟು ಶಬ್ದಗಳು ಕಿವಿಗೆ ಅಪ್ಪಳಿಸುತ್ತಿದ್ದವು. ಪ್ರಶಿಕ್ಷಣಾರ್ಥಿಗಳು ಕೇಳುವಷ್ಟು ಕೇಳಿ ಸಾಕಾದೊಡನೆ ಬಸ್ಸಿನಲ್ಲಿ ಕೂತ ಪ್ರಯಾಣಿಕರಂತೆ ಅತ್ತ ಇತ್ತ ನೋಡುತ್ತಾ ಸಮಯವನು ದೂಡಲು ಯತ್ನಿಸುತ್ತಿದ್ದರು. ಎರಡೆರಡು ಬಾರಿ ಸೂಕ್ಷ್ಮವಾಗಿ ಹೇಳಿದ ಮೇಲೆ ತನ್ನ ಭಾಷಣಕ್ಕೆ ವಿದಾಯ ಹೇಳಿದ. ನನಗನಿಸಿತು ಎಲ್ಲರ ಪಾಲಿನದು ಇವನೇ ಮಾತಾಡಿಬಿಟ್ಟಿದ್ದಾನೆ ಇನ್ನು ಯಾರು ಮಾತನಾಡಲು ಏನಿದೆ ಎಂದು...ಆ ವಿಶೇಷ ಅತಿಥಿ ನನ್ನ ಪಕ್ಕಕ್ಕೆ ಕುಳಿತು ಮೊಬೈಲ್ ಸ್ಕ್ರೋಲ್ ಮಾಡುತ್ತಾ ಇನ್ನೂ ಎಷ್ಟೊಂದು ಪೇಜ್ ಗಳನ್ನು ಹೇಳುವುದಿತ್ತು ಸಮಯ ಸಾಲಲಿಲ್ಲ ಎಂದು ಗೊಣಗಿದ. ಯಾಕಾದರೂ ಝಂಡು ಬಾವ್ ಬಾಟಲಿ ಪರ್ಸಿನಲ್ಲಿ ಇಟ್ಟುಕೊಳ್ಳುವುದು ಮರೆತುಬಿಟ್ಟೆ ಎನಿಸಿತು. ಅದಾದ ನಂತರ ಮತ್ತೊಬ್ಬಳು ಮಾತನಾಡಿದರು. ಪುಣ್ಯ!!ಹತ್ತೆ ನಿಮಿಷಕ್ಕೆ ಮುಗಿಸಿದ್ದಕ್ಕೆ ಎಲ್ಲರೂ ಸೇರಿ ಒಟ್ಟಿಗೆ ನಿಟ್ಟುಸಿರಿನೊಟ್ಟಿಗೆ ಚಪ್ಪಾಳೆ ತಟ್ಟಿದರು. ಇನ್ನು ನನ್ನ ಸರದಿ! ಇನ್ನೇನು ನಾನು ಹೇಳಬೇಕಿತ್ತು ಭಾಷೆ ಎಂದರೆ ಸಂಕೇತ ಶಬ್ದ ಮುಖ ಭಾವ ಎಂದು... ಆದರೆ ನಾವು ವಿಶ್ವ ಮಾತೃಭಾಷೆ ಎಂದು ಏಕೆ ಆಚರಿಸುತ್ತೇವೆ ಇದಕ್ಕೆ ಕಾರಣವೇನು? ಪಿತೃ ಭಾಷೆ ಆಗಬಹುದಿತ್ತಲ್ಲವೇ!? ಏಕೆಂದರೆ, ಒಂದು ಮಗು ತೊಟ್ಟಿಲಲ್ಲಿ ಅಳುತ್ತಿರುತ್ತದೆ. ತಾಯಿ ಒಳಗೆ ಕೆಲಸ ಮಾಡುತ್ತಿರುತ್ತಾಳೆ ಅದು ಹಠಕ್ಕೆ ಬಿದ್ದು ಜೋರಾಗಿ ಅಳಲು ಪ್ರಾರಂಭಿಸುತ್ತದೆ. ಆಗ ತಂದೆ ರಮಿಸುತ್ತಾನೆ, ಮಗು ಸುಮ್ಮನಾಗುವುದಿಲ್ಲ , ಅಣ್ಣ ತಂಗಿ ಯಾರು ರಮಿಸಿದರೂ ಸುಮ್ಮನಾಗದ ಮಗು ಕೆಲಸದ ಗಡಿಬಿಡಿಯಲ್ಲಿ ಸೆರಗಿಗೆ ಕೈ ಒರಿಸಿಕೊಳ್ಳುತ್ತಾ , ತಾಯಿ ಬಂದು "ಹೋತು ಬಿಡು...ಏನಾತು? ಏನಾತು ನನ್ನ ಕಂದ!ಯಾರು?ಯಾರು?" ಎಂದು ಕಕ್ಕುಲಾತಿಯಿಂದ ಎತ್ತಿಕೊಳ್ಳುತ್ತಾಳೆ.ಆಗ ಮಗು ಸುಮ್ಮನೆ ಆಗುತ್ತದೆ. ಮಗುವಿಗೆ ಇಲ್ಲಿ ಶಬ್ದಗಳು ಗೊತ್ತಾ!? ಭಾವ ಗೊತ್ತಾ!? ಅದಕ್ಕೆ ಸಂಜ್ಞೆ ಮಾಡಲು ಬರುತ್ತಾ... ಇಲ್ಲ ಆದರೆ ತಾಯಿಯ ಭಾವ ಮಗುವಿನ ಹೃದಯವನ್ನು ತಲುಪುತ್ತದೆ....ಹೀಗೆ ಹೃದಯಕ್ಕೆ ಹತ್ತಿರವಾದ ಭಾವವನ್ನು ಯಾವದು ಹೊಮ್ಮಿಸುತ್ತದೆಯೋ ಅದೇ ನಮ್ಮ ಮಾತೃಭಾಷೆ. ಹಗಲಿಡೀ ಶಾಲೆ ಕಾಲೇಜುಗಳಲ್ಲಿ ಎಷ್ಟೇ ಇಂಗ್ಲಿಷ್ನಲ್ಲಿ ಓದಿರಬಹುದು, ಮಾತನಾಡಬಹುದು ಆದರೆ ಮಲಗಿದಾಗ ಕನಸು ಕಾಣುವುದು ಕನ್ನಡದಲ್ಲಿ!!ಹೀಗೆ ಮಾತೃ ಭಾಷೆ ಎಂಬುದು ನಮ್ಮ ಭಾವನೆಯ ಬೇರು. ಚೀನಾದವರು ಜಗತ್ತಿನಲ್ಲಿ ಮುಂಚೂಣಿಯಲಿ ಇರಲು ಕಾರಣ ಅವರು ಮಕ್ಕಳನ್ನು ಮಾತೃ ಭಾಷೆಯಲ್ಲಿ ಓದಿಸುತ್ತಾರೆ. ಅವರ ಯಾವುದೇ ವಸ್ತುಗಳನ್ನು ಕೊಂಡರು ಅದರ ಮೇಲೆ ಚೀನಾದ ಭಾಷೆಯಲ್ಲಿ ಬರಹಗಳಿರುತ್ತವೆ... ಹೀಗೆ ಒಂದಿಷ್ಟು ಉಪದೇಶ ನೀಡುತ್ತಾ ಒಂದು ದೃಷ್ಟಾಂತವನ್ನು ಹೇಳಿದೆ... ನಮ್ಮ ಮಾತೃ ಭಾಷೆ ಕನ್ನಡ! ಅದರ ಬೇರು ಆಳವಾಗಿ ಊರಿವೆ, ಅದರಲ್ಲೂ ನಮ್ಮ ಉತ್ತರ ಕರ್ನಾಟಕದ ಭಾಷೆ. ಒಂದು ಊರಿನಲ್ಲಿ ಒಬ್ಬ ಶ್ರೀಮಂತ ಸಾಹುಕಾರ... ಆತ ಊರಿನ ಗೌಡ. ಅವನಿಗೆ ತನ್ನ ಮಗನಿಗೆ ಇಂಗ್ಲಿಷ್ ಕಲಿಸಬೇಕು ಎಂಬ ಆಸೆ. ಆದರೆ ಅವನ ಮಗ ಎಷ್ಟೇ ಪ್ರಯತ್ನಿಸಿದರು ಎ ಟು ಝಡ್ ವರ್ಣಮಾಲೆಯ ಹೊಸ್ತಿಲು ಮುಂದೆ ದಾಟಲು ಆಗಲೇ ಇಲ್ಲ..

ಆಗ ಹಂಪಿಯನ್ನು ನೋಡಲು ಅಮೆರಿಕಾದ ನಿವಾಸಿಯಾದ ಡೇವಿಡ್ ಎಂಬಾತನು ಬರುತ್ತಾನೆ. ಹಂಪಿ ಸಾಹುಕಾರನ ಊರಿಗೆ ಹತ್ತಿರ!! ಅವನಿಗೆ ಇಳಿದುಕೊಳ್ಳಲು ಊರಿನ ಗೌಡ ಎಲ್ಲ ವ್ಯವಸ್ಥೆ ಮಾಡುತ್ತಾನೆ. ಊಟ ತಿಂಡಿಯಿಂದ ಹಿಡಿದುಕೊಂಡು ತನ್ನ ಟೊಯೋಟಾ ಗಾಡಿಯಲ್ಲಿ ಹಂಪಿಯ ಮೂಲೆ ಮೂಲೆಯನ್ನು ತೋರಿಸುತ್ತಾನೆ..ಗೌಡನ ಅತಿಥಿ ಉಪಚಾರಕ್ಕೆ ಆ ವಿದೇಶಿಗನು ಋಣ ಭಾರಕ್ಕೆ ಮಣಿದು ಹೋಗುತ್ತಾನೆ. ತುಂಬಾ ವಿನೀತನಾಗಿ ತನ್ನ ಹರುಕು ಮುರುಕು ಕನ್ನಡದಲ್ಲಿ ಕೇಳುತ್ತಾನೆ..ನೀವು ನನಗೆ ತುಂಬಾ ಚಂದವಾಗಿ ಉಪಚಾರ ಮಾಡಿದಿರಿ ನನ್ನಿಂದ ಏನು ಸಹಾಯ ಬೇಕಾದರೂ ಹೇಳಿ ಎಂದು ಹೇಳುತ್ತಾನೆ. ಆಗ ಊರಿನ ಗೌಡ ಸಂತೋಷದಿಂದ "ನನ್ನ ಮಗ ಬಸವರಾಜುಗೆ ಇಂಗ್ಲಿಷ್ ಕಲಿಸಬೇಕಂತ ಬಹಳ ಆಸೆ ನೀವು ಅವನಿಗೆ ಹೆಂಗರ ಮಾಡಿ ಇಂಗ್ಲೀಷ್ ಕಲಸರಿ!"ಅಂತ ಕೇಳ್ಕೋತಾನೆ. ಆಗ ವಿಲಿಯಂ ಒಂದು ಉಪಾಯ ಮಾಡುತ್ತಾನೆ. ಅವನು ಇಲ್ಲೇ ಇದ್ದರೆ ಇಂಗ್ಲಿಷ್ ಕಲಿಯುವುದು ಅಸಾಧ್ಯ ನನ್ನೊಡನೆ ನಮ್ಮ ದೇಶಕ್ಕೆ ಬರಲಿ... ಅಲ್ಲಿ ಕನ್ನಡ ಮಾತನಾಡುವರು ಯಾರು ಇಲ್ಲ, ಆಗ ಅವನು ತಾನಾಗೆ ಇಂಗ್ಲಿಷ್ ಕಲಿಯುತ್ತಾನೆ ಎಂದು ಆಂಗ್ಲ ಮಿಶ್ರಿತ ಕನ್ನಡದಲ್ಲಿ ಹೇಳುತ್ತಾನೆ.ಈ ವಿಚಾರಕ್ಕೆ ಒಪ್ಪಿದ ಗೌಡರು ತನ್ನ ಮಗನಿಗೆ ಮೂರು ತಿಂಗಳು ವಿದೇಶಕ್ಕೆ ಕಳಿಸುತ್ತಾರೆ. ಮೂರು ತಿಂಗಳ ನಂತರ ಮಗ ಬಸವರಾಜ ತನ್ನ ಹಳ್ಳಿಗೆ ವಾಪಸ್ ಬರುತ್ತಾನೆ , ವಿದೇಶದಿಂದ ಬಂದ ಮಗನನ್ನು ಕಂಡು ಗೌಡರಿಗೆ ತುಂಬಾ ಖುಷಿ! ಇನ್ನು ಯಾರಾದರೊಡನೆ ಅವನು ಇಂಗ್ಲೀಷ್ ಮಾತನಾಡುವುದು ನೋಡಬೇಕು ಎಂಬ ಆಸೆ ಗೌಡರಿಗೆ!! ಈತ ಊರು ತಲುಪಿ ಸ್ವಲ್ಪ ಸಮಯವಾಗಿರುತ್ತದೆ. ಆಗ ಬಸವರಾಜನಿಗೆ ಡೇವಿಡ್ ನ ಫೋನ್ ಬರುತ್ತದೆ. ಗೌಡರು ಕೌತುಕದಿಂದ ಮಗ ಇಂಗ್ಲಿಷ್ನಲ್ಲಿ ಮಾತನಾಡುವುದನ್ನು ಕೇಳಲು ಕಾತುರರಾಗಿರುತ್ತಾರೆ. ಅವನ ಮುಂದೆ ಕುರ್ಚಿ ಹಾಕಿ ಕೂಡುತ್ತಾರೆ. ಡೇವಿಡ್ ನ ಫೋನನ್ನು ಎತ್ತಿ ಬಸವರಾಜು ಹಲೋ ಎನ್ನುತ್ತಾನೆ.... ಆ ಕಡೆಯಿಂದ ಡೇವಿಡ್ "ಯಾಕ್ಲೆ ಯಾಕಲೇ ಬಸವರಾಜ್!?ಊರ್ ಮುಟ್ಟಿ ಎರಡು ತಾಸು ಆದ್ರು ಫೋನ್ ಮಾಡಕ್ ಬರಂಗಿಲ್ಲ!?"ಅಂತ ಜವಾರಿ ಉತ್ತರ ಕನ್ನಡ ಭಾಷೆಯಲ್ಲಿ ಬೈಯುತ್ತಾನೆ ಹೀಗೆ ಬಸವರಾಜ್ ಇಂಗ್ಲಿಷ್ ಕಲಿಯುವುದಿಲ್ಲ.. ಬದಲಾಗಿ ಅಲ್ಲಿ ಹೋಗಿ ಅವರಿಗೆ ಕನ್ನಡ ಕಲಿಸಿ ಬಂದಿರುತ್ತಾನೆ. ಹೀಗೆ ಜವಾರಿ ಕನ್ನಡ ಭಾಷೆಯ ಬೇರುಗಳು ಆಳವಾಗಿವೆ. ಬೇಸತ್ತ ಮಕ್ಕಳು ಒಂದಿಷ್ಟು ನಗೆಯನ್ನು ಚೆಲ್ಲಿ ಚಪ್ಪಾಳೆ ಬಾರಿಸಿದವು. ಸಿಡಿಯುವ ತಲೆಯನ್ನು ತುದಿಬೆರಳಲ್ಲೇ ಹಿಡಿದುಕೊಂಡು ಬಂದು ಕುರ್ಚಿ ಮೇಲೆ ಕೂತೆ...ಸಹಜ ವಂದನಾರ್ಪಣೆ ಮುಗಿದು ಕಾರ್ಯಕ್ರಮ ಮುಕ್ತಾಯವಾಯಿತು.ಬರುವಾಗ ಇರುವಷ್ಟೇ ಅವಸರ ಮನೆಗೆ ಹೋಗಲು ಇತ್ತು. ಮಾತಿನಲಿ ಲಘುತ್ವದ ಹಾಸ್ಯ ಇರಲಿ ಎಂದೇ ನಂಬಿದವಳಾದರೂ ದೇಹದಲಿ ಸ್ಥೂಲ ,ಜಡತ್ವದ ಹೆಜ್ಜೆ ಇಡುತ್ತಲೇ ಸಾಗಿದೆ. ಕೆಲವು

ವಿದ್ಯಾರ್ಥಿಗಳು ಕೈ ಕುಲಕಿ ನಕ್ಕರು... ಕಾಲೇಜಿನ ಕಾರಿಡಾರಿನ ತುದಿಯವರೆಗೆ ನಡೆಯುತ್ತಲೇ ಸಾಗಿ ಬಂದವಳು ಅಲ್ಲೊಂದು ಬಿಎಡ್ ಪ್ರಶಿಕ್ಷಣಾರ್ಥಿ ನಿಂತಿದ್ದ... ಹಾಗೆ ತುಸು ದೊಡ್ಡವನೇ ಇದ್ದ.. ನನ್ನನ್ನು ನೋಡಿ ನಕ್ಕ...ನಾನು ಪ್ರತಿಯಾಗಿ ನಕ್ಕೆ! ಚಂದ ಮಾತಾಡಿದ್ರ ಮೇಡಂ.. ಅಂದ. ನಾನು ಥ್ಯಾಂಕ್ಸ್ ಅಂದೆ. , ಕ್ಷಣ ತಡೆದು "ನಿಮ್ಮನ್ನು ನೋಡಿದರೆ ನಮ್ಮ ನನಗೆ ಅಮ್ಮನ ನೆನಪು ಬಂತು "ಅಂದ... ಹೇಳಿದೆನಲ್ಲ ಹಾಸ್ಯದ ಲಘುತಮಕ್ಕೆ ಜೋತು ಬಿದ್ದವಳು ತಕ್ಷಣ ತಮಾಷೆಗೆಂದು ತಲೆಯನ್ನು ಸವರಿಕೊಂಡು..."ನನ್ನ ನೋಡಿದರೆ ಅಮ್ಮನನ್ನು ನೋಡಿದಂತೆ ಆಯ್ತಾ!?ಅಷ್ಟು ವಯಸ್ಸಾದವಳ ಹಾಗೆ ಕಾಣುತ್ತೇನಾ ನಾನು!?" ಎಂದು ನಗುತ್ತಾ ಕೇಳಿದೆ. ಆದರೆ ಆ ಯುವಕ ಮಾತ್ರ ಅದೇ ಗಂಭೀರ ಭಾವದಿಂದ ಮುಖದಲ್ಲಿ ಯಾವ ಬದಲಾವಣೆ ಇಲ್ಲದೆ ದೃಢತ್ವದಿಂದ "ಇಲ್ಲ ಮೇಡಂ ನಿಮಗೆ ವಯಸ್ಸಾಗಿಲ್ಲ!! ಆದರೆ ನಾನು ಸಣ್ಣವನಿದ್ದಾಗಲೇ ನಮ್ಮ ಅಮ್ಮನನ್ನು ಕಳೆದುಕೊಂಡುಬಿಟ್ಟೆ . ಬಹುಶಃ ನಾನು 5ನೇ ತರಗತಿಯಲ್ಲಿರಬಹುದು, ಆಗ ಅಮ್ಮನ ಕೊನೆಯ ಬಾರಿ ನೋಡಿದ ನೆನಪು... ನೀವು ಮಾತನಾಡುವಾಗ ನನಗೆ ಅಮ್ಮನದೇ ನೆನಪು ಬಂತು.ಅವಳು ನಿಮ್ಮ ಹಾಗೆ ಇದ್ದಂತೆ ನೋಡಿದ ಹಳೇ...ನೆನಪು..ಮಸುಕು... ಮಸುಕು!!" ನನ್ನ ಹಾಸ್ಯವೆಲ್ಲ ಕ್ಷಣಾರ್ಧದಲ್ಲಿ ಕರಗಿ " ಐ ಯಾಮ್ ಸಾರಿ!!" ಅಂದೆ ಗೊತ್ತು ಇದು ಇಂಗ್ಲೀಷ್ ಔಪಚಾರಿಕ ಪ. ಕೆಲವು ಆಳವಾದ ನೋವುಗಳಿಗೆ ಸಾಂತ್ವನದ ಪದಗಳು ಇರುವುದೇ ಇಲ್ಲ!! ಅನುಭವಿಸಿದ ಸಂಕಟ ಅವರಿಗೆ ಗೊತ್ತು.... ಮುಖವೆತ್ತಿ ನೋಡಬೇಕೆಂದರು ಕಣ್ಣೆಲ್ಲ ಮಸುಕು ಮಸುಕು

**ಚೌಕಾಶಿ ಮಾಡದೆ ಆಟೋ ಹತ್ತಿ ಕುಳಿತು ಮನೆಗೆಬಂದೆ.**

# ಮತ್ತೇ ಬರಲಿ ಆ ಕಾಲ





ಸ್ನೇಹಾ ಆನಂದ್

ಸ್ನೇಹ ಲೋಕ

ಎಷ್ಟೋ ಸಲ ಅನಿಸುತ್ತದೆ ಕಾಲಚಕ್ರ ಮತ್ತೇ ತಿರುಗಿ ಹಳೆಯ ವಸ್ತುಗಳು ಹೊರಗೆ ಬಂದಿವೆ ಅಂತ! ಹಿತ್ತಾಳೆ, ತಾಮ್ರ, ಮಣ್ಣಿನ ಪಾತ್ರೆಯನ್ನು ಬಳಸುತ್ತಿದ್ದಾರೆ ಜನ ಆರೋಗ್ಯದ ದೃಷ್ಟಿಯಿಂದ, ಹಳೆಯ ಕಾಲದ ತಾಮ್ರ ಮತ್ತು ಹಿತ್ತಾಳೆಯ ಪಾತ್ರೆಯನ್ನು ಮನೆಯಲ್ಲಿ ಸ್ಥಳವಿಲ್ಲವೆಂದು ಕೇಜಿಯ ಲೆಕ್ಕದಲ್ಲಿ ಮಾರಿದವರು ಈಗ ಪರಿತಪಿಸುತ್ತಿದ್ದಾರೆ , ಈಗ ಒಂದು ಟ್ರೆಂಡ್ ಶುರುವಾಗಿದೆ ಮತ್ತೇ ಹಳೆಯ ಫ್ಯಾಷನ್ ಇಷ್ಟಪಡುತ್ತಿದ್ದಾರೆ ಜನರು ..

ಇಷ್ಟಾದರೂ ಸಿನಿಮಾ ಮಾತ್ರ ತನ್ನ ಒಂದು ಖದರ್ ಅನ್ನು ಪ್ರಬುದ್ಧತೆ,ಸುಂದರತೆಯನ್ನು ಮತ್ತೇ ಪಡೆಯುತ್ತಿಲ್ಲವಲ್ಲ ಎಂದೆನಿಸಿ ಮನಸ್ಸಿಗೆ ಖೇದವೆನಿಸುತ್ತದೆ!

ಏಕೆಂದರೆ ಒಂದು ಕಾಲದ ಹಳೆಯ ಹಾಡುಗಳು, ಕಥೆಗಳು ಎಷ್ಟು ಚೆಂದ, ಇವು ನಮ್ಮ ಕನ್ನಡ ಸಿನಿಮಾದ ಹಾಡುಗಳು ಎಂದು ಹೇಳಲು ಮನಸ್ಸು ಹೆಮ್ಮೆಯಿಂದ ಬೀಗುತ್ತದೆ ಈಗಲೂ! ಆ ಜಮಾನಾ ಕಳೆದು ಹೋಯ್ತಾ ಅಂತ ಕಳವಳ ಉಂಟಾಗುತ್ತದೆ ಒಂದೊಂದು ಸಲ!

ಬಿಸಿಲಾದರೇನು ಮಳೆಯಾದರೇನು, ಜೊತೆಯಾಗಿ ಇಂದು ನಾನಿಲ್ಲವೇನು! ಎನ್ನುವ ಹಾಡಿನಲ್ಲಿ ಎಷ್ಟು ಚೆಂದದ ಪ್ರೀತಿಯ ಅಭಯ ಹಸ್ತವಿತ್ತು! ಅದೇ ರೀತಿ ಸೂರ್ಯಂಗೂ ಚಂದ್ರಂಗೂ ಬಂದಾರೆ ಮುನಿಸು,ನಗುತಾದ ಭೂತಾಯಿ ಮನಸು, ಅಂತ ಹಾಡಿದ ಹಾಡಿನ ಮಾಧುರ್ಯಕ್ಕೆ ನಿಜ ಜೀವನದಲ್ಲಿ ಬೇರ್ಪಟ್ಟ ಎಷ್ಟೋ ಜೋಡಿಗಳು ಮತ್ತೇ ಒಲವಿನಿಂದ ಒಂದಾಗಿರಬಹುದು!

ತನು ನಿನ್ನದು, ಈ ಮನ ನಿನ್ನದು, ನನಗಾಗಿ ಇಂದೇನಿದೆ ಈ ಜೀವ ಎಂದೆಂದು ನಿನದಾಗಿದೆ ಎನ್ನುವ ಒಲವ ತುಂಬಿದ ಸಮರ್ಪಣಾ ಭಾವದ ಈ ಹಾಡು ಒಂದು ಸ್ಫೂರ್ತಿಯನ್ನು ತುಂಬಿರಬಹುದು ಪ್ರೇಮದ ಕಾಣಿಕೆಯಾಗಿ! ಹೂವೊಂದು ಬಳಿ ಬಂದು ತಾಕಿತು ಎನ್ನೆದೆಯಾ! ಎಂದು ಹಾಡಿದ ಹಾಡು ಮದುವೆಯಾದ ಹೊಸ ಜೋಡಿಯ ಮನಸ್ಸಿಗೆ ಹಿತವಾದ ಮುದ ಕೊಟ್ಟಿರಬಹುದು! ಎಲ್ಲೆಲ್ಲಿ ನೋಡಲಿ ನಿನ್ನನ್ನೇ ಕಾಣುವೆ , ಕಣ್ಣಲ್ಲಿ ತುಂಬಿರುವೆ ಎಂದಾಗ ಮೌನದ ಮಾತಿಗೆ ಪ್ರೀತಿಯ ಲೇಪನ! ಹಾಡು,ಹಾಡು ಹಳೆಯದಾದರೇನು ಭಾವ ನವನವೀನ ಅಲ್ಲವೇ! ದೂರದ ಊರಿಂದ ಹಮ್ಮೀರ ಬಂದಾ, ಜರತಾರಿ ಸೀರೆ ತಂದಾ,ಅದರೊಳಗೆ ಇಟ್ಟನಿ ಈ ನನ್ನ ಮನಸನ್ನ ಜೋಪಾನ ಜಾಣೆ ಎಂದಾ, ಎನ್ನುವ ಹಾಡು ಹೃದಯದ ಬಡಿತ ಜಾಸ್ತಿ ಮಾಡುತಿತ್ತು ಯುವತಿಯರಿಗೆ!

ಬಣ್ಣಾ ನನ್ನ ಒಲವಿನ ಬಣ್ಣ, ನನ್ನ ಬದುಕಿನ ಬಣ್ಣ ಎನ್ನುವ ಹಾಡು ಪ್ರೀತಿಯ ಬಣ್ಣವನ್ನು ಬಂಧಿಸಿಟ್ಟಿತ್ತು ಹುಡುಗಿಯರ ಕಣ್ಣಂಚಿನಲ್ಲಿ!

ಅದೇ ರೀತಿ ನಿಧಾನವಾಗಿ ಜನಗಳ ಅಭಿರುಚಿ ಬದಲಾದಂತೆ, ಸಾಹಿತ್ಯದಲ್ಲಿ, ರಾಗ ಸಂಯೋಜನೆಯಲ್ಲಿ, ಹಿನ್ನೆಲೆ ಸಂಗೀತದಲ್ಲಿ ಸಾಕಷ್ಟು ಬದಲಾವಣೆ ಕಂಡರೂ, ಹಾಡಿನ ಮಾಧುರ್ಯತೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲಿಲ್ಲ! ಹಾಡಲ್ಲಿ ಇರುವ ಆ ಒಂದು ಪದಗಳ ಗೌಪ್ಯತೆಯನ್ನು ಅರ್ಥಮಾಡಿಕೊಂಡಾಗ ಮನಸ್ಸು ಪ್ರೀತಿಯ ಮಾಯಾಲೋಕದಲ್ಲಿ ತೇಲಾಡಿದ ಭಾವ!

ತುಂತುರು ಅಲ್ಲಿ ನೀರ ಹಾಡು ಕಂಪನ ಇಲ್ಲಿ ಪ್ರೀತಿ ಹಾಡು, ಎನ್ನುವ ಸುಂದರ ಹಾಡು ಮೈಮನದಲ್ಲಿ ನವಿರಾದ ಕಂಪನ ತಂದಿರಬಹುದು ಹೊಸ ಜೋಡಿಯಾಗುವ ಕನಸು ಕಾಣುತ್ತಿರುವ ತರುಣ ತರುಣಿಯರಿಗೆ !

ಅದೇ ರೀತಿಯ ಇನ್ನೊಂದು ಹಾಡು,

ಮಳೆ ನಿಂತು ಹೋದ ಮೇಲೆ ಹನಿಯೊಂದು ಮೂಡಿದೆ ಎನ್ನುವ ಈ ಹಾಡಿನ ಮಾಧುರ್ಯವಂತೂ ನೋವಿನಲ್ಲೂ ಪ್ರೀತಿಯ ಆ ಸೆಳೆತವನ್ನು ತಂದು ಸವಿ ಜೇನು ಸವಿದಂಥ ರೀತಿಗೆ ಫಿದಾ ಆದವರಿಲ್ಲ! ಒಂದೊಂದು ಹಾಡುಗಳು ಎಷ್ಟು ದಿನ, ವರ್ಷಗಳ ನಂತರ ಗುನುಗಿಸಿದರೂ ಮನಸ್ಸಿಗೆ ಒಂದು ರೀತಿಯ ಹಿತವಾದ ತಂಪಾದ ಬೆಳದಿಂಗಳಂತೆ! ಇಂತಹ ನೂರಾರು ಎವರ್ಗ್ರೀನ್ ಹಾಡು ಕನ್ನಡದಲ್ಲಿ ಹುಟ್ಟಿವೆ!

ಇನ್ನು ನಮ್ಮ ಕರುನಾಡು ಅಭಿಮಾನ ಪಡುವಂತಹ ನಾವಾಡುವ ನುಡಿಯೇ ಕನ್ನಡ ನುಡಿ, ನಾವಿರುವ ತಾಣವೇ ಗಂಧದ ಗುಡಿ, ಅಂದದ ನುಡಿ, ಶ್ರೀಗಂಧದ ಗುಡಿ ಎನ್ನುವ ಹಾಡು ಎಷ್ಟು ಸುಮಧುರ! ಇದೇ ನಾಡು ಇದೇ ಭಾಷೆ ಎಂದೆಂದೂ ನನ್ನದಾಗಿರಲಿ ಎಂದಾಗ ಮನಸ್ಸು ಹೂವಿನಂತೆ ಹಗುರ! ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು ಎಂದಾಗ ಹೌದು ಖಂಡಿತ ಎನಿಸುತ್ತದೆ! ಕನ್ನಡ ನಾಡಿನ ಜೀವ ನದಿ ಕಾವೇರಿ ಎಂದಾಗ ನೀರನ್ನು ಕಣ್ಣಿಗೊತ್ತಿಕೊಳ್ಳುವ ಭಕ್ತಿಯ ಭಾವನೆ, ಕನ್ನಡ ನಾಡಿನ ವೀರರ ಮಣಿಯಾ ಗಂಡು ಭೂಮಿಯ ವೀರ ನಾರಿಯಾ ಚರಿತೆಯ ನಾನು ಹಾಡುವೆ ಎನ್ನುವ ಹಾಡು ಹೆಣ್ಣು ಮಕ್ಕಳಿಗೆ ಹೆಮ್ಮೆಯ ಕಿರೀಟ ತೊಡಿಸಿದ ಹಾಗೆ!

ಕರು ನಾಡು ತಾಯಿ ಸದಾ ಚಿನ್ಮಯಿ ಆಹಾ ಎಷ್ಟು ಚೆಂದ! ಹಿಂದೂಸ್ತಾನವು ಎಂದೂ ಮರೆಯದ ಭಾರತ ರತ್ನವು ನೀನಾಗು ಎನ್ನುವ ಹಾಡು ಕೇಳಿದರೆ ಮನ ತುಂಬಿ ಬರುತ್ತದೆ ದೇಶ ಭಕ್ತಿಯಿಂದ !

ಹೀಗೆ ಬೇಕಾದಷ್ಟು ದೇಶ ಹಾಗು ನಾಡ ಭಕ್ತಿಯ ಹಾಡು ಕೇಳಿ ಮನಸ್ಸು ಧನ್ಯತೆಯನ್ನು ಅನುಭವಿಸಿತ್ತು!

ಆದರೆ ಈಗಿನ ಚಿತ್ರದಲ್ಲಿ ಆ ಮಾಧುರ್ಯವಿಲ್ಲ , ಹಾಡಿನಲ್ಲಿ ಪ್ರೀತಿಯ ನವಿರಾದ ಸೆಳೆತವಿಲ್ಲ, ಕಥೆಯಂತೂ ನಿಂತ ನೀರಿನಂತೆ, ಅದಕ್ಕೆ ಅರ್ಥವೇ ಇರುವುದಿಲ್ಲ, ಅಬ್ಬರದ ಹಾಡು, ಅಬ್ಬರದ ಫೈಟಿಂಗ್ ಇಷ್ಟೇ, ಕಥೆಯ ಮಾತಿನಲ್ಲಿ( ಡೈಲಾಗ್ ) ತೂಕವಿರುವುದಿಲ್ಲ, ಬಟ್ಟೆಯ ಪರಿಜ್ಞಾನವಿಲ್ಲ, ಆಗೀನ ಕ್ಲಬ್ ಡ್ಯಾನ್ಸರ್ ಈಗೀನ ಹೀರೊಯಿನ್ ಅನಿಸುತ್ತೆ !ಡಬಲ್ ಮೀನಿಂಗ್ ಮಾತು, ಅತಿ ಕೆಟ್ಟ ಹಾಸ್ಯ!

ಇದಕ್ಕಾಗಿ ನಾವು ಸಾವಿರಾರು ರೂಪಾಯಿ ದಂಡ ಬಡಿದು ಮಾಲ್ ಗೆ ಹೋಗಿ ಹೊರಗೆ ಸಿಗುವ ನಲವತ್ತು ರೂಪಾಯಿಯ ಪಾಪ್ಕಾರ್ನ್ ಗೆ ಮುನ್ನೂರು ರೂಪಾಯಿ ಕೊಟ್ಟು, ಸ್ವಲ್ಪವೂ ಮುದವಿಲ್ಲದ ಸಿನಿಮಾದ ಅಬ್ಬರಕ್ಕೆ ತಲೆನೋವು ಬರಿಸಿಕೊಂಡು ಮನೆಯಲ್ಲಿ ಅಡುಗೆ ಮಾಡುವ ಮೂಡಿಲ್ಲದೆ ಹೊರಗೆ ತಿಂದು ಬರುವ ಅನಿವಾರ್ಯತೆ!

ಅದರ ಬದಲು ಮುನ್ನೂರು,ನಾನ್ನೂರು ರೂಪಾಯಿ ಕೊಟ್ಟರೆ ತಿಂಗಳು ಪೂರ್ತಿ ನೋಡುವ ನೆಟ್ ಫ್ಲಿಕ್ಸ್, ಪ್ರೈಮ್ ವೀಡಿಯೋ ಮುಂತಾದ ಆನ್ಲೈನ್ ಮಾಧ್ಯಮಗಳೇ ಸರಿ ನಮಗೆ! ಇಷ್ಟ ಆದ್ರೆ ನೋಡ್ತೀವಿ, ಕಷ್ಟವಾದರೆ ಬಿಡ್ತೀವಿ ಅಷ್ಟೇ ಅಲ್ವಾ ಸಿಂಪಲ್!

ಮುಂದಿನ ದಿನಗಳಲ್ಲಾದರೂ ಕನ್ನಡ ಸಿನಿಮಾ ನೋಡಲು ಥೀಯೇಟರ್ ಹೋದರೆ ಹಳೆಯ ಕಾಲ ಮತ್ತೆ ಬಂದಿತು ಅನಿಸುವಂತಿರಬೇಕು, ಕುಟುಂಬದವರೆಲ್ಲರೂ ಕುಳಿತು ಮುಜುಗರ ಪಡದೆ ಖುಷಿ ಖುಷಿಯಿಂದ ಚಿತ್ರ ವೀಕ್ಷಿಸುವಂತಿರಬೇಕು!

ಆಗಿನ ನಟಿಯರು ತುಂಬು ಸೆರಗು ಹೊದ್ದು ಮುಖದಲ್ಲಿ ತೋರಿಸುವ ನಾಚಿಕೆಯಿಂದ ಕೆಂಪಾದರೆ ರಸಿಕರ ಮನ ಕೆಂಪಾದವೋ ಎಲ್ಲಾ ಕೆಂಪಾದವೋ! ಎನ್ನುವಂತೆ ಹೂವು ಅರಳಿದ ಹಾಗೆ ತನು ಮನಕ್ಕೆ ಚೆಂದದ ಭಾವ, ಸಿನಿಮಾ ನೋಡಿ ಸಂತೃಪ್ತಿಯಿಂದ, ಸಂತೋಷದಿಂದ ತಮ್ಮ ಮನೆ ಸೇರಿಕೊಳ್ಳುತಿದ್ದರು ಅದೇ ಗುಂಗಿನಲ್ಲಿ ವೀಕ್ಷಕರು!

ಈಗ ಹೀರೊಯಿನ್ ಅರ್ಧಂಬರ್ಧ ಬಟ್ಟೆ ಹಾಕಿ ಕುಣಿದರೆ ಮಾತ್ರ ಸಿನಿಮಾ ಹಿಟ್ ಆಗುತ್ತದೆ ಎನ್ನುವ ಅಪನಂಬಿಕೆ!

ಈ ಸಿನಿಮಾದ ಕಥೆಯಲ್ಲಿ ಯಾವ ವಿಷಯವಿತ್ತು, ತಾತ್ಪರ್ಯವಿತ್ತು, ಎನ್ನುವ ಗೊಂದಲ ಮನಸ್ಸಿಗೆ ಹುಟ್ಟುತ್ತದೆ ! ಸಿನಿಮಾ ಹೇಗಿತ್ತು ಅಂತ ಯಾರಾದರೂ ಕೇಳಿದರೆ ಒಂದು ಸಲ ನೋಡಿದರೆ ನೋಡಬಹುದೇನೋ !ಎಂದು ಅನುಮಾನ ವ್ಯಕ್ತಪಡಿಸುತ್ತೇವೆ ಪೂರ್ತಿಯಾಗಿ ಸರಿಯಿಲ್ಲ ಎಂದು ಹೇಳಲು ಸಂಕೋಚಪಟ್ಟು ಕೊಳ್ಳುವ ಮನಸ್ಥಿತಿ ??


ಆಗಿನ ಕಾಲದ ಲಕ್ಷ್ಮಿ, ಸರಿತಾ, ಗೀತಾ, ಮಾಧವಿ, ಆರತಿ,ಮಹಾಲಕ್ಷ್ಮಿ, ಸುಹಾಸಿನಿ


ಇವರುಗಳ ಅದ್ಭುತ ನಟನೆ ಕಣ್ಣಲ್ಲೇ ತೋರುವ ಸುಂದರ ಹಾವಭಾವ ನೋಡಿದರೆ ಸಾಕು ಜನ ಅಲ್ಲೇ ಫಿದಾ ಆಗಿ ಸಿಳ್ಳೆ ಹಾಕುತ್ತಿದ್ದರು ಅಂತಹ ನಟಿ ನಟಿಯರು ಅವರು, ಆಗಿನ ಮಾತಿನ ವೈಖರಿ, ಕೋಗಿಲೆ ಧ್ವನಿಯಂತೆ ಕೇಳುವ ಆ ಸುಮಧುರ ಗಾನ, ಅತಿ ಮಧುರ ಹಿನ್ನೆಲೆ ಸಂಗೀತ ಈಗ ಮರುಕಳಿಸಬಾರದೆ ಎಂದೆನಿಸುತ್ತದೆ!

ಸನಾದಿ ಅಪ್ಪಣ್ಣ, ಗಂಧದ ಗುಡಿ, ನಾಗರಹಾವು, ಮಾನಸ ಸರೋವರ, ಬಂಧನ, ಪ್ರೇಮಲೋಕ, ರಾಮಾಚಾರಿ, ನಮ್ಮೂರ ಮಂದಾರ ಹೂವೇ, ಸ್ಪರ್ಶ, ಮಿಲನ ಹೀಗೆ ಇನ್ನು ಎಷ್ಟೋ ಸಿನಿಮಾಗಳು ಎಷ್ಟು ಸೂಪರ್ ಹಿಟ್ ಆದವು ಒಂದು ಕಾಲದಲ್ಲಿ ನೆನಪಿಸಿ ಕೊಳ್ಳುತ್ತಾ ಹೋದರೆ ಬೇಕಾದಷ್ಟಿವೆ ಅಲ್ಲವೇ! ಸಿನಿಮಾದ ಹೆಸರುಗಳೇ ಮನಸ್ಸಿಗೆ ಉಲ್ಲಾಸ ತರುತ್ತವೆ ಒಂಥರಾ!

ಮುಂದಿನ ದಿನಗಳಲ್ಲಿ ನಮ್ಮ ಕನ್ನಡ ಸಿನಿಮಾ ಇದು ಎಂದು ನಾವು ಅಭಿಮಾನದಿಂದ ನುಡಿಯುವ ಭಾಗ್ಯ ಮತ್ತೇ ನಮಗೆ ಸಿಗಲಿ, ಒಳ್ಳೆಯ ನಟಿ ನಟಿಯರಿಗೆ ಅವಕಾಶಗಳು ಸಿಗಲಿ, ಕನ್ನಡದ ಶುದ್ಧ ಉಚ್ಚಾರಣೆಯ ಸೊಗಸಿರಲಿ, ಹಿನ್ನೆಲೆ ಸಂಗೀತ ಮಾಧುರ್ಯ ತುಂಬಲಿ,ಗಾಯನ ಇಂಪಾಗಿ, ನಟನೆ ಮೃದುವಾದ ವೀಣೆ ನುಡಿಸಲಿ, ಚೆಂದದ ವಸ್ತ್ರ ವಿನ್ಯಾಸಕರು ಬೆಳಕಿಗೆ ಬರಲಿ ಎಂದು ಆಶಿಸುತ್ತಾ ಆ ಕಾಲ ಮತ್ತೇ ಆದಷ್ಟು ಬೇಗನೆ ಕೂಡಿ ಬರಲಿ ಎಂದು ಮನಸ್ಸು ಬಯಸುತ್ತಿದೆ!

# " ಸರಳತೆಯೇ ಸೌರಭ "




ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 06

ಇಂದಿನ ಕಾಲದಲ್ಲಿ ಹೆಚ್ಚಿನ ಹಣ ಅಥವಾ ಆಡಂಬರದ ಜೀವನವೇ ಶ್ರೇಷ್ಠ ಎಂದು ಅನೇಕರು ಭಾವಿಸುತ್ತಾರೆ. ಆದರೆ,ಒಬ್ಬ ವ್ಯಕ್ತಿಯ ನಿಜವಾದ ಸೌಂದರ್ಯ ಇರುವುದು ಆತನ ಬಟ್ಟೆಯಲ್ಲಲ್ಲ,ಬದಲಿಗೆ ಆತನ ನಡೆ–ನುಡಿಯ ಸರಳತೆ ಯಲ್ಲಿ. ಸರಳವಾಗಿರುವುದು ಎಂದರೆ ಅದು ನಮ್ಮ ಸಂಸ್ಕಾರದ ಗುರುತು. ಅಂತಹ ವ್ಯಕ್ತಿಗಳು ಯಾರಿಗೂ ಹೊರೆಯಾಗದೆ ಎಲ್ಲರಿಗೂ ಆಪ್ತರಾಗುತ್ತಾರೆ.

ಸರಳತೆಗೆ ಉದಾಹರಣೆ ಎಂದರೆ ಅಣ್ಣಾವ್ರು.ಚಿತ್ರೀಕರಣದ ಸಮಯದಲ್ಲಿ ಅವರಿಗೆ ದೊಡ್ಡ ಹೋಟೆಲ್‌ಗಳಿಂದ ಊಟ ತರಿಸುವ ವ್ಯವಸ್ಥೆ ಇರುತ್ತಿತ್ತು. ಆದರೆ,ಅವರು ಅದನ್ನು ನಿರಾಕರಿಸುತ್ತಿದ್ದರು.ಅಲ್ಲಿನ ಸಾಮಾನ್ಯ ಕೆಲಸಗಾರರಿಗೆ ಯಾವ ಅನ್ನ–ಸಾರು ಇರುತ್ತಿತ್ತೋ,ಅದನ್ನೇ ತಮಗೂ ನೀಡುವಂತೆ ಹೇಳುತ್ತಿದ್ದರು. ಎಲ್ಲರ ಜೊತೆ ಮಣ್ಣಿನ ನೆಲದ ಮೇಲೆ ಕುಳಿತು ಹರಟುತ್ತಾ ಊಟ ಮಾಡುತ್ತಿದ್ದರು.ನಾವೆಲ್ಲರೂ ಒಂದೇಎನ್ನುವ ಅವರ ಈ ಗುಣವೇ ಅವರನ್ನು ಕೋಟ್ಯಂತರ ಜನರ ಮನಸ್ಸಿನಲ್ಲಿ ಡಾ.ರಾಜಕುಮಾರ್ ಇವರನ್ನು ದೇವತಾ ಮನುಷ್ಯನನ್ನಾಗಿ ಮಾಡಿತು.

ಗೆಳೆಯರೇ,ಜೀವನದಲ್ಲಿ ನೀವು ಎಷ್ಟೇ ದೊಡ್ಡ ಸಾಧನೆ ಮಾಡಿ,ಎಷ್ಟೇ ಹಣ ಗಳಿಸಿ,ಆದರೆ ನಿಮ್ಮಲ್ಲಿರುವ ವಿನಯ ಮತ್ತು ಸರಳತೆಯನ್ನು ಮಾತ್ರ ಬಿಡಬೇಡಿ.ಅಹಂಕಾರ ಮನುಷ್ಯನನ್ನು ದೂರ ಮಾಡುತ್ತದೆ, ಆದರೆ ಸರಳತೆ ಎಲ್ಲರನ್ನೂ ಹತ್ತಿರ ತರುತ್ತದೆ.ಅಸಾಮಾನ್ಯವಾಗಿ ಬೆಳೆದು ಸಾಮಾನ್ಯರಂತೆ ಬದುಕುವುದು ಶ್ರೇಷ್ಠ ವ್ಯಕ್ತಿತ್ವದ ಲಕ್ಷಣ.ನಿಮ್ಮ ಈ ಸರಳತೆಯೇ ನಿಮ್ಮ ಬದುಕಿನ ಸುಗಂಧವಾಗಲಿ.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,